
ಲಂಕೇಶ್

ಜುಲೈ 15, 2009 ರೂ. 12/-

ರಹಮತ್ ತರೀಕೆರೆ ಹೊಸ ಕಾಲಂ





ಹುಚ್ಚನ ಅಂತರಾಳ



ಶೋಭಾ ಶಾಪಿಂಗ್ ಶೋಕಿ



ಮನೋರೋಗಿ ನಾರಾಯಣಾಚಾರಿ





ಕೆಎಂಎಫ್

ರೇವಣ್ಣ ವಿರುದ್ಧ ರೆಡ್ಡಿ ದಾಳಿ

- ಮೂಡಿಗೆರೆ ಚೆಡ್ಡಿಗಳಿಂದ ಪೊಲೀಸರಿಗೆ ಗೂಸಾ
- ಹುಬ್ಬಳ್ಳಿ-ಧಾರವಾಡ ಪೊಲೀಸ್ ಹುದ್ದೆ ಹರಾಜಿಗೆ

ಯುನೀಕ್ ಐಡೆಂಟಿಟಿ ಕಾರ್ಡ್:

ರೇಷನ್ ಕಾರ್ಡ್ ಕೊಡದ ಸರ್ಕಾರ ಐಡೆಂಟಿಟಿ ಕಾರ್ಡ್ ಕೊಡುತ್ತಿರುವುದೇಕೆ?

ಯುಪಿಎ ಸರ್ಕಾರ ಕೊಟ್ಟ ನೂರಾರು ಭರವಸೆಗಳನ್ನು ನೂರೇ ದಿನಗಳಲ್ಲಿ ಈಡೇರಿಸುವ ಭ್ರಾಂತಿ ಮೂಡಿಸುವಂತೆ ಕೇಂದ್ರ ಸರ್ಕಾರದ ಪ್ರತಿಯೊಂದು ಇಲಾಖೆಗಳು ತಮ್ಮ ತಮ್ಮ ನೂರು ದಿನಗಳ ಅಜೆಂಡಾವನ್ನು ಘೋಷಿಸುತ್ತಿವೆ. ಅವೆಲ್ಲಾ ಎಷ್ಟು ಅನುಷ್ಠಾನಕ್ಕೆ ಬರುತ್ತವೆ ಎಂಬುದು ಗೊತ್ತಿರುವ ವಿಷಯವೇ ಆದರೂ ಸಕಲ ಭಾರತೀಯರಿಗೂ ಒಂದು ವಿಶಿಷ್ಟ ಐಡೆಂಟಟಿ ಕಾರ್ಡ್ ಕೊಡುವ ಯೋಜನೆಯಂತೂ ಹೆಚ್ಚೂಕಡಿಮೆ ಸಮರೋಪಾದಿಯಲ್ಲಿ ಸರ್ಕಾರ ಜಾರಿಗೆ ಬಾರುತ್ತಿದೆ. ತಾವು ಗೆದ್ದು ಬಂದರೂ, ಬರದಿದ್ದರೂ ಜಾರಿಗೆ ಬರಲೇಬೇಕು ಎಂದು ಯುಪಿಎ ಹಠ ಹಿಡಿದಿದ್ದ ಕೆಲವೇ ಯೋಜನೆಗಳಲ್ಲಿ ಇದೂ ಒಂದು. ಅದಕ್ಕಾಗಿಯೇ ಕಳೆದ ಬಜೆಟ್ಟಿನಲ್ಲೇ ಈ ಬಾಬತ್ತಿಗೆ 100 ಕೋಟಿ ರೂ.ಗಳನ್ನು ಎತ್ತಿಡಲಾಗಿತ್ತು. ಈ ಬಗೆಯ ಒಂದು ಪ್ರಸ್ತಾಪವನ್ನು 2002ರಲ್ಲೇ ಎನ್‌ಡಿಎ ಸರ್ಕಾರವೇ ಮುಂದಿಟ್ಟಿದ್ದರಿಂದ ಈ ಯೋಜನೆಗೆ ಅಧಿಕೃತ ವಿರೋಧವೂ ಇಲ್ಲ!

ಸರ್ಕಾರದ ಪ್ರಕಾರ ಈ ಯೋಜನೆ ಜಾರಿಗೆ ಬಂದರೆ ಎಲ್ಲರಿಗೂ ಸುಲಭವಾಗಿ ರೇಷನ್ ಕಾರ್ಡ್ ಸಿಗುತ್ತದೆ, ಆಸ್ಪತ್ರೆ ಸೌಲಭ್ಯ ಸಿಗುತ್ತದೆ, ಸರ್ಕಾರದ ಹಲವಾರು ಜನೋಪಯೋಗಿ ಯೋಜನೆಗಳು ಜನರಿಗೆ ಸುಲಭವಾಗಿ ದಕ್ಕುತ್ತದೆ; ಸರ್ಕಾರ ಜನರಿಗೆ ಏನು ಬೇಕು ಎಂದು ಅರ್ಥಮಾಡಿಕೊಂಡು ಇನ್ನೂ ಹಲವಾರು ಯೋಜನೆಗಳನ್ನು ರೂಪಿಸಲು ಅನುಕೂಲವಾಗುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ಈ ಕಾರ್ಡ್ ಇದ್ದರೆ ಸಾಕು ಇನ್ನುಮುಂದೆ ಭಯೋತ್ಪಾದಕರು ಈ ದೇಶದ ಮೇಲೆ ಹಲ್ಲೆ ಮಾಡಲು ಸಾಧ್ಯವಾಗುವುದಿಲ್ಲ ಎಂದು ಸರ್ಕಾರ ಹೇಳುತ್ತಿದೆ. ಸದ್ಯಕ್ಕೆ ಈ ದೇಶಕ್ಕೆ ಬೇಕಿರುವ ಮಳೆ ಬೆಳೆಯನ್ನು ಹೊರತುಪಡಿಸಿ ಮಿಕ್ಕೆಲ್ಲವನ್ನೂ ಈ ಕಾರ್ಡೇ ಕೊಡುತ್ತದೆ ಎಂದು ಸರ್ಕಾರ ಮತ್ತು ಪತ್ರಿಕೆಗಳು ಪ್ರಚಾರ ಮಾಡುತ್ತಿವೆ. ಅಂದರೆ ಸಾರಾಂಶದಲ್ಲಿ ಈ ದೇಶದ ಪ್ರಗತಿಗೆ ದೊಡ್ಡ ಅಡ್ಡಿಯಾಗಿದ್ದದ್ದೇ ಈ ಯುನಿಕ್ ಐಡೆಂಟಟಿ ಕಾರ್ಡ್ ಇಲ್ಲದಿದ್ದುದು ಎನ್ನುತ್ತಿದೆ ಈ ಪ್ರಚಾರಗಳು. ಅದಕ್ಕೆಂದೇ ಸರ್ಕಾರದ ಯಾವ ಒಂದು ಇಲಾಖೆಗೂ ನೀಡದಷ್ಟು ಈ ಬಾಬತ್ತಿಗೆ ಎತ್ತಿಡಲಾಗಿದೆ. ಅದೂ ಎಷ್ಟು? ಒಂದು ಲಕ್ಷದ ಐವತ್ತು ಸಾವಿರ ಕೋಟಿ ರೂಪಾಯಿಗಳು!!! ಅಂದರೆ ಎಷ್ಟು? ಕರ್ನಾಟಕದ ವಾರ್ಷಿಕ ಬಜೆಟ್ಟು 55,000 ಕೋಟಿ! ಇದು ಅದರ ಮೂರು ಪಟ್ಟು ಜಾಸ್ತಿ. ಕೇಂದ್ರ ಸರ್ಕಾರ ಬಡವರಿಗೆ ಪಡಿತರ ನೀಡಲು ಎತ್ತಿಡುತ್ತಿದ್ದ ಮೊತ್ತ 35,000 ಕೋಟಿ ರೂ. ಸರ್ಕಾರದ ಬಳಿ ಹಣವಿಲ್ಲವೆಂಬ ಕಾರಣಕ್ಕೆ ಕ್ರಮೇಣ ಅದನ್ನು ಕಡಿಮೆ ಮಾಡಲಾಗುತ್ತಿದೆ. ಬಡವರಿಗೆ ಅನ್ನ ಕೊಡಲು ಹಣವಿಲ್ಲದ ಸರ್ಕಾರ ಅವರಿಗೆ ಐಡೆಂಟಟಿ ಕಾರ್ಡು ಕೊಡಲು ಐದು ಪಟ್ಟು ಹೆಚ್ಚು ಹಣ ಖರ್ಚು ಮಾಡುತ್ತಿದೆ. ಈ ದೇಶದ ರಕ್ಷಣಾ ವೆಚ್ಚ 1,30,000 ಕೋಟಿ. ಅಂದರೆ ಈ ಗುರುತು ಕಾರ್ಡ್ ಕೊಡುವ ಬಾಬತ್ತಿಗೆ ರಕ್ಷಣಾ ಇಲಾಖೆಗಿಂತಲೂ ಹೆಚ್ಚಿನ ಮಹತ್ವವನ್ನು ಸರ್ಕಾರ ಕೊಡುತ್ತಿದೆ.


ಅಷ್ಟು ಮಾತ್ರವಲ್ಲ, ಸರ್ಕಾರ ಈ ಯೋಜನೆಯ ಜಾರಿಗೆ ಎಷ್ಟು ಕಟಿಬದ್ಧವಾಗಿದೆಯೆಂದರೆ ಇದರ ಅನುಷ್ಠಾನದ ಜವಾಬ್ದಾರಿಯನ್ನು ಈ ದೇಶದ ಖಾಸಗೀಕರಣದ ಮತ್ತು ಜಾಗತೀಕರಣ ಯೋಜನೆಗಳ ಅತ್ಯಂತ ದೊಡ್ಡ ಫಲಾನುಭವಿಯಾಗಿರುವ ಇನ್‌ಫೋಸಿಸ್ ಸಂಸ್ಥೆಯ ಮುಖ್ಯಸ್ಥ ನಂದನ ನಿಲೇಕಣಿಗೆ ವಹಿಸಿದೆ ಮತ್ತು ಆತನ ಹುದ್ದೆಗೆ ಕ್ಯಾಬಿನೆಟ್ ಸಚಿವನ ಸ್ಥಾನಮಾನವನ್ನು ನೀಡಿದೆ. ಅಲ್ಲದೆ ಸರ್ಕಾರದಿಂದ ತನಗೆ ಬೇಕಾದ ಅಧಿಕಾರಿಗಳನ್ನು ಮತ್ತು ಸಂಪನ್ಮೂಲಗಳನ್ನು ಬಳಸಿಕೊಳ್ಳಲು ಮುಕ್ತ ಪರವಾನಗಿ ಕೊಟ್ಟಿದೆ. 2011ರ ವೇಳೆಗೆ ಈ ದೇಶದ ಎಲ್ಲಾ ನಾಗರಿಕರಿಗೂ ಈ ಯೂನಿಕ್ ಕಾರ್ಡ್ ಒದಗಿಸಬೇಕೆಂದು ಹೇಳಿದೆ.

ಸರ್ಕಾರ ಈ ಯುನಿಕ್ ಐಡೆಂಟಟಿ ಕಾರ್ಡ್‌ಗೆ ಇಷ್ಟು ಯುನೀಕ್ ಮಹತ್ವ ಕೊಡುತ್ತಿರುವುದೇಕೆ? ಇಷ್ಟೊಂದು ಪ್ರಾಧಾನ್ಯತೆ ಕೊಟ್ಟು ತರಾತುರಿಯಲ್ಲಿ ಜಾರಿಗೆ ತರುತ್ತಿರುವುದೇಕೆ? ಇದರ ಹಿಂದಿನ ಅಸಲಿ ಉದ್ದೇಶಗಳೇನು?

ಇವನ್ನು ಅರ್ಥಮಾಡಿಕೊಳ್ಳುವ ಮುಂಚೆ ಇದರಿಂದ ಏನೆಲ್ಲಾ ಸಾಧಿಸುತ್ತೇವೆ ಎನ್ನುತ್ತಿರುವ ಸರ್ಕಾರದ ವಾದಗಳಲ್ಲಿ ನಿಜಕ್ಕೂ ಸತ್ಯಾಂಶಗಳಿದೆಯೇ ಎಂದು ವಿಶ್ಲೇಷಿಸುವ ಅಗತ್ಯವಿದೆ. ಹಿಂದೆಂದೂ ಇಲ್ಲದಂತೆ ಈ ದೇಶದ ಜನರ ತೆರಿಗೆ ಹಣದ ಬಹುದೊಡ್ಡ ಮೊತ್ತವನ್ನು ಸರ್ಕಾರ ಈ ಬಾಬತ್ತಿಗೆ ಖರ್ಚು ಮಾಡುತ್ತಿರುವಾಗ ಅದರಿಂದ ನಿಜಕ್ಕೂ ಈ ದೇಶದ ಕೋಟ್ಯಾಂತರ ಬಡ ತೆರಿಗೆದಾರರಿಗೆ ಏನಾದರೂ ಲಾಭವಿದೆಯೇ ಎಂದು ಪ್ರಶ್ನಿಸುವ ಹಕ್ಕು ಮತ್ತು ಅಧಿಕಾರ ನಮ್ಮೆಲ್ಲರಿಗೂ ಇದೆಯಲ್ಲವೇ?

ಬಯೋಮೆಟ್ರಿಕ್ ಪದ್ಧತಿಯಲ್ಲಿ ಈ ದೇಶದ ಒಬ್ಬೊಬ್ಬ ನಾಗರಿಕರ ಅತ್ಯಗತ್ಯ ಎಲ್ಲಾ ಮಾಹಿತಿಗಳನ್ನು ಗಣಕ ರೂಪದಲ್ಲಿ ದಾಖಲು ಮಾಡುವುದರಿಂದ ಈ ದೇಶದ ಜನರ ಅಗತ್ಯಗಳೇನು ಎಂದು ಅರ್ಥಮಾಡಿಕೊಳ್ಳಲು ಮತ್ತು ಅದಕ್ಕೆ ಪೂರಕವಾದ ಯೋಜನೆ ಮಾಡಲು ಅನುಕೂಲವಾಗುತ್ತದೆ ಎಂದು ಸರ್ಕಾರ ಹೇಳುತ್ತಿದೆ. ಹಾಗಿದ್ದಲ್ಲಿ ಈವರೆಗೆ ಸರ್ಕಾರಿ ಯೋಜನೆಗಳು ಸರಿಯಾಗಿ ರೂಪುಗೊಳ್ಳದಿರಲು ಅಥವಾ ಬಡಜನರ ಪರವಾದ ಯೋಜನೆಗಳು ಜಾರಿಯಾಗದಿರಲು ಸರಿಯಾದ ಮಾಹಿತಿ ಇಲ್ಲದಿರುವುದು ಕಾರಣವೇ? ಬಡಜನರಿಗೆ ಕೊಡುತ್ತಿದ್ದ ರೇಷನ್ ಕಾರ್ಡ್‌ಗಳ ಸಂಖ್ಯೆ ಕಡಿಮೆಯಾಗುತ್ತಿರುವುದಕ್ಕೆ ಮತ್ತು ಪ್ರತಿ ರೇಷನ್ ಕಾರ್ಡಿಗೆ ನೀಡುತ್ತಿದ್ದ ಧಾನ್ಯದ ಪ್ರಮಾಣ ಕಡಿಮೆಯಾಗುತ್ತಿರುವುದಕ್ಕೆ ಕಾರಣ ಈ ದೇಶದಲ್ಲಿ ಬಡಜನತೆ ಎಷ್ಟು ಮತ್ತು ಅವರಿಗೆ ತಿನ್ನಲು ಏನು ಮತ್ತು ಎಷ್ಟು ಬೇಕು ಎಂಬುದರ ಮಾಹಿತಿ ಇಲ್ಲದಿದ್ದುದು ಕಾರಣವೇ? ಇದಕ್ಕಿಂತ ಹಾಸ್ಯಾಸ್ಪದ ವಿಷಯ ಮತ್ತೊಂದಿಲ್ಲ. ಈ ದೇಶದಲ್ಲಿ ಇರುವ ಬಡಜನರ ಸಂಖ್ಯೆ ಎಷ್ಟು ಎಂಬ ನಿಖರ ಮಾಹಿತಿ ಸರ್ಕಾರಕ್ಕೆ ಇದ್ದ ಕಾರಣದಿಂದಲೇ ಬಡವರಿಗೆಲ್ಲಾ ಕಡಿಮೆದರದಲ್ಲಿ ರೇಷನ್ ಕೊಡಲಾಗುವುದಿಲ್ಲ ಎಂಬ ತೀರ್ಮಾನಕ್ಕೆ ಬಂದು ಬಡವರಲ್ಲೇ ಕಡುಬಡವರು ಎಂಬ ಮತ್ತೊಂದು ವರ್ಗವನ್ನು ನಿರ್ಮಿಸಿದ್ದು!

ಅದೇರೀತಿ ಈ ಕಾರ್ಡಿನಲ್ಲಿ ಜನರ ಆರೋಗ್ಯ ಸಂಬಂಧೀ ಮಾಹಿತಿಗಳೂ ಶೇಖರ ಮಾಡುವುದರಿಂದ ಜನರ ಆರೋಗ್ಯದ ಅಗತ್ಯಗಳನ್ನು ಇನ್ನೂ ಹೆಚ್ಚು ನಿಖರವಾಗಿ ಪೂರೈಸಬಹುದೆಂಬುದು ಈ ಬೃಹತ್ ವೆಚ್ಚದ ಕಾರ್ಡ್ ಯೋಜನೆಯನ್ನು ಜಾರಿಗೆ ತರಲು ಸರ್ಕಾರ ಮುಂದಿಡುತ್ತಿರುವ ಮತ್ತೊಂದು ಬಲವಾದ ವಾದ! ಅಂದರೆ




ಬಡವರಿಗೆ ಅಪೌಷ್ಠಿಕತೆಯ ಕಾರಣದಿಂದ ಹಲವಾರು ಕಾಯಿಲೆಗಳು ಬರುತ್ತಿವೆ ಎಂದೂ, ನಗರದ ಸ್ಲಂಗಳಲ್ಲಿ ನೈರ್ಮಲ್ಯದ ಕೊರತೆಯಿಂದ, ಎಲ್ಲೆಡೆ ಸರಿಯಾದ ಕುಡಿಯುವ ನೀರಿನ ಸರಬರಾಜು ಇಲ್ಲದೆ ಸಣ್ಣಪುಟ್ಟ ಜ್ವರ, ಮಲೇರಿಯಾ, ಇನ್ನಿತ್ಯಾದಿ ಕಾಯಿಲೆಗಳಿಂದಾಗಿಯೇ ಲಕ್ಷಾಂತರ ಜನರು ಸಾಯುತ್ತಿದ್ದಾರೆಂದೂ ಸರ್ಕಾರಕ್ಕೆ ಗೊತ್ತಿಲ್ಲವೇ?

ಸರ್ಕಾರಕ್ಕೆ ಜನರ ಅಗತ್ಯಗಳ ಬಗ್ಗೆ ನಿಖರ ಮಾಹಿತಿ ಗೊತ್ತಿಲ್ಲದಿರುವುದೇ ಯೋಜನೆಗಳ ವೈಫಲ್ಯಕ್ಕೆ ಕಾರಣ ಎಂದೇ ಇಟ್ಟುಕೊಳ್ಳೋಣ. ಈಗ ಈ ಕಾರ್ಡಿನಿಂದ ನಿಖರ ಮಾಹಿತಿ ದೊರೆತರೆ ಅಗತ್ಯವಿರುವಷ್ಟು ಆಹಾರ ಮತ್ತು ಆರೋಗ್ಯ ಸೇವೆಗಳನ್ನು ಸರ್ಕಾರ ಒದಗಿಸಬಲ್ಲದೇ? ಅಷ್ಟು ಸ್ವಾತಂತ್ರ್ಯ ಮತ್ತು ಸಾರ್ವಭೌಮತೆ ಈ ಸರ್ಕಾರಗಳಿಗಿದೆಯೇ?

ಹಾಗಿದ್ದಲ್ಲಿ ಯಾವುದೇ ನಿಖರ ಮಾಹಿತಿ ಇಲ್ಲದೇ ಈ ದೇಶದಲ್ಲಿ 91ರ ನಂತರ ಬಡವರ ಸಂಖ್ಯೆ ಕಡಿಮೆಯಾಗುತ್ತಿದೆಯೆಂಬ ತೀರ್ಮಾನಕ್ಕೆ ಬಂದು ಬಡವರಿಗೆ ಕೊಡುತ್ತಿದ್ದ ಪಡಿತರದ ಪ್ರಮಾಣವನ್ನು ಕಡಿಮೆ ಮಾಡಿದ್ದೇಕೆ? ಯಾವ ನಿಖರ ಮಾಹಿತಿಯ ಆಧಾರದ ಮೇಲೆ ಗ್ರಾಮೀಣ ಬ್ಯಾಂಕುಗಳ ಸಂಖ್ಯೆಗಳನ್ನು ಕಡಿಮೆ ಮಾಡಲಾಯಿತು? ಯಾವ ನಿಖರ ಮಾಹಿತಿಯ ಆಧಾರದ ಮೇಲೆ ಸರ್ಕಾರಿ ಶಾಲೆ ಮತ್ತು ಆಸ್ಪತ್ರೆಗಳನ್ನು ಮುಚ್ಚಹಾಕಲಾಯಿತು? ಯಾವ ನಿಖರ ಮಾಹಿತಿಯ ಆಧಾರದ ಮೇಲೆ ಬಡವರ ಕೊಳ್ಳುವ ಶಕ್ತಿ ಹೆಚ್ಚಾಗಿದೆ ಎಂದು ಅಂದಾಜಿಸಿ ಔಷಧಿ ಮಾರುಕಟ್ಟೆಯ ಮೇಲಿದ್ದ ಸರ್ಕಾರಿ ನಿಯಂತ್ರಣವನ್ನು ತೆಗೆದುಹಾಕಲಾಯಿತು? ಯಾವ ನಿಖರ ಮಾಹಿತಿಯ ಮೇರೆಗೆ ಬಡ ರೈತರ ಕೊಳ್ಳುವ ಶಕ್ತಿ ಹೆಚ್ಚಾಗಿದೆ ಎಂದು ಅಂದಾಜಿಸಿ ಬೀಜ, ಗೊಬ್ಬರ, ವಿದ್ಯುತ್, ನೀರಿಗೆ ಕೊಡುತ್ತಿದ್ದ ಸಬ್ಸಿಡಿಯನ್ನು ಹಿಂತೆಗೆದುಕೊಳ್ಳಲಾಯಿತು?


ಈ ಎಲ್ಲಾ ನೀತಿಗಳಿಗೆ ದೇಶದ ಜನರ ಅಗತ್ಯಗಳ ಬಗ್ಗೆ ಸರ್ಕಾರಕ್ಕೆ ಸರಿಯಾದ ಮಾಹಿತಿ ಇಲ್ಲದಿರುವುದು ಕಾರಣವಲ್ಲ ಅಥವಾ ಅಂಥ ನಿಖರವಾದ ಮಾಹಿತಿಗಳು ಸಿಕ್ಕ ತಕ್ಷಣ ಸರ್ಕಾರದ ಈ ಜನವಿರೋಧಿ ನೀತಿಗಳೂ ಬದಲಾಗುವುದಿಲ್ಲ, ಸರ್ಕಾರದ ಬದಲಾದ ನೀತಿಗಳಿಗೆ ಕಾರಣ ಈ ಸರ್ಕಾರಗಳು – ಅದು ಎನ್‌ಡಿಎ ಇರಲಿ, ಯುಪಿಎ ಇರಲಿ ಅಥವಾ ಮೂರೂ ಮತ್ತು ನಾಲ್ಕನೇ ರಂಗಗಳ ಸರ್ಕಾರವೇ ಇರಲಿ - ಬಹುರಾಷ್ಟ್ರೀಯ ಕಂಪನಿಗಳ, ಸಾಮ್ರಾಜ್ಯಶಾಹಿಗಳ, ವಿಶ್ವಬ್ಯಾಂಕ್ ಮತ್ತು ಐಎಂಎಫ್‌ಗಳ ಏಜೆಂಟರಾಗಿ ಕೆಲಸ ಮಾಡುತ್ತಾ ಜನವಿರೋಧಿಗಳಾಗಿರುವುದು.

ಇದು ಮಾಹಿತಿ ಕೊರತೆಯಿಂದ ಆಗಿರುವುದಲ್ಲ, ಇವೆಲ್ಲವೂ ಪ್ರಜ್ಞಾಪೂರ್ವಕವಾಗಿ ನಮ್ಮ ಸರ್ಕಾರಗಳು ತೆಗೆದುಕೊಂಡ ಜನವಿರೋಧಿ ನಿರ್ಧಾರಗಳು. ಹೀಗಾಗಿ


ನಂದನ್ ನಿಲೇಕಣಿ

ಈ ಕಾರ್ಡ್ ಕೊಡುವ ನಿಖರ ಮಾಹಿತಿಗಳು ಈ ನೀತಿ ಧೋರಣೆಗಳನ್ನು ಬದಲಾಯಿಸುವುದಿಲ್ಲ. ಆದ್ದರಿಂದ 1,50,000 ಕೋಟಿಯಷ್ಟು ಬೃಹತ್ ಮೊತ್ತ ವೆಚ್ಚ ಮಾಡುತ್ತಿರುವುದು ಜನರ ಸೇವೆಯನ್ನು ಇನ್ನೂ ಪರಿಣಾಮಕಾರಿಯಾಗಿ ಮಾಡಲು ಎಂಬ ಸರ್ಕಾರದ ಘೋಷಣೆ ಜನರನ್ನು ಮೋಸಗೊಳಿಸುವ ಹುನ್ನಾರವೇ ಹೊರತು ಬೇರೇನಲ್ಲ.

ನಾಗರಿಕರಿಗೆ ಶತಾಯಗತಾಯ ಕಾರ್ಡು ಕೊಡಲೇಬೇಕೆಂದು ಸರ್ಕಾರ ಹಠತೊಟ್ಟಿರುವುದಕ್ಕೆ ಸರ್ಕಾರ ನೀಡುತ್ತಿರುವ ಮತ್ತೊಂದು ಕಾರಣ ಭಯೋತ್ಪಾದನೆಯ ತಡೆ. ಈ ದೇಶದ ನಾಗರಿಕರೆಲ್ಲರಿಗೂ ಕಾರ್ಡು ಕೊಟ್ಟುಬಿಟ್ಟರೆ ಹೊರದೇಶದಿಂದ ನುಸುಳಿಬರುವ ಭಯೋತ್ಪಾದಕರ ಬಳಿ ಈ ಕಾರ್ಡು ಇಲ್ಲದಿರುವುದರಿಂದ ಅವರನ್ನು ಸುಲಭವಾಗಿ ತಡೆಗಟ್ಟಬಹುದು ಎಂಬುದು ಸರ್ಕಾರದ ಎಣಿಕೆ. ಅಂದರೆ ಮುಂಬೈ ದಾಳಿಗೆ ಕಾರಣರಾದ ಭಯೋತ್ಪಾದಕರನ್ನು ಇಂಡಿಯಾಗೇಟ್ ಬಳಿಯೇ ಹಿಡಿದು ಕಾರ್ಡ್ ವಿಚಾರಿಸಿದ್ದರೆ ಅವರು ಸಿಕ್ಕಿಬೀಳುತ್ತಿದ್ದರು ಅಥವಾ ಈ ಕಾರ್ಡ್ ಕಡ್ಡಾಯ ಮಾಡಿದರೆ ಪಾರ್ಲಿಮೆಂಟ್ ದಾಳಿ ಮಾಡಿದವರು ಭಾರತಕ್ಕೆ ಬರಲಾಗುತ್ತಿರಲಿಲ್ಲ ಎಂಬ ಕಾಗಕ್ಕ ಗುಬ್ಬಕ್ಕನ ಕಥೆಯನ್ನು ಸರ್ಕಾರ ಹೇಳುತ್ತಿದೆ. ವಾಸ್ತವವೇನೆಂದರೆ ಭಾರತದಲ್ಲಿ ಈವರೆಗೆ ಭಯೋತ್ಪಾದನಾ ದಾಳಿ ಮಾಡಿದವರ ಬಹುಪಾಲು ಜನರ ಬಳಿ ಯಾವುದೋ ಒಂದು ಬಗೆಯ ಗುರುತಿನ ಚೀಟಿ ಇದ್ದೇ ಇತ್ತು. ಮುಂಬೈ ದಾಳಿಯಲ್ಲಿ ಸಿಕ್ಕಿಬದ್ದಿರುವ ಕಸಬ್‌ನ ಬಳಿಯಂತೂ ಆತ ಬೆಂಗಳೂರು ನಗರದ ವಾಸಿಯೆಂಬ ದಾಖಲೆ ಪತ್ರವಿತ್ತು. ಪ್ರಾಣವನ್ನೇ ಬಲಿಕೊಟ್ಟು ದಾಳಿ ಮಾಡಲು ಸಿದ್ಧವಿರುವವರು ಒಂದು ಕಾರ್ಡು ಸಂಪಾದಿಸುವುದು ಕಷ್ಟವೇ ಅಲ್ಲ. ಈ ಬಯೋಮೆಟ್ರಿಕ್ ಪದ್ಧತಿ ಅದನ್ನು ಮೊದಲಿನಷ್ಟು ಸುಲಭವಾಗದಂತೆ ಮಾಡುತ್ತದೆಯೇ ವಿನಃ



ಅಸಾಧ್ಯವಾಗಿಸುವುದಿಲ್ಲ. ಏಕೆಂದರೆ ಈ ಬಗೆಯ ಬಯೋಮೆಟ್ರಿಕ್ ಗುರುತಿನ ಚೀಟಿ ಈಗಾಗಲೇ ಅಮೆರಿಕ ಮತ್ತು ಯೂರೋಪಿನ ಹಲವು ದೇಶಗಳಲ್ಲಿ ಚಾಲ್ತಿಯಲ್ಲಿದೆ. ಇಷ್ಟಾದರೂ ಒಕ್ಲಾಹಾಮಾದಲ್ಲಿ ಭಯೋತ್ಪಾದನಾ ದಾಳಿಯನ್ನು ಅಮೆರಿಕ ತಡೆಯಲಾಗಲಿಲ್ಲ. ಅದನ್ನು ಮಾಡಿದ ಭಯೋತ್ಪಾದಕ ತಿಮೋತಿಯ ಬಳಿ ಈ ಬಗೆಯ ಹಲವು ಬಯೋಮೆಟ್ರಿಕ್ ಕಾರ್ಡುಗಳು ಇದ್ದವಂತೆ. ಈ ಬಗೆಯ ನಕಲಿ ಬಯೋಮೆಟ್ರಿಕ್ ಕಾರ್ಡು ತಯಾರಿಸುವ ದಂಧೆಯಲ್ಲಿ ತೊಡಗಿದ್ದ ಒಂದು ದೊಡ್ಡ ರಾಕೆಟ್ಟನ್ನು ಥೈಲಾಂಡಿನಲ್ಲಿ 2006ರಲ್ಲಿ ಸರ್ಕಾರ ಬಯಲುಗೊಳಿಸಿತ್ತು. ಅಮೆರಿಕದಲ್ಲಿ 2001 ಸೆಪ್ಟೆಂಬರ್ 11 ರ ದಾಳಿ ಮಾಡಿದವರು ಎಲ್ಲಾ ಗುರುತು ಪತ್ರಗಳನ್ನು ಆರಾಮಾಗಿ ನಿಭಾಯಿಸಿ ವಿಮಾನಗಳನ್ನೇ ಅಪಹರಿಸಿ WTC ಯನ್ನು ಉರುಳಿಸಿದರು! ಹೀಗಾಗಿಯೇ ಯೂರೋಪಿನ ಹಲವು ದೇಶಗಳು ಈ ಗುರುತು ಕಾರ್ಡು ಯೋಜನೆಯನ್ನೇ ಕೈಬಿಟ್ಟವೆ. ಇಂಥಾ ಕಾರ್ಡ್ ಪದ್ಧತಿ ಮತ್ತು ಅದನ್ನು ಆಧರಿಸಿ ಜನರ ಖಾಸಗಿ ಬದುಕಿನ ಎಲ್ಲಾ ಮಾಹಿತಿಯನ್ನು ಒಂದು ನ್ಯಾಷನಲ್ ರಿಜಿಸ್ಟ್ರಿಯಲ್ಲಿ ದಾಖಲಿಸುವ ಇಂಗ್ಲೆಂಡ್ ಸರ್ಕಾರದ ಯೋಜನೆಯ ವಿರುದ್ಧ ಇಂಗ್ಲೆಂಡಿನ ಜನತೆ ಬೃಹತ್ ಹೋರಾಟವನ್ನು ನಡೆಸುತ್ತಿದ್ದಾರೆ. ಆದ್ದರಿಂದಲೇ ಅಲ್ಲಿ ಇನ್ನೂ ಈ ಕಾರ್ಡ್ ಯೋಜನೆ ಜಾರಿಗೆ ಬಂದಿಲ್ಲ. ಪ್ರಪಂಚದ 56 ದೇಶಗಳಲ್ಲಿ ಈ ಬಗೆಯ ಬಯೋಮೆಟ್ರಿಕ್ ಗುರುತು ಕಾರ್ಡ್ ಯೋಜನೆ ಚಾಲ್ತಿಯಲ್ಲಿದ್ದರೂ ಅದರಿಂದ ಭಯೋತ್ಪಾದನೆ ತಡೆಯಬಹುದೆಂಬ ನಿರೀಕ್ಷೆಯನ್ನು ಅವು ಕೈಬಿಟ್ಟಿವೆ.

ಇವೆಲ್ಲದರ ಸಾರಾಂಶವಿಷ್ಟೆ. ಮನುಷ್ಯ ಮಾಡಿದ್ದನ್ನು ಮನುಷ್ಯನೇ ನಕಲು ಮಾಡುವುದು ಕಷ್ಟವೇನಲ್ಲ! ಭಯೋತ್ಪಾದನೆಯನ್ನು ತಡೆಯಬೇಕೆಂದರೆ ಮನುಷ್ಯನೊಬ್ಬನನ್ನು ಭಯೋತ್ಪಾದಕನನ್ನಾಗಿ ಮಾಡುವ ಶಕ್ತಿಗಳನ್ನು ನಿಗ್ರಹಿಸಬೇಕು. ಸರ್ಕಾರದ ಪ್ರಕಾರ ಇಂದು ಭಾರತ ಎದುರಿಸುತ್ತಿರುವ ಅತಿ ದೊಡ್ಡ ಆಂತರಿಕ ಭದ್ರತಾ ಸವಾಲು ಈ ದೇಶದ ಬಡವರ ಮಿಲಿಟೆಂಟ್ ಚಳವಳಿಯಾದ ನಕ್ಸಲ್ ಚಳವಳಿ. ಇದಕ್ಕೆ ಕಾರಣ 60 ವರ್ಷಗಳಾದರೂ ಬದಲಾಗದ ಈ ದೇಶದ ದಲಿತರ, ಆದಿವಾಸಿಗಳ, ಕಾರ್ಮಿಕರ, ರೈತಾಪಿ ಜನರ ಪರಿಸ್ಥಿತಿ. ಬಯೋಮೆಟ್ರಿಕ್ ಕಾರ್ಡ್ ಕೊಟ್ಟ ಮಾತ್ರಕ್ಕೆ ಈ ಪರಿಸ್ಥಿತಿ ಬದಲಾಗುವುದೇ? ಬಡವರ ಹೋರಾಟ ನಿಲ್ಲುವುದೇ? ಹೆಚ್ಚೆಂದರೆ ಅವರ ಮೇಲೆ ನಡೆಯುವ ದಮನ ತೀವ್ರವಾಗಬಹುದಷ್ಟೇ!

ಹಾಗಿದ್ದಮೇಲೆ ಈ ಯುನೀಕ್ ಐಡೆಂಟಟಿ ಕಾರ್ಡಿನ ಅಗತ್ಯವೇನು? ಈ ಯೋಜನೆಗೆ 1,50,000 ಕೋಟಿ ರೂಪಾಯಿಗಳನ್ನು ವಿನಿಯೋಗಿಸಲಾಗುತ್ತಿದೆ. ಜಗತ್ತಿನ ಎಲ್ಲೆಡೆ ಆರ್ಥಿಕ ಹಿಂಜರಿತ ಇರುವುದರಿಂದ ಈ ಪ್ರಮಾಣದ ಸರ್ಕಾರಿ ಯೋಜನೆ ಹಲವಾರು ಕೈಗಾರಿಕೋದ್ಯಮಿಗಳನ್ನು ನಷ್ಟದಿಂದ ಬಚಾವು ಮಾಡುತ್ತದೆ. ಆದರೆ ಸರ್ಕಾರ ಎಂಥ ಕುತಂತ್ರಿ ಎಂದರೆ ಇದರಿಂದ ಸಾವಿರಾರು ಉದ್ಯೋಗಗಳು ಸೃಷ್ಟಿಯಾಗುತ್ತದೆ ಎಂದು ಹೇಳುತ್ತಿದೆಯೇ ವಿನಃ ನಷ್ಟದಲ್ಲಿರುವ ಎಷ್ಟು ಕಂಪನಿಗಳಿಗೆ ಎಷ್ಟು ಸಾವಿರ ಕೋಟಿ ರೂಪಾಯಿ ಆದಾಯ ತರಲಿದೆ ಎಂದು ಹೇಳುತ್ತಿಲ್ಲ.

ಒಂದು ಅಂದಾಜಿನ ಪ್ರಕಾರ ಈ ಬಯೋಮೆಟ್ರಿಕ್ ಕಾರ್ಡ್ ತಯಾರಿಕೆಗೇ 50,000 ಕೋಟಿ ರೂಪಾಯಿ ಬೇಕಾಗುತ್ತದೆ. ಇದರ ಕಾಂಟ್ರಾಕ್ಟನ್ನು ಇನ್‌ಫೋಸಿಸ್‌ನಂಥ ಐಟಿ ಕಂಪನಿಗಳಿಗೇ ಕೊಡಲಾಗುತ್ತದೆ. ಇದಲ್ಲದೆ ಇನ್ನುಳಿದ ಒಂದು ಲಕ್ಷ ಕೋಟಿ ರೂಪಾಯಿಯಷ್ಟು ಸೇವೆಯನ್ನೂ ವಿವಿಧ ಕ್ಷೇತ್ರಗಳಲ್ಲಿರುವ ಕಂಪನಿಗಳಿಂದಲೇ ಪಡೆದುಕೊಳ್ಳಲಾಗುತ್ತದೆ. ಅಂದರೆ ಬಡಪಾಯಿ ಜನರ ತೆರಿಗೆ ಹಣ ಈ ಕಂಪನಿಗಳ ತಿಜೋರಿ ಸೇರುತ್ತದೆ.

ಇದು ತತ್‌ಕ್ಷಣದ ಪ್ರಯೋಜನವಾದರೆ ದೇಶದ ಮತ್ತು ಪ್ರಪಂಚದ ಬಂಡವಾಳಶಾಹಿಗಳು ತಮ್ಮ ಇನ್ನೊಂದು ಅಗತ್ಯವನ್ನು ಸರ್ಕಾರದ ಖರ್ಚಿನಲ್ಲಿ ಈ ಕಾರ್ಡಿನ ಮೂಲಕ ತೀರಿಸಿಕೊಳ್ಳುತ್ತಿವೆ. ಅದನ್ನು ಮಾರುಕಟ್ಟೆ ಭಾಷೆಯಲ್ಲಿ "ಮಾರುಕಟ್ಟೆ ಇಂಟೆಲಿಜೆನ್ಸ್" ಎಂದು ಕರೆಯುತ್ತಾರೆ. ಪ್ರತಿಯೊಂದು ಉದ್ಯಮವೂ ತನ್ನ ಗ್ರಾಹಕರ ಅಗತ್ಯಗಳೇನು ಎಂದು ಅರಿತುಕೊಳ್ಳುವುದೇ "ಮಾರುಕಟ್ಟೆ ಇಂಟೆಲಿಜೆನ್ಸ್". ಇಂದು ಪಾಶ್ಚಾತ್ಯ ದೇಶಗಳಲ್ಲಿ ಇಂಥ ಬಯೋಮೆಟ್ರಿಕ್ ಕಾರ್ಡುಗಳಲ್ಲಿ ನಾಗರಿಕರ ರಕ್ತದ ಗುಂಪು, ಆರೋಗ್ಯ ಸಾಮರ್ಥ್ಯ, ಸರಕುಗಳ ಬಳಕೆ ರೀತಿ-ಪದ್ಧತಿ, ವಿಮೆ, ಬ್ಯಾಂಕು ಸೌಲಭ್ಯ ಇನ್ನಿತ್ಯಾದಿ 60 ವಿವರಗಳನ್ನು ದಾಖಲಿಸುತ್ತದೆ ಮತ್ತು ಇದರಲ್ಲಿ ಏನು ಬದಲಾದರೂ ಆ ಬದಲಾವಣೆಯನ್ನು ನೊಂದಾಯಿಸುವುದನ್ನು ಹಲವು ಕಡೆ ಕಡ್ಡಾಯ ಮಾಡಲಾಗಿದೆ. ಇದು ವಿವಿಧ ಬಗೆಯ ಸೇವೆ ಮತ್ತು ಸರಕುಗಳನ್ನು ಪೂರೈಸುವ ಉದ್ಯಮಗಳಿಗೆ ತನ್ನ ಗ್ರಾಹಕರ ಬದಲಾಗುತ್ತಿರುವ ಅಗತ್ಯಗಳ ಬಗ್ಗೆ ಪುಕ್ಕಟೆ ಮಾಹಿತಿ ಒದಗಿಸಿ ಇದಕ್ಕಾಗಿ ಅವು ವೆಚ್ಚ ಮಾಡಬೇಕಾದ ಹಣವನ್ನು ಉಳಿತಾಯ ಮಾಡುತ್ತದೆ. ಅಂದರೆ ಅದರ ಖರ್ಚನ್ನು ಜನರ ಮೇಲೆ ವರ್ಗಾಯಿಸಿ ಉದ್ಯಮಿಗಳ ಲಾಭದ ದರವನ್ನು ಕಾಯ್ದುಕೊಳ್ಳುತ್ತದೆ.

ಭಾರತದಲ್ಲಿ ಇನ್ನೂ ಈ ಬಯೋಮೆಟ್ರಿಕ್ ಗುರುತು ಕಾರ್ಡಿನಲ್ಲಿ ಏನೇನು ವಿವರಗಳನ್ನು ಸಂಗ್ರಹಿಸಿಡಲಾಗುವುದೆಂದು ಘೋಷಿಸಿಲ್ಲವಾದರೂ ಈಗಾಗಲೇ ನಂದನ್ ನಿಲೇಕಣಿ ಕೊಟ್ಟಿರುವ ಸೂಚನೆಗಳನ್ನು ನೋಡುವುದಾದರೆ ಇಲ್ಲೂ 60ಕ್ಕೂ ಹೆಚ್ಚು ಬಗೆಯ ಮಾಹಿತಿಗಳನ್ನು ಜನರ ಖರ್ಚಿನಲ್ಲಿ ಮಾರುಕಟ್ಟೆಗೆ ಒದಗಿಸುವ ಎಲ್ಲಾ ಸಾಧ್ಯತೆಗಳು ಇವೆ. ಇದೇ ಈ 1,50,000 ಕೋಟಿ ಯೋಜನೆಯ ಅಸಲಿ ಉದ್ದೇಶ.

ಸರ್ಕಾರ ಇನ್ನಷ್ಟು ನಿರಂಕುಶವಾಗಿ ಜನರ ಮೇಲೆ ನಿಯಂತ್ರಣ ಸಾಧಿಸುತ್ತದೆ. ಗುರುತು ಕಾರ್ಡಿನ ಹೆಸರಲ್ಲಿ ಅಮಾಯಕರನ್ನು ಮತ್ತಷ್ಟು ಬೇಟೆಯಾಡುತ್ತದೆ. ಉದ್ಯಮಿಗಳು ಜನರ ಖರ್ಚಿನಲ್ಲಿ ತಮ್ಮ ಲಾಭಕ್ಕೆ ಮತ್ತೊಂದು ರಹದಾರಿಯನ್ನು ಪಡೆದ ಖುಷಿಯಲ್ಲಿವೆ. ಇವೇ ಈ ಯೋಜನೆಯ ಪ್ರಧಾನ ಉದ್ದೇಶ ಮತ್ತು ಪರಿಣಾಮ. ಮಿಕ್ಕಂತೆ ಸಾಮಾನ್ಯರಿಗೆ ಸಿಗಬಹುದಾದ ಅಲ್ಪಸ್ವಲ್ಪ ಅನುಕೂಲತೆಗಳೇನಾದರೂ ಇದ್ದರೆ ಈ ಉದ್ದೇಶದ ಹೊರತಾಗಿಯೂ ಸಿಗುವ ಅನುಕೂಲತೆಗಳೇ ವಿನಃ ಈ ಯೋಜನೆಯಿಂದಾಗಿ ಸಿಗುವ ಲಾಭಗಳಲ್ಲ! ■

ಅಜ್ಜಂಪುರದಲ್ಲಿ ಕಾಳಿಂಗರಾಯನನ್ನು ಕಂಡದ್ದು...



ಕಂಡಹಾಗೆ



ಗೌರಿ ಲಂಕೇಶ್

ಅವನ ಹೆಸರು ಕಾಳಿಂಗರಾಯ. ತನ್ನ ಸಮುದಾಯದ ಸುಮಾರು ಇನ್ನೂರೈವತ್ತು ತಲೆಗಳ ನಡುವೆ ಅದೆಲ್ಲೋ ನಿಂತಿದ್ದ ಕಾಳಿಂಗರಾಯನನ್ನು ತಿಪ್ಪೇಸ್ವಾಮಿ ಹೆಸರು ಹಿಡಿದು ಕರೆದಾಗ ಆತ ಆ ಗುಂಪಿನ ಮುಂದಕ್ಕೆ ಬಂದು ನಮ್ಮೆದುರು ನಿಂತ. ಆದರೆ ಕೆಲಕ್ಷಣಗಳಲ್ಲೇ ನಮ್ಮೆಲ್ಲರ ನೋಟದಿಂದ ನಾಚಿಕೆ ಪಟ್ಟವನಂತೆ ಓಡಲಾರಂಭಿಸಿದ.

ಆತನ ಎತ್ತರ, ಉಬ್ಬಿದ ಭುಜ, ಕಟ್ಟುಮಸ್ತಾದ ದೇಹ, ನಿಲುವಿನಲ್ಲಿ ಘನತೆ, ಓಟದ ಲಯ ಕಂಡು "ಈತ ಎಷ್ಟು ಸುಂದರವಾಗಿದ್ದಾನೆ" ಎಂದು ಉದ್ಗಾರವೆತ್ತಿದೆ.

ಈ ಕಾಳಿಂಗರಾಯ ಬೇರಾರೂ ಅಲ್ಲ, ಅಜ್ಜಂಪುರದ ಅಮೃತಮಹಲ್ ಕಾವಲಿನಲ್ಲಿರುವ ಒಂದು ಹೋರಿ!


ಕಾಳಿಂಗರಾಯನಿಗೆ ಹೋಲಿಸಿದರೆ ನನ್ನ ಅಮ್ಮನ ನೆಲಮಂಗಲದ ತೋಟದಲ್ಲಿರುವ ಬಸವ ಮತ್ತು ಶಿವ (ಈಶಾ ಮತ್ತು ಸಮರ್ ಇಟ್ಟಿರುವ ಹೆಸರುಗಳು) ಸಣ್ಣವಾಗಿಯೂ, ಶಕ್ತಿಹೀನವಾಗಿಯೂ ಕಾಣಿಸುತ್ತವೆ.

ಈ ಕಾಳಿಂಗರಾಯ ಮತ್ತು ಆತನೊಂದಿಗಿರುವ ಇತರೆ ಹೋರಿ, ಹಸು ಮತ್ತು ಕರುಗಳನ್ನು, ಅವುಗಳಿರುವ ಕಾವಲ್ ಅನ್ನು ಮೊನ್ನೆ ಮೊದಲ ಬಾರಿ ನೋಡಿದೆ. ನನ್ನ ಮತ್ತು ಸಹೋದರ ಅಜ್ಜಂಪುರದ ವೆಂಕಟೇಶ್ ಈ ಕಾವಲನ್ನು ನೋಡಲು ನಾನು ಬರಲೇಬೇಕೆಂದು ಹಠ ಹಿಡಿದಿದ್ದ. ವೆಂಕಟೇಶ್ ಮತ್ತಾತನ ಹಲವಾರು ಮಿತ್ರರು ಅಮೃತ ಮಹಲ್ ಕಾವಲು ಉಳಿಸಿ ಹೋರಾಟ ಸಮಿತಿಯೊಂದನ್ನು ರಚಿಸಿಕೊಂಡು ಇಲ್ಲಿತನಕ ಈ ಕಾವಲು ಯಾವುದೋ ಗಣಿ ಸ್ವಾಮಿಯ ಪಾಲಾಗದಂತೆ, ಮತ್ತಿನ್ಯಾವುದೇ ಪುಂಗಿದಾಸನ ವಶವಾಗದಂತೆ ನೋಡಿಕೊಂಡಿದ್ದಾರೆ.

ಈ ಕೇಂದ್ರಕ್ಕೆ ಅಪ್ಪ 1989 ರಲ್ಲಿ ಭೇಟಿ ನೀಡಿ ಅಲ್ಲಿನ ಅಮೃತಮಹಲ್ ರಾಸುಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ ಲೇಖನ ಬರೆದದ್ದು ನಿಮಗೆ ನೆನಪಿರಬಹುದು. ನಮ್ಮ ಚಂದ್ರೇಗೌಡರೂ ಇದರ ಬಗ್ಗೆ ಹಲವಾರು ಬಾರಿ ಬರೆದಿದ್ದಾರೆ, ಮಾತನಾಡಿದ್ದಾರೆ. ಇದೆಲ್ಲದರಿಂದ ಈ ಕೇಂದ್ರಕ್ಕೆ ಭೇಟಿ ನೀಡಬೇಕೆಂಬ ಆಶೆ ನನಗೂ ಇತ್ತು. ಅಂದಹಾಗೆ, ನಾಟಿ ತಳಿಯಾದ ಈ ರಾಸುಗಳಿಗೆ ಇಟ್ಟಿರುವ 'ಅಮೃತ ಮಹಲ್' ಎಂಬ ಹೆಸರನ್ನೇ ನೋಡಿ. ಅದು ಎಷ್ಟು ಅರ್ಥ ಗರ್ಭಿತವಾಗಿಯೂ, ಸುಂದರವಾಗಿಯೂ ಇದೆಯಲ್ಲವೆ?

ಈಗಾಗಲೇ ಬಹಳಷ್ಟು ಜನರಿಗೆ ಗೊತ್ತಿರುವಂತೆ ಈ ಅಮೃತಮಹಲ್ ತಳಿಯ ರಕ್ಷಣೆ ಮತ್ತು ಪೋಷಣೆಗೆ ವಿಜಯನಗರದ ರಾಜರಿಂದ ಹಿಡಿದು ಹೈದರ್ ಆಲಿ, ಟಿಪ್ಪೂ ಸುಲ್ತಾನ ಮತ್ತು ಅವರೆಲ್ಲರ ನಂತರದ ಬ್ರಿಟಿಷರು ಕೂಡ ಅಪಾರ ಬೆಂಬಲ ನೀಡಿದ್ದರು; ಹಣದೊಂದಿಗೆ ಸಾವಿರಾರು ಎಕರೆಗಳಷ್ಟು ಭೂಮಿಯನ್ನು ಮೀಸಲಿಟ್ಟಿದ್ದರು. ಆದರೆ ಸ್ವಾತಂತ್ರ ಬಂದ ನಂತರ ಅದರಲ್ಲೂ ರಾಜಕೀಯ ನಾಯಕರಿಗೆ ಸಿರಿಯ ಗರ ಬಡಿದನಂತರ ಈ ತಳಿಗಳು ದುರ್ಲಕ್ಷಕ್ಕೆ ಒಳಪಟ್ಟವು. ಇವತ್ತು ಅಜ್ಜಂಪುರದಲ್ಲಿ ಮಾತ್ರ ಅಲ್ಲದೆ ರಾಜ್ಯದ ಐದಾರು ಜಿಲ್ಲೆಗಳಲ್ಲಿ ಅಮೃತಮಹಲ್ ರಾಸುಗಳಿಗೆಂದೇ ಇರುವ ಇತರೆ ಕೇಂದ್ರಗಳು ಹತ್ತಾರು ಸಮಸ್ಯೆಗಳನ್ನು ಎದುರಿಸುತ್ತಿವೆ. ಪರಿಣಾಮವಾಗಿ ಇಲ್ಲಿನ ದನಕರುಗಳು ಬಡಕಲಾಗಿ ಈ ಅದ್ಭುತ ತಳಿಯೇ ಮಾಯವಾಗುವ ಹಂತಕ್ಕೆ ಬಂದಿದೆ.

ಇತ್ತೀಚಿನವರೆಗೂ ಪರಿಸ್ಥಿತಿ ಇಷ್ಟು ಹದಗೆಟ್ಟಿರಲಿಲ್ಲ. ರಾಜ್ಯದಲ್ಲಿ ಹೊಸ ಸರ್ಕಾರ ರೂಪುಗೊಂಡಾಗ ಪಶುಸಂಗೋಪನಾ ಸಚಿವ ಸ್ಥಾನ ಪಡೆದ ಪ್ರತಿಯೊಬ್ಬರೂ ಮಾಡುತ್ತಿದ್ದ ಪ್ರಥಮ ಕೆಲಸವೆಂದರೆ ಅಜ್ಜಂಪುರದ ಅಮೃತ ಮಹಲ್ ಕೇಂದ್ರಕ್ಕೆ ಭೇಟಿ ನೀಡುವುದು. ಆದರೆ ತಮಾಷೆ ನೋಡಿ. ಗೋರಕ್ಷಣೆಯೇ ತಮ್ಮ ಆದ್ಯತೆ ಎನ್ನುವ ನಾಟಿ




ತಳಿಗಳನ್ನು ರಕ್ಷಿಸುತ್ತೇನೆಂದು ಓಳುಬಿಡುವ ಕಳ್ಳಸ್ವಾಮಿಯೊಬ್ಬನಿಗೆ ಕೋಟ್ಯಂತರ ರೂಪಾಯಿಗಳನ್ನು ಸರ್ಕಾರದ ತಿಜೋರಿಯಿಂದ ನೀಡಿರುವ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ಒಂದು ವರ್ಷವಾದರೂ ಪಶುಸಂಗೋಪನಾ ಸಚಿವ ರೇವೂನಾಯಕ ಬೆಳಮಗಿ ಇತ್ತ ತಿರುಗಿಯೂ ನೋಡಲಿಲ್ಲ! ಪ್ರಾಯಶಃ ಬೆಳಮಗಿ ಪ್ರಕಾರ ನಾಟಿ ಅಮೃತಮಹಲ್‌ಗಿಂತ ಹೆಚ್ಚು ಹಾಲು ಕೊಡುವ ವಿದೇಶಿ ಜರ್ಸಿ ಹಸುಗಳೇ ಪವಿತ್ರವೇನೋ?!

ಮೊನ್ನೆ ಈ 'ಪಶು' ಸಚಿವ ಬೆಳಮಗಿ ಅಮೃತಮಹಲ್ ರಕ್ಷಣೆ ಕುರಿತಂತೆ ಬೀರೂರಿನಲ್ಲಿ ಅಧಿಕಾರಿಗಳೊಂದಿಗೆ ಕಾಟಾಚಾರದ ಸಭೆ ನಡೆಸಿ ವಾಪಸ್ಸು ಬಂದಿದ್ದಾರೆ. ಅಜ್ಜಂಪುರದ ಕೇಂದ್ರದಲ್ಲೇ ಯಾಕೆ ಈ ಸಭೆ ನಡೆಸಲಿಲ್ಲ ಎಂದು ಕೇಳಿದರೆ "ಅಲ್ಲಿ ಕಟ್ಟಡ ರಿಪೇರಿ ನಡೆಯುತ್ತಿದೆ" ಎಂದು ಅಧಿಕಾರಿಗಳು ಉತ್ತರಿಸಿದ್ದಾರೆ. ಅಷ್ಟೇ ಅಲ್ಲದೆ, ಆ ಸಭೆಗೆ ಚೆಡ್ಡಿಗಳೇ ಹುಟ್ಟುಹಾಕಿರುವ ಪ್ರಾಣಿ ದಯಾ ಸಂಘ ಎಂಬ ಯಾರಿಗೂ ಗೊತ್ತಿಲ್ಲದ ಸಂಘಟನೆಯ ಕಾವಿಧಾರಿ ಸ್ವಾಮಿಯೊಬ್ಬನನ್ನು ಕರೆದಿದ್ದಾರೆ. "ಅಧಿಕಾರಿಗಳ ಸಭೆಯಲ್ಲಿ ಇವನಿಗೇನು ಕೆಲಸ" ಎಂದು ವೆಂಕಟೇಶ್ ಮತ್ತು ಆತನ ಸ್ನೇಹಿತರು ದಬಾಯಿಸಿದಾಗ ಆ ಸ್ವಾಮಿ ತನ್ನ ಕಾರನ್ನು ಹತ್ತಿ ಪರಾರಿಯಾಗಿದ್ದಾನೆ.

ಇದಕ್ಕಿಂತಲೂ ಆಘಾತಕಾರಿ ಸಂಗತಿ ಯಾವುದೆಂದರೆ 'ಪಶು' ಬೆಳಮಗಿ ಮತ್ತು ಆತನ 'ಮೃಗ' ಅಧಿಕಾರಿಗಳು ಆ ಸಭೆಯಲ್ಲಿ ತೆಗೆದುಕೊಂಡಿರುವ ನಿರ್ಣಯಗಳು. ನೂರಾರು ವರ್ಷಗಳಿಂದ ಅಮೃತಮಹಲ್ ರಕ್ಷಣೆಯಲ್ಲಿ ಅಜ್ಜಂಪುರ ಕೇಂದ್ರ ಮುಖ್ಯ ಪಾತ್ರ ವಹಿಸುತ್ತಾ ಬಂದಿದ್ದರೂ ಆ ಸಭೆಯಲ್ಲಿ ಈ ಕೇಂದ್ರವನ್ನು ನಿರ್ಲಕ್ಷಿಸಿ ತುಮಕೂರು ಜಿಲ್ಲೆಯ ಕೊನೆಹಳ್ಳಿಯನ್ನು ಅಭಿವೃದ್ಧಿಪಡಿಸಲು ತೀರ್ಮಾನಿಸಲಾಗಿದೆ. ಅಷ್ಟೇ ಅಲ್ಲ, ಈ ತಳಿ ರಕ್ಷಣೆಗೆ ಬಿಡುಗಡೆ ಮಾಡಲಾದ ಹತ್ತು ಕೋಟಿ ರೂಪಾಯಿಗಳಲ್ಲಿ ಅಜ್ಜಂಪುರ ಕೇಂದ್ರವನ್ನು ಉದ್ಧಾರ ಮಾಡುವ ಒಂದೇ ಒಂದು ಯೋಜನೆಯೂ ಇಲ್ಲ. ಇಂತಹ ತೊಘಲಕ್ ತೀರ್ಮಾನಗಳ ಹಿಂದೆ ಅಜ್ಜಂಪುರ ಕೇಂದ್ರವನ್ನು ಸರ್ವನಾಶ ಮಾಡುವ ಸಂಚು ಅಡಗಿದೆ ಎಂದೇ ಅಲ್ಲಿನ ಜನ ಆಕ್ರೋಶಗೊಂಡಿದ್ದಾರೆ. ಇದರ ವಿರುದ್ಧ ಹೋರಾಡಲು ಸ್ಥಳೀಯರು ಮತ್ತು ಚಿಕ್ಕಮಗಳೂರಿನ ಜನದನಿ ಸಂಘಟನೆಯವರು ಸಜ್ಜಾಗುತ್ತಿದ್ದಾರೆ.

ಅಜ್ಜಂಪುರದ ಸ್ನೇಹಿತರೊಂದಿಗೆ ಅಮೃತ ಮಹಲ್ ಕೇಂದ್ರಕ್ಕೆ ಭೇಟಿ ನೀಡಿದಾಗ ಅಲ್ಲಿನ ಅಧಿಕಾರಿ ರಂಗನಾಥ್ ಕೂಡ ಇದ್ದರು. ನೆಟ್ಟಗೆ ತಂತಿ ಬೇಲಿ ಕೂಡ ಇರದ ಆ ಕೇಂದ್ರ ಎದುರಿಸುತ್ತಿರುವ ಹಲವಾರು ಸಮಸ್ಯೆಗಳನ್ನೂ, ಅವುಗಳನ್ನು ನಿಭಾಯಿಸಲು ಬೇಕಿರುವ ಯೋಜನೆಗಳ ಬಗ್ಗೆಯೂ ಅವರು ವಿವರಿಸಿದರು. ರಂಗನಾಥ್ ಅವರು ಅಮೃತ್ ಮಹಲ್ ರಾಸುಗಳ ಬಗ್ಗೆ ಸಾಕಷ್ಟು ಕಾಳಜಿ ಹೊಂದಿರುವವರಂತೆ ಕಂಡರು. ಆದರೆ ಸರ್ಕಾರ ಒಂದು ಸ್ಪಷ್ಟ ಕಾರ್ಯಕ್ರಮವನ್ನು ರೂಪಿಸದಿದ್ದರೆ, ಅದಕ್ಕೆಂದು ಸಾಕಷ್ಟು ಹಣ ನೀಡದಿದ್ದರೆ, ಈಗಾಗಲೇ ಒತ್ತುವರಿಯಾಗಿರುವ ಕಾವಲು ಭೂಮಿಯನ್ನು ಹಿಂಪಡೆಯುವ ದಿಟ್ಟತನ ಪ್ರದರ್ಶಿಸದಿದ್ದರೆ, ಅಗತ್ಯವಾಗಿ ಬೇಕಿರುವ ತಂತ್ರಜ್ಞರನ್ನು, ಸಿಬ್ಬಂದಿಗಳನ್ನು, ನೂರಾರು ಕಾರ್ಮಿಕರನ್ನು ನೇಮಿಸದಿದ್ದರೆ ಪಾಪ ರಂಗನಾಥ್ ತಾನೇ ಏನು ಮಾಡಲು ಸಾಧ್ಯ?

ಅಜ್ಜಂಪುರದ ಕೇಂದ್ರ ಎದುರಿಸುತ್ತಿರುವ ಹತ್ತಾರು ಸಮಸ್ಯೆಗಳಲ್ಲಿ ಒಂದು ಬಳ್ಳಾರಿ ಜಾಲಿಗಿಡಗಳದ್ದು. ಇಡೀ ಕಾವಲು ಪ್ರದೇಶವನ್ನು ಆವರಿಸಿರುವ ಈ ಜಾಲಿ ಇವತ್ತು ಅಲ್ಲಿನ ರಾಸುಗಳಿಗೆ ಮೇವು ಇಲ್ಲದಂತೆ ಮಾಡಿದೆ. ಈ ಜಾಲಿಗಿಡಗಳನ್ನು ತೆರವುಗೊಳಿಸಲೇ ಒಂದು ಕೋಟಿ ರೂಪಾಯಿ ಬೇಕಾಗುತ್ತದೆ ಎಂದರೆ ಇನ್ನು ಅಜ್ಜಂಪುರ ಸೇರಿದಂತೆ ಇತರೆ ಎಲ್ಲಾ ಅಮೃತಮಹಲ್ ಕಾವಲುಗಳನ್ನು ಸರಿಪಡಿಸಲು ಎಷ್ಟು ಹಣ ಬೇಕಾಗಬಹುದು? ಸರ್ಕಾರದ



ಅಜ್ಜಂಪುರ ಅಮೃತಮಹಲ್ ಕಾವಲಿಗೆ ಭೇಟಿ......

ಬಳಿ ಹಣವಿದೆ. ಗಣಿ ರೆಡ್ಡಿಗಳ ರಸ್ತೆಗೆ 300 ಕೋಟಿ ರೂಪಾಯಿಗಳನ್ನು ನೀಡುವ, ಪುಡಪೋಸಿ ಸ್ವಾಮಿಗಳಿಗೆ ಹತ್ತಾರು ಕೋಟಿಗಳನ್ನು ನೀಡುವ ಸರ್ಕಾರದ ಬಳಿ ಅಮೃತಮಹಲ್ ರಕ್ಷಣೆಗೆ ಹಣ ಇಲ್ಲವೆಂದಲ್ಲ. ಆದರೆ ಅದಕ್ಕೆ ಈ ತಳಿಯನ್ನು ರಕ್ಷಿಸುವ ಬಗ್ಗೆ ಕಾಳಜಿ ಇಲ್ಲ. ಅದರ ಬದಲಾಗಿ ಕಾವಲಿಗೆ ಸೇರಿರುವ ಸಾವಿರಾರು ಎಕರೆ ಭೂಮಿಯನ್ನು ಗೋರಕ್ಷಣೆಯ ಹೆಸರಲ್ಲಿ ಯಾವುದೋ ಸಂಘಪರಿವಾರದ ಸ್ವಾಮಿಗೆ ನೀಡುವ ಹುಮ್ಮಸ್ಸು ಬಿಜೆಪಿ ಸರ್ಕಾರದ್ದು. ಯಾಕೆಂದರೆ ಹಾಗೆ ಮಾಡಿದಾಗ ಹೆಸರಿಗೆ ಗೋವುಗಳನ್ನು ರಕ್ಷಿಸದಂತಾಗುತ್ತದೆ, ಆದರೆ ವಾಸ್ತವದಲ್ಲಿ ಕೋಟ್ಯಂತರ ರೂಪಾಯಿ ಬೆಲೆಬಾಳುವ ರಿಯಲ್‌ಎಸ್ಟೇಟ್ ದಂಧೆಯನ್ನೂ ಸುಲಭವಾಗಿ ನಿಭಾಯಿಸದಂತಾಗುತ್ತದೆ.

ಇವತ್ತು ಅಮೃತಮಹಲ್ ಕೇಂದ್ರದಲ್ಲಿ ಅಷ್ಟಿಷ್ಟು ರಾಸುಗಳು ಇದ್ದರೆ ಅದಕ್ಕೆ ತಿಪ್ಪೇಸ್ವಾಮಿ ತರಹದವರ ಶ್ರಮವೇ ಕಾರಣ ಎನಿಸುತ್ತದೆ. ಕಳೆದ ಇಪ್ಪತ್ತು ವರ್ಷಗಳಿಂದ ರಾಸುಗಳನ್ನು ಕಾಯುತ್ತಿರುವ ತಿಪ್ಪೇಸ್ವಾಮಿ ಪ್ರತಿಯೊಂದಕ್ಕೆ ಹೆಸರಿಟ್ಟು ಅವುಗಳನ್ನು ದೂರದಿಂದಲೇ ಕರಾರುವಾಕ್ಕಾಗಿ ಗುರುತಿಸುತ್ತಾರೆ. ಅಷ್ಟೇ ಅಲ್ಲ, ಪ್ರತಿ ರಾಸು ಯಾವ ಕೇಂದ್ರದ್ದು, ಯಾವ ವರ್ಷ ಜನಿಸಿತು ಎಂದೂ ಹೇಳುತ್ತಾರೆ.


ತಿಪ್ಪೇಸ್ವಾಮಿಯಂತಹ ಕೆಲಸಗಾರರನ್ನು, ದಕ್ಷ ಅಧಿಕಾರಿಯನ್ನು ಸರ್ಕಾರ ನೇಮಿಸಬೇಕಿದೆ. ಹಾಗೆಯೇ ಅಮೃತ ಮಹಲ್ ರಾಸುಗಳು ಇತರೆ ಪ್ರಾಣಿಗಳಂತೆ ವರ್ಷ ಪೂರ್ತಿ ಆಹಾರ ಹುಡುಕಿಕೊಂಡು ಒಂದು ಕೇಂದ್ರದಿಂದ ಇನ್ನೊಂದು ಕೇಂದ್ರಕ್ಕೆ ವಲಸೆ ಹೋಗುವುದರಿಂದ ಎಲ್ಲಾ ಕೇಂದ್ರಗಳ ಅಭಿವೃದ್ಧಿಗೆ ಒಂದು ಸಮರ್ಪಕವಾದ ಯೋಜನೆಯನ್ನು ರೂಪಿಸಬೇಕಿದೆ. ಸಹಸ್ರಾರು ವರ್ಷಗಳಿಂದ ಕೇಂದ್ರ ಸ್ಥಾನವಾದ ಅಜ್ಜಂಪುರ ಕೇಂದ್ರವನ್ನು ಸರಿಪಡಿಸಬೇಕಿದೆ.

ಇದ್ಯಾವುದೂ ಅನಗತ್ಯ ವೆಚ್ಚಗಳಲ್ಲ. ಇವತ್ತಿಗೂ ಅಮೃತ ಮಹಲ್‌ನ ಒಂದು ಜೋಡಿ ಹೋರಿ ಒಂದು ಲಕ್ಷ ರೂಪಾಯಿಗಳಿಗೆ ಮಾರಾಟವಾಗುತ್ತವೆಂದರೆ, ಅವುಗಳು ಇನ್ನಷ್ಟು ಬಲಿಷ್ಟವಾದರೆ ಅವುಗಳ ಮಾರಾಟದಿಂದಲೇ ಅಮೃತ್ ಮಹಲ್ ತಳಿ ರಕ್ಷಣೆಗೆ ಸಾಕಷ್ಟು ಹಣ ಬರುತ್ತದೆ. ಕೆಲವೇ ವರ್ಷಗಳಲ್ಲಿ ಅದು ಸ್ವಾವಲಂಬಿಗಳಾಗುತ್ತವೆ. 1985-86ರಲ್ಲಿ ಇದನ್ನೆಲ್ಲ ಡಾ. ಕೃಷ್ಣಮೂರ್ತಿ ಎಂಬ ಅಧಿಕಾರಿ ಸಾಧಿಸಿ ತೋರಿಸಿದ್ದಾರೆ.

ಅವರ ಯಶಸ್ಸನ್ನು ಪುನರಾವರ್ತನೆಗೊಳಿಸಲು ಬೇಕಿರುವುದು ಢೋಂಗಿ ಘೋಷಣೆಗಳಲ್ಲ, ಕಪಟ ಕಾಳಜಿಯಲ್ಲ, ಬದಲಾಗಿ ರಾಜಕೀಯ ಇಚ್ಛಾಶಕ್ತಿ. 'ಪಶು' ಬೆಳಮಗಿ ಮತ್ತು ಯಡಿಯೂರಪ್ಪ ಹಾಲು ಕುಡಿದು ಬೆಳೆದವರೇ ಆಗಿದ್ದರೆ, ಅವರಿಗೆ ಅಮೃತ ಮಹಲ್ ಎಂಬ ಅದ್ಭುತ ತಳಿಯನ್ನು ರಕ್ಷಿಸುವ ಬಗ್ಗೆ ನಿಜವಾಗಲೂ ಕಾಳಜಿ ಇದ್ದದ್ದೇ ಆದರೆ ಅವರು ಕೂಡಲೇ ಅಂತಹ ಇಚ್ಛಾಶಕ್ತಿಯನ್ನು ಪ್ರದರ್ಶಿಸಲಿ.

ಇಲ್ಲವಾದರೆ ಅವರನ್ನೂ, ಅವರ ಕಾವಿಧಾರಿ ಮಿತ್ರರನ್ನು ಅಜ್ಜಂಪುರದ ಜನ ಅಟ್ಟಿಸಿಕೊಂಡು ಓಡಿಸುತ್ತಾರೆ. ಮೊನ್ನೆ ಬೆಳಮಗಿ ಜೊತೆಗೆ ಹೋಗಿದ್ದ ಕಾವಿಧಾರಿಯನ್ನು ಓಡಿಸಿದಂತೆ! ■






ನಂದಿನಿ ಹಾಲಿಗೆ ಹಾಲಾಹಲ!


ರೇವಣ್ಣ ವಿರುದ್ಧ ರೆಡ್ಡಿಗಳ ದಾಳಿ

ಕೆಎಂಎಫ್ ಅಂದರೆ ಕರ್ನಾಟಕ ಹಾಲು ಒಕ್ಕೂಟಕ್ಕೂ ಬಳ್ಳಾರಿಯ ಗಣಿಕಳ್ಳರಿಗೂ ಏನು ಸಂಬಂಧ ಎಂದು ಯಾರಾದರೂ ಪ್ರಶ್ನೆಯಿಟ್ಟರೆ, ರಾಮಾಯಣಕ್ಕೂ ಇಮಾಮ್ ಸಾಬಿಗೂ ಎಂಥ ಸಂಬಂಧವೆಂಬ ಪ್ರತಿಪ್ರಶ್ನೆ ತಾನೇ ಉತ್ತರವಾಗುವುದು?

ದುರಂತವನ್ನು ವಿಚಿತ್ರವನ್ನು; ಬಳ್ಳಾರಿಯ ಗಣಿಕಳ್ಳ ರೆಡ್ಡಿಗಳ ಶನಿದೃಷ್ಟಿಯೀಗ ನಂದಿನಿ ಹಾಲಿನ ಮೇಲೆ ಬಿದ್ದಿದೆ. ದೇವೇಗೌಡರ ಕುಟುಂಬವನ್ನು ನೆಲಕಚ್ಚಿಸುವ ಗಣಿರೆಡ್ಡಿಗಳ ಹುನ್ನಾರಕ್ಕೆ ಕೆಎಂಎಫ್ (Karnataka Milk Federation) ಅಂದರೆ ಕರ್ನಾಟಕ ಹಾಲು ಒಕ್ಕೂಟ ಬಲಿಯಾಗಲೇಬೇಕಿದೆ!

ಕಳೆದೊಂದು ದಶಕದಿಂದ ಕೆಎಂಎಫ್ ಅಧ್ಯಕ್ಷನಾಗಿರುವ ದೇವೇಗೌಡರ ಪುತ್ರ ಎಚ್.ಡಿ. ರೇವಣ್ಣನವರನ್ನು ಪದಚ್ಯುತಿಗೊಳಿಸಿ ಆ ಜಾಗಕ್ಕೆ ಬಳ್ಳಾರಿಯ ಶಾಸಕ ಮತ್ತು ಗಣಿಕಳ್ಳ ಜನಾರ್ದನ ರೆಡ್ಡಿಯ ಖಾಸಾ ಅಣ್ಣ ಸೋಮಶೇಖರ ರೆಡ್ಡಿಯನ್ನು ತರುವ ಅಪಾಯಕಾರಿ ಷಡ್ಯಂತ್ರವೊಂದು ಸದ್ದಿಲ್ಲದೇ ರೂಪುಗೊಳ್ಳುತ್ತಿದೆ.





ಗಣಿಕಳ್ಳರ ಪೈಕಿ ಸೋಮಶೇಖರ ರೆಡ್ಡಿಯಾಗಲಿ, ಆತನ ಅಣ್ಣ ಕಂದಾಯ ಮಂತ್ರಿ ಕರುಣಾಕರ ರೆಡ್ಡಿಯಾಗಲಿ ಅಥವಾ ಖತರ್‌ನಾಕ್ ತಮ್ಮ ಜನಾರ್ದನ್ ರೆಡ್ಡಿಯಾಗಲಿ ಹಾಲು ಒಕ್ಕೂಟಕ್ಕೆ ಅಧ್ಯಕ್ಷರಾಗಕೂಡದು ಎಂದಲ್ಲ. ಕೆಎಂಎಫ್ ರೇವಣ್ಣನ ಪಿತ್ರಾರ್ಜಿತ ಆಸ್ತಿಯೂ ಅಲ್ಲ. ಆದರೆ ದೇಶದ ಎರಡನೇ ಮಹೋನ್ನತ ಹಾಲು ಒಕ್ಕೂಟವೊಂದು, ಕೋಟಿಗಟ್ಟಲೇ ರೈತರ ಅನ್ನದ ದಾರಿಯಾಗಿರುವ ವ್ಯವಸ್ಥೆಯೊಂದು ರಾಜಕೀಯದ ಜಿದ್ದಾಜಿದ್ದಿಗೆ ಸಿಲುಕಿ ಗಣಿ ಖದೀಮರ ಪಾಲಾದರೆ ಅದು ಕೋತಿ ಕೈಗೆ ಮಾಣಿಕ್ಯ ಸಿಕ್ಕಷ್ಟೇ ಅನರ್ಥಕಾರಿ– ಇದು ಕರ್ನಾಟಕದ ಕೋಟಿಗಟ್ಟಲೇ ಬಡರೈತರ ಆತಂಕವಷ್ಟೇ ಅಲ್ಲ, ಗಣಿಕಳ್ಳರ ಷಡ್ಯಂತ್ರದ ಅರಿವುಳ್ಳ ಪ್ರತಿಯೊಬ್ಬರನ್ನೂ ಕಾಡುವ ಪ್ರಶ್ನೆ. ಗುಜರಾತ್‌ನ ಅಮುಲ್ ಬಿಟ್ಟರೆ ಕೆಎಂಎಫ್‌ಗೆ ದೇಶದ ಎರಡನೇ ಅತ್ಯುತ್ಕೃಷ್ಟ ಮತ್ತು ಶ್ರೇಷ್ಠ ಹಾಲು ಒಕ್ಕೂಟವೆಂಬ ಹೆಗ್ಗಳಿಕೆಯಿದೆ. ಕರ್ನಾಟಕದ ಹಳ್ಳಿಹಳ್ಳಿಗಳಿಂದಲೂ ಸಂಗ್ರಹಗೊಳ್ಳುವ 'ನಂದಿನಿ' ಹಾಲೆಂದರೆ ಅಕ್ಕಪಕ್ಕದ ಕೇರಳ, ತಮಿಳುನಾಡು, ಮಹಾರಾಷ್ಟ್ರಗಳಲ್ಲೂ ಜನ ಮುಗಿಬಿದ್ದು ಖರೀದಿಸುತ್ತಾರೆ. ದೂರದ ಕೊಲ್ಕತ್ತಾ, ದೆಹಲಿಗಳ ಮಿಲ್ಕ್ ಫೆಡರೇಷನ್ನಿಗೆ ಕೆಎಂಎಫ್ ಕಳಿಸುವ ಹಾಲಿನ ಪುಡಿಯೆಂದರೆ ಬಲುಪ್ರೀತಿ.

ದೇವೇಗೌಡರ ಕುಟುಂಬ ಕರ್ನಾಟಕಕ್ಕೆ ಬೇರೇನೂ ಮಾಡದೇ ಹೋದರೂ ಕೆಎಂಎಫ್‌ನಂಥ ಯಶಸ್ವಿ ಹಾಲು ಒಕ್ಕೂಟವೊಂದನ್ನು ಕಟ್ಟಿ ಬೆಳೆಸಿದೆಯಲ್ಲ; ಕನಿಷ್ಠ ಇದಕ್ಕಾದರೂ ಮಣ್ಣಿನ ಮಕ್ಕಳನ್ನು ಮೆಚ್ಚಲೇಬೇಕು. ಒಕ್ಕೂಟದ ಹಾಲಿ ಅಧ್ಯಕ್ಷ ಎಚ್.ಡಿ. ರೇವಣ್ಣ ಓರ್ವ ರಾಜಕಾರಣಿಯಾಗಿ ದುಷ್ಟನಿರಬಹುದು. ಮಂತ್ರಿಯಾಗಿ ಭ್ರಷ್ಟನಿರಬಹುದು. ಆದರೆ ಕೆಎಂಎಫ್ ವಿಷಯಕ್ಕೆ ಬಂದರೆ ಆತ ಪಕ್ಕಾ ಮಣ್ಣಿನ ಮಗ. ಯಾವತ್ತೂ ಒಕ್ಕೂಟದ ಕೆಚ್ಚಲು ಕುಯ್ಯುವ ಮಟ್ಟಕ್ಕಿಳಿದವನಲ್ಲ. ಬಹುಶಃ ಮಂತ್ರಿಗಿರಿಯಿತ್ತಾದ್ದರಿಂದ ಅದರ ಅಗತ್ಯ ಬಂದಿರಲಿಕ್ಕಿಲ್ಲ!

1981 ರಿಂದ ಹೊಳೆನರಸೀಪುರ ತಾಲ್ಲೂಕು ಪಡುವಲಹಿಪ್ಪೆಯ ಹಾಲು ಉತ್ಪಾದಕರ ಸಹಕಾರ ಸಂಘದ ಸದಸ್ಯನಾಗಿದ್ದ ರೇವಣ್ಣ ಮೊದಲಬಾರಿಗೆ ಒಕ್ಕೂಟದ ರಾಜಕೀಯಕ್ಕಿಳಿದದ್ದು 1995 ರಲ್ಲಿ. ಅಪ್ಪನೇ ಮುಖ್ಯಮಂತ್ರಿಯಾಗಿದ್ದಾಂದಾಗಿ ರೇವಣ್ಣ ಹಾಸನ ಜಿಲ್ಲಾ ಹಾಲು ಒಕ್ಕೂಟಕ್ಕೆ ಅಧ್ಯಕ್ಷನಾಗಿ ಗೆದ್ದ. ಆನಂತರ ರಾಜ್ಯಮಟ್ಟದ ಕೆಎಂಎಫ್‌ಗೂ ರೇವಣ್ಣನೇ ಅಧ್ಯಕ್ಷನಾದ. ಪಟೇಲ್ ಸಂಪುಟದ ಮಂತ್ರಿಗಿರಿಯ ಮುಂದೆ ಕೆಎಂಎಫ್ ಅಧ್ಯಕ್ಷಗಾದಿ ಏನೇನೂ ಅಲ್ಲವಾದರೂ ರೇವಣ್ಣ ಮಾತ್ರ ಯಾವುದೋ ಬಾದರಾಯಣ ಸಂಬಂಧದಂತೆ ಕೆಎಂಎಫ್‌ಗೇ ಅಂಟಿಕೊಂಡಿದ್ದ. 1995 ರಿಂದ 2001 ರತನಕ ಅಧ್ಯಕ್ಷಗಾದಿಯಲ್ಲಿದ್ದ ರೇವಣ್ಣ ಮಧ್ಯೆ ಮೂರು ವರ್ಷ ಅಧ್ಯಕ್ಷನಾಗಿರಲಿಲ್ಲ ಎಂಬುದನ್ನು ಬಿಟ್ಟರೆ 2004 ರಿಂದ ಈತನಕ ಇಳಿಯಲೇ ಇಲ್ಲ.

ಈ ಹನ್ನೆರಡು ವರ್ಷಗಳ ರೇವಣ್ಣನ ಆಳ್ವಿಕೆಗೂ ಅದಕ್ಕೂ ಮೊದಲಿದ್ದ ಕೆಎಂಎಫ್ ಸ್ಥಿತಿಗತಿಗೂ ಇರುವ ವ್ಯತ್ಯಾಸವಾದರೂ ಎಂಥಾದ್ದು?

1995 ರ ಹೊತ್ತಿಗೆ ಇಡೀ ಕರ್ನಾಟಕದ ಹಾಲು ಶೇಖರಣೆಯ ಪ್ರಮಾಣ ಪ್ರತಿನಿತ್ಯ 12 ಲಕ್ಷ ಲೀಟರುಗಳಷ್ಟಿತ್ತು. ಈ ಪೈಕಿ ಆರು ಲಕ್ಷ ಲೀಟರುಗಳಷ್ಟು ಹಾಲನ್ನು ಮಾರಿ ಉಳಿದದ್ದನ್ನು ಪುಡಿ ಮಾಡಿ ಮಾರುತ್ತಿದ್ದರು. ಇವತ್ತಿಗದು ಪ್ರತಿನಿತ್ಯ ನಲವತ್ತು ಲಕ್ಷ ಲೀಟರುಗಳಷ್ಟು ಶೇಖರಿಸುತ್ತಿದೆ. ಹೀಗೆ ಶೇಖರಿಸಲ್ಪಟ್ಟ ಹಾಲಿನಲ್ಲಿ 27 ಲಕ್ಷ ಲೀಟರುಗಳಷ್ಟು ಮಾರಾಟವಾಗಿ ಉಳಿದದ್ದು ಪುಡಿಯಾಗಿ ದೆಹಲಿ, ಕೊಲ್ಕತ್ತಗಳ ಮಾರುಕಟ್ಟೆಗೆ ರವಾನೆಯಾಗುತ್ತದೆ. 1995 ರ ಹೊತ್ತಿಗೆ ಪ್ರತಿವರ್ಷ 360 ಕೋಟಿ ರೂಪಾಯಿಗಳಷ್ಟಿದ್ದ ಕೆಎಂಎಫ್‌ನ ವಾರ್ಷಿಕ ವಹಿವಾಟು ಈಗ 3600 ಕೋಟಿ ರೂಪಾಯಿಗಳ ತನಕ ಬಂದು ನಿಂತಿದೆ.


ಕರ್ನಾಟಕದ ಮಟ್ಟಿಗಿದು ಕ್ಷೀರ ಕ್ರಾಂತಿಯೇ ಸರಿ. ಲೀಟರಿಗೆ ಹನ್ನೆರಡೂವರೆ ರೂಪಾಯಿಯಿಂದ ಹದಿಮೂರು ರೂಪಾಯಿ ತನಕ ನಲವತ್ತು ಲಕ್ಷ ಲೀಟರುಗಳಿಗೆ ಲೆಕ್ಕ ಹಾಕಿದರೆ ದಿನವೊಂದಕ್ಕೆ ಕರ್ನಾಟಕದ ರೈತರಿಗೆ ಕೆಎಂಎಫ್ ಒಂದೇ ಐದೂಕಾಲು ಕೋಟಿ ರೂಪಾಯಿಗಳಷ್ಟು ಬಟವಾಡೆ ಮಾಡುತ್ತದೆ. ಹಿಂದಾದರೆ ರೈತರು ಉತ್ಪಾದಿಸಿದ ಹಾಲನ್ನು ಶೇಖರಿಸಿಡುವ ಶಕ್ತಿಯಿಲ್ಲದೇ ಕೆಎಂಎಫ್ ಹಾಲಿನ ರಜಾ ಘೋಷಿಸುತ್ತಿತ್ತು. ಅಂದರೆ ಸೊಸೈಟಿಗೆ ರೈತ ಹಾಲು ತಂದರೂ ಅದನ್ನು ಕೆಎಂಎಫ್ ತಿರಸ್ಕರಿಸುತ್ತಿತ್ತು. ಒಂದೆಡೆ ಮಾರುಕಟ್ಟೆಯ ಕೊರತೆಯಾದರೆ ಮತ್ತೊಂದೆಡೆ ಶೇಖರಿಸಲು ವ್ಯವಸ್ಥೆಯ ಕೊರತೆಯಿತ್ತು. ಈಗ ಹಾಗಿಲ್ಲ. ಎಷ್ಟೇ ಹಾಲು ತಂದರೂ ಅದನ್ನು ಖರೀದಿಸುವಷ್ಟು ಕೆಎಂಎಫ್ ಬಲಾಢ್ಯವಾಗಿದೆ.

ನಂದಿನಿ ಬ್ರಾಂಡ್‌ಗಿದ್ದ ಕರ್ನಾಟಕದ ಮಾರುಕಟ್ಟೆಗೆ ಲಗ್ಗೆ ಹಾಕಲು ಆಂಧ್ರದ ಚಂದ್ರಬಾಬು ನಾಯ್ಡು ಒಡೆತನದ 'ಹೆರಿಟೇಜ್' ಹಾಲು ಬಂತು. ತಮಿಳುನಾಡಿನ ನೀಲಗಿರೀಸ್ ಮತ್ತು ಆರೋಗ್ಯ ಎಂಬ ಇನ್ನೆರಡು ಬ್ರಾಂಡ್‌ಗಳಲ್ಲದೆ 'ದೋಡ್ಲ' ಎಂಬ ಮಾರ್ವಾಡಿ ಕಂಪೆನಿಯ ಹಾಲುಗಳೂ ಮಾರುಕಟ್ಟೆಗೆ ದಾಳಿಯಿಟ್ಟವು. ಆದರೆ 'ನಂದಿನಿ'ಯ ಜನಪ್ರಿಯತೆ ಮತ್ತು ಗುಣಮಟ್ಟದ ಮುಂದೆ ಈ ಯಾವ ಬ್ರಾಂಡುಗಳೂ ನಿಲ್ಲಲೇ ಇಲ್ಲ.

ಇದು ಕೆಎಂಎಫ್‌ನ ಹೆಗ್ಗಳಿಕೆ. ಸಹಕಾರಿ ವ್ಯವಸ್ಥೆಯ ಅದೆಷ್ಟೋ ಬ್ಯಾಂಕುಗಳು ಸೊಸೈಟಿಗಳು ದುರಾಡಳಿತ ಮತ್ತು ಭ್ರಷ್ಟಾಚಾರಕ್ಕೆ ಸಿಲುಕಿ ಕೊನೆಯುಸಿರೆಳೆಯುತ್ತಿದ್ದರೆ ಕೆಎಂಎಫ್ ಮಾತ್ರ ದಿನೇದಿನೇ ಬೆಳೆಯುತ್ತಲೇ ಇದೆ. ನಂದಿನಿ ಹಾಲಿನ ಗುಣಮಟ್ಟವಂತೂ ದೇಶದ ನಂ. 2 ಬ್ರಾಂಡ್ ಆದ ಅಮುಲ್ ಹಾಲಿನ ರುಚಿಯನ್ನು ಯಾವತ್ತಿಗೋ ಮೀರಿಸಿದೆ.

ಇದು ಕೆಎಂಎಫ್ ಅಧ್ಯಕ್ಷ ಎಚ್.ಡಿ. ರೇವಣ್ಣನೊಬ್ಬನ ಸಾಧನೆಯಲ್ಲ ನಿಜ. ಈತನಕ ಕೆಎಂಎಫ್‌ನ ಮುಖ್ಯಸ್ಥರಾಗಿದ್ದ ಡಾ. ಚನ್ನೇಗೌಡ, ಡಾ. ಗಂಗಾಧರ್, ಜಯಪ್ರಕಾಶ್ ರೆಡ್ಡಿ ಮತ್ತು ಈಗಿರುವ ರಾಮಲಿಂಗೇಗೌಡರಂಥ ದಕ್ಷ ವ್ಯವಸ್ಥಾಪಕ ನಿರ್ದೇಶಕರೆಲ್ಲ ನಂದಿನಿ ಬ್ರಾಂಡಿಗಾಗಿ ಜೀವ ತೇದಿದ್ದಾರೆ. ಕೋಟ್ಯಂತರ ರೈತರು ಪ್ರತಿನಿತ್ಯ ಹೈನುಗಾರಿಕೆ ಮಾಡಿ ಕೆಎಂಎಫ್ ಕಟ್ಟಿ ಬೆಳೆಸಿದ್ದಾರೆ. ದೇವೇಗೌಡರ ಕುಟುಂಬ ಬೇರೆಲ್ಲಾ ವಲಯಗಳಲ್ಲಿ ಏನೇ ಅನಾಹುತಗೈದರೂ ಕೆಎಂಎಫ್ ವಿಷಯದಲ್ಲಿ ಮಾತ್ರ ದುಷ್ಟರಾಗಲಿಲ್ಲ.

ಈಗ ದೇವೇಗೌಡರ ಕುಟುಂಬದ ಮೇಲೆ ಜಿದ್ದಿಗೆ ಬಿದ್ದ ಗಣಿರೆಡ್ಡಿಗಳಿಗೆ ಕೆಎಂಎಫ್ ವಶಪಡಿಸಿಕೊಳ್ಳಬೇಕಿದೆ. ಕಳೆದ ಒಂದು ವರ್ಷದಿಂದ ರೇವಣ್ಣನ ಅಧ್ಯಕ್ಷಗಾದಿಯ ಮೇಲೆ ಕಣ್ಣಿಟ್ಟ ರೆಡ್ಡಿಗಳು ಬಳ್ಳಾರಿ ಶಾಸಕ ಸೋಮಶೇಖರ ರೆಡ್ಡಿಯನ್ನು ಛೂ ಬಿಟ್ಟಿದ್ದಾರೆ. ಅದೆಷ್ಟು ವ್ಯವಸ್ಥಿತವಾಗಿ ಗಣಿಕಳ್ಳರು ಷಡ್ಯಂತ್ರ ಹೆಣೆದಿದ್ದಾರೆಂದರೆ, ಗಣಿಚೋರ ಸೋಮಶೇಖರ್ ರೆಡ್ಡಿ ಕೂಡ ಓರ್ವ ಹಾಲು ಉತ್ಪಾದಕನಂತೆ!



ಇದೇ ಜುಲೈ 30 ಕ್ಕೆ ಕೆಎಂಎಫ್‌ಗೆ ಹೊಸ ಅಧ್ಯಕ್ಷರ ಆಯ್ಕೆಯಾಗಬೇಕು. ಸರ್ಕಾರ ಈಗಾಗಲೇ ಚುನಾವಣೆಗೆಂದು ಸುತ್ತೋಲೆ ಹೊರಡಿಸಿಬಿಟ್ಟಿದೆ. ಇದೇ ಜುಲೈ 3 ಕ್ಕೆ ಆಯಾ ಜಿಲ್ಲಾವಾರು ಅಧ್ಯಕ್ಷರು ಮತ್ತು ರಾಜ್ಯ ಸಮಿತಿಗೆ ನಿರ್ದೇಶಕರ ಆಯ್ಕೆ ನಡೆದು ಗೆದ್ದ ನಿರ್ದೇಶಕರೆಲ್ಲ ಸೇರಿ ಕೆಎಂಎಫ್‌ನ ರಾಜ್ಯ ಅಧ್ಯಕ್ಷರನ್ನು ಆಯ್ಕೆ ಮಾಡುತ್ತಾರೆ. ಈ ಬಾರಿ ಶತಾಯ ಗತಾಯ ರೇವಣ್ಣನ ಪದ ಚ್ಯುತಿಗೊಳಿಸಿ ಆ ಜಾಗಕ್ಕೆ ಗಣಿ ಚೋರ ಸೋಮಶೇಖರ ರೆಡ್ಡಿಯನ್ನು ತರುವ ಹುನ್ನಾರಕ್ಕೆ ಮುಖ್ಯಮಂತ್ರಿ ಯಡ್ಡಿಯೇ ರೂವಾರಿ.

ನ್ಯಾಯಬದ್ಧ ಚುನಾವಣೆಯಾದರೆ ರೇವಣ್ಣನೇ ಮತ್ತೊಮ್ಮೆ ಅಧ್ಯಕ್ಷನಾಗುತ್ತಾನೆಂಬುದು ಯಡ್ಡಿ ಸರ್ಕಾರಕ್ಕೆ ಚೆನ್ನಾಗಿ ಗೊತ್ತಿದೆ. ಮೋಸ ಮಾಡಿಯಾದರೂ ರೇವಣ್ಣನನ್ನು ಕೆಡವಬೇಕಲ್ಲ; ಅದಕ್ಕೊಂದು ಯಡ್ಡಿಯೇ ನಿಂತು ಕೆಎಂಎಫ್‌ನಲ್ಲಿ ಅವ್ಯವಹಾರ ನಡೆದಿದೆ ಎಂದು ಬೊಬ್ಬೆಯಿಟ್ಟರು. ಇಡೀ ಕೆಎಂಎಫ್‌ನ ಲೆಕ್ಕ ಪರಿಶೋಧಿಸಲೆಂದು ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಜಂಟಿ ನಿರ್ದೇಶಕ ರತ್ನಾನಾಯಕ್‌ನನ್ನು ಛೂ ಬಿಟ್ಟರು. ಏನೆಲ್ಲ ಸರ್ಕಸ್‌ಮಾಡಿ ಲಗಾಟ ಹೊಡೆದರೂ ಲೆಕ್ಕ ಪರಿಶೋಧಕ ರತ್ನಾನಾಯಕ್ ಕಂಡುಹಿಡಿದದ್ದು ನೇಮಕಾತಿಯಲ್ಲಿ ರೋಸ್ಟರ್ ಪಾಲಿಸಲಿಲ್ಲ ಎಂಬ ಪಿಳ್ಳೇನೆಪವನ್ನೇ ಹೊರತು ದುಡ್ಡೂಕಾಸಿನ ಅವ್ಯವಹಾರವಾಗಲಿ, ಅಧಿಕಾರ ದುರುಪಯೋಗವಾಗಲಿ, ದೊಡ್ಡಮಟ್ಟದ ಭ್ರಷ್ಟಾಚಾರವಾಗಲಿ ನಡೆದಿರಲಿಲ್ಲ.

ನೇಮಕಾತಿಯಲ್ಲಿ ರೋಸ್ಟರ್ ಪಾಲಿಸದೇ ಇದ್ದದ್ದು ಕೆಎಂಎಫ್‌ನ ಸಿಬ್ಬಂದಿ ವಿಭಾಗದ ಮುಖ್ಯಸ್ಥನ ಲೋಪವಾಗಿತ್ತೇ ಹೊರತು ಅದಕ್ಕೂ ದೇವೇಗೌಡರ ಕುಟುಂಬಕ್ಕೂ ಸಂಬಂಧವಿರಲಿಲ್ಲ. ಯಾವತ್ತು ಲೆಕ್ಕಪರಿಶೋಧಕರಿಂದ ರೇವಣ್ಣನಿಗೆ ಕ್ಲೀನ್ ಚಿಟ್ ಸಿಕ್ಕಿತೋ ಹತಾಶೆಗೆ ಬಿದ್ದ ಯಡ್ಡಿ ಸರ್ಕಾರ ರೈತನಿಗೆ ಪ್ರತಿ ಲೀಟರ್ ಹಾಲಿಗೆ ಎರಡು ರೂಪಾಯಿಗಳ ಸಹಾಯಧನದ ಆಮಿಷವೊಡ್ಡಿತು.

ಇದರಿಂದ ರೈತರೆಲ್ಲ ದೇವೇಗೌಡರ ಫ್ಯಾಮಿಲಿ ವಿರುದ್ಧ ತಿರುಗಿಬಿದ್ದು ಬಿಜೆಪಿಯನ್ನು ಆರಾಧಿಸುತ್ತಾರೆಂಬ ಯಡ್ಡಿಯ ಹುನ್ನಾರ ಮೂರೇ ತಿಂಗಳಿಗೆ ಉಲ್ಟಾ ಹೊಡೆಯಿತು. ಲೀಟರ್ ಹಾಲಿಗೆ ಎರಡು ರೂಪಾಯಿ ಸಹಾಯಧನವೆಂದರೆ ತಿಂಗಳೊಂದಕ್ಕೆ ಅದೇ ಇಪ್ಪತ್ತೈದು ಕೋಟಿಯಾಗುತ್ತದೆ. ಜಿದ್ದಿಗೆ ಬಿದ್ದು ವೀರಾವೇಶದ ಭರವಸೆ ಕೊಟ್ಟ ಯಡ್ಡಿ ಸರ್ಕಾರ ಮೊದಲ ಮೂರು ತಿಂಗಳಷ್ಟೇ ಸಬ್ಸಿಡಿ ಕೊಟ್ಟು ಸುಸ್ತು ಹೊಡೆದಿತು. ಕಳೆದ ಐದು ತಿಂಗಳಿಂದ ಯಾವೊಬ್ಬ ರೈತನಿಗೂ ನಯಾಪೈಸೆಯ ಸಬ್ಸಿಡಿ ಕೊಟ್ಟಿಲ್ಲ. ಇವತ್ತು ಕೊಡ್ತೀವಿ, ನಾಳೆ ಕೊಡ್ತೀವಿ ಎಂದು ದಿನ ತಳ್ಳಿಕೊಂಡೇ ಬಂದ ಯಡ್ಡಿ ಸರ್ಕಾರ ಈಗ ಸಾರಾಸಗಟಾಗಿ ರೈತರಿಗೆ ಕೈ ಎತ್ತಿದೆ. ನೌಕರರಿಗೆ ಸಂಬಳ ಕೊಡುವುದಕ್ಕೇ ದುಡ್ಡಿಲ್ಲ, ಖಜಾನೆ ಖಾಲಿ ಬಿದ್ದಿದೆ. ಇನ್ನು ಹಾಲು ಉತ್ಪಾದಕರಿಗೆಂದು ಅದೆಲ್ಲಿಂದ ದುಡ್ಡು ತರುತ್ತಾರೆ?



ಯಡ್ಡಿ-ರೆಡ್ಡಿಗಳ ಇಂಥ ಸಬ್ಸಿಡಿ ಗಿಮ್ಮಿಕ್ ನೆಲಕಚ್ಚಿದ್ದೇ ತಡ ಗಣಿಕಳ್ಳರು ರೇವಣ್ಣನ ವಿರುದ್ಧ ಹೊಸದೊಂದು ಅಸ್ತ್ರ ಬಿಟ್ಟಿದ್ದಾರೆ. ಅದು ಒಕ್ಕೂಟದ ವಿಸ್ತರಣಾಧಿಕಾರಿಗಳನ್ನೆಲ್ಲ ಸಾರಾಸಗಟಾಗಿ ಬುಟ್ಟಿಗೆ ಹಾಕಿಕೊಳ್ಳುವ ಕಪಟ ನಾಟಕ!

▶▶▶

ಅದಿರು ದೋಚುವುದಕ್ಕೆ ಟೈಮಿಲ್ಲದವನು ಹಾಲೆಂದು ಕರೆದ?

ನಂಬಿದರೆ ನಂಬಿ ಬಿಟ್ಟರೆ ಬಿಡಿ ಗಣಿಧೂರ್ತ ಸೋಮಶೇಖರ ರೆಡ್ಡಿ ಕೂಡ ಹಾಲು ಕರೆಯುವ ರೈತನಂತೆ. ಬಳ್ಳಾರಿ ಸಮೀಪದ ಶ್ರೀಧರಗಡ್ಡ ಎಂಬ ಗ್ರಾಮದಲ್ಲಿ ಆತ ಪ್ರತಿನಿತ್ಯ ಹಾಲು ಕರೆದು ಡೈರಿಗೆ ಹಾಕುತ್ತಾನಂತೆ!

ಹಾಗೆಂದು ನಕಲಿ 'ದಾಖಲೆ ಸೃಷ್ಟಿಸಿ ಸೋಮಶೇಖರ ರೆಡ್ಡಿ ಕೂಡ ಓರ್ವ ಹಾಲು ಉತ್ಪಾದಕನೆಂಬ ಸೋಗಿನಲ್ಲಿ ಕೆಎಂಎಫ್ ಅಧ್ಯಕ್ಷಗಾದಿಗೆ ವಕ್ಕರಿಸುವ ಕುತಂತ್ರವೊಂದನ್ನು ಗಣಿಚೋರರು ಹೆಣೆದಿದ್ದಾರೆ. ಜಿಲ್ಲಾ ಹಾಲು ಒಕ್ಕೂಟದ ಅಧ್ಯಕ್ಷ ಪದವಿಗಾಗಲಿ, ಕೆಎಂಎಫ್‌ನ ನಿರ್ದೇಶಕ ಹುದ್ದೆಗಾಗಲಿ ಸ್ಪರ್ಧಿಸುವ ಯಾರೇ ಆದರೂ ಆತ ಹಳ್ಳಿಯ ಹಾಲು ಉತ್ಪಾದಕರ ಸಂಘದ ಸದಸ್ಯನಾಗಿರಬೇಕು ಮತ್ತು ಕನಿಷ್ಠ ನೂರಾ ಎಂಬತ್ತು ದಿನಗಳ ಕಾಲ ಸೊಸೈಟಿಗೆ ಹಾಲು ಹಾಕಿರಲೇಬೇಕೆಂಬುದು ಕೆಎಂಎಫ್‌ನ ಕಾನೂನು.


ಜನ್ಮಾಪಿ ಒಂದೇ ಒಂದು ಹಸುವಿಗೆ ನೀರು ಕೂಡ ಕೊಡದ ಗಣಿರೆಡ್ಡಿಗಳಿಗೆ ಯಾವ ಲೆಕ್ಕದಲ್ಲೂ ಹಾಲು ಒಕ್ಕೂಟದ ಸದಸ್ಯತ್ವ ಸಿಗಲೇಬಾರದು. ಆದರೆ ಕಳೆದ ಒಂದು ವರ್ಷದಿಂದ ಕೆಎಂಎಫ್ ಮೇಲೆ ಕಣ್ಣಿಟ್ಟು ಷಡ್ಯಂತ್ರ ಹೆಣೆಯುತ್ತಲೇ ಇದ್ದ ಗಣಿರೆಡ್ಡಿಗಳು ಇದಕ್ಕೆಂದು ನಕಲಿ ದಾಖಲೆ ಸೃಷ್ಟಿಸುತ್ತಲೇ ಬಂದರು. ಬಳ್ಳಾರಿ ಸಮೀಪದ ಶ್ರೀಧರಗಡ್ಡ ಗ್ರಾಮದಲ್ಲಿ ಸೋಮಶೇಖರ ರೆಡ್ಡಿ ವಾಸವಾಗಿದ್ದಾನೆಂದೂ ಆತ ಪ್ರತಿನಿತ್ಯ ಡೈರಿಗೆ ಹಾಲು ಹಾಕುತ್ತಾನೆಂದೂ ಕಳ್ಳದಾಖಲೆ ಹುಟ್ಟುಹಾಕಿದ್ದಾರೆ. ಇದನ್ನು ಆಧಾರವಾಗಿಟ್ಟುಕೊಂಡು ಸೋಮಶೇಖರ ರೆಡ್ಡಿ ಈಗ ಬಳ್ಳಾರಿ ಒಕ್ಕೂಟದ ಅಧ್ಯಕ್ಷನಾಗಿದ್ದಾನೆ.

ಹಕೀಕತ್ತೆಂದರೆ ಅಧಿಕೃತ ದಾಖಲೆಗಳ ಪ್ರಕಾರ ಸೋಮಶೇಖರ ರೆಡ್ಡಿ ಬಳ್ಳಾರಿ ನಗರದ ಕಾಯಂವಾಸಿ. ಬಳ್ಳಾರಿಯ 35ನೇ ವಾರ್ಡಿನ ಅವ್ವಂಬಾವಿಯ ಡೋರ್ ನಂ.52 ಆತನ ಕಾಯಂ ವಿಳಾಸ. ಬಳ್ಳಾರಿ ನಗರದ ಮತದಾರರ ಪಟ್ಟಿಯ 202ನೇ ಕ್ರಮಾಂಕದಲ್ಲಿ ಇವತ್ತಿಗೂ ಆತನ ಹೆಸರಿದೆ. ಮೊನ್ನೆ ನಡೆದ ವಿಧಾನಸಭಾ ಚುನಾವಣೆಯಲ್ಲೂ ಇದೇ ವಿಳಾಸ ಕೊಟ್ಟು ನಾಮಪತ್ರ ಸಲ್ಲಿಸಿದ್ದಾನೆ.

ಹಾಗಿದ್ದ ಮೇಲೆ ಸೋಮಶೇಖರ ರೆಡ್ಡಿ ಶ್ರೀಧರಗಡ್ಡದ ಹಾಲು ಡೈರಿಗೆ ಯಾವತ್ತು ಹಾಲು ಹಾಕಿದ? ಎಲ್ಲಿ ಹಾಲು ಕರೆದ? ಗಣಿ ದೋಚಿದ ರೊಕ್ಕ ಎಣಿಸುವುದಕ್ಕೆ ಟೈಮಿಲ್ಲದವನು ಪುಡಿಗಾಸಿನ ಹಾಲೆಲ್ಲಿ ಕರೆಯುತ್ತಾನೆ?

ಗಡಿ ನಕ್ಷೆಯಾಗಲಿ ಹಾಲಿನ ಡೈರಿಗಾಗಲಿ ನಕಲಿ ದಾಖಲೆ ಸೃಷ್ಟಿಸುವುದು ಗಣಿ ಕಳ್ಳರಿಗೆ ಯಾವ ಮಹಾ?

ಪ್ರತಿ ಜಿಲ್ಲೆಯಲ್ಲೂ ಕನಿಷ್ಠ ಮೂವತ್ತು ಮಂದಿ ವಿಸ್ತರಣಾಧಿಕಾರಿಗಳಿರುತ್ತಾರೆ. ಆಯಾ ಗ್ರಾಮದ ಹಾಲು ಉತ್ಪಾದಕರ ಸಂಘದ ಚಟುವಟಿಕೆ ಮತ್ತು ಕಾರ್ಯದಕ್ಷತೆಯ ಮೇಲೆ ಕಣ್ಣಿಟ್ಟು ರೈತರೊಂದಿಗೆ ನೇರಸಂಪರ್ಕವಿಟ್ಟುಕೊಳ್ಳುವುದು ಇಂಥ ವಿಸ್ತರಣಾಧಿಕಾರಿಗಳ ಕರ್ತವ್ಯ. ಇವರಿಗೆಂದು ಕೆಎಂಎಫ್ ಕೊಡುವ ಸಂಬಳ ತೀರಾ ಕಮ್ಮಿ. ಅಂದರೆ ತಿಂಗಳಿಗೆ ಎರಡೂವರೆ ಸಾವಿರದಷ್ಟು. ಕೊಪ್ಪಳ, ರಾಯಚೂರು ಜಿಲ್ಲೆಗಳನ್ನೊಳಗೊಂಡ ಬಳ್ಳಾರಿ ಒಕ್ಕೂಟವೊಂದರಲ್ಲೇ ಮೂವತ್ತು ಮಂದಿ ವಿಸ್ತರಣಾಧಿಕಾರಿಗಳಿದ್ದಾರೆ.



ಇಂಥ ವಿಸ್ತರಣಾಧಿಕಾರಿಗಳ ಮಾಸಿಕ ಸಂಬಳವನ್ನು ಏಕಾಏಕಿ ಏಳೂವರೆ ಸಾವಿರಕ್ಕೆ ಹೆಚ್ಚಿಸಿದ್ದು ಗಣಿರೆಡ್ಡಿಗಳು ರೇವಣ್ಣನ ವಿರುದ್ಧ ಬಳಸಿದ ಮತ್ತೊಂದು ಅಸ್ತ್ರ!

ಎರಡೂವರೆ ಸಾವಿರದ ಬದಲಿಗೆ ಏಳೂವರೆ ಸಾವಿರ ಮಾಡಿಬಿಟ್ಟರೆ ವಿಸ್ತರಣಾಧಿಕಾರಿಗಳೆಲ್ಲ ರೇವಣ್ಣನ ವಿರುದ್ಧ ತಿರುಗಿಬಿದ್ದು ಸೋಮಶೇಖರ ರೆಡ್ಡಿಯನ್ನು ಗೆಲ್ಲಿಸಲು ಹೆಣಗಾಡುತ್ತಾರೆಂಬುದು ಗಣಿ ಕಳ್ಳರ ಲೆಕ್ಕಾಚಾರ. ಪ್ರತಿ ವಿಸ್ತರಣಾಧಿಕಾರಿಗೆ ಐದು ಸಾವಿರ ರೂ.ಗಳಷ್ಟು ಹೆಚ್ಚಿಗೆ ಸಂಬಳ ಕೊಟ್ಟರೆ ರಾಜ್ಯಾದ್ಯಂತ ಇಂಥ ಐನೂರು ಮಂದಿಯ ಹೆಚ್ಚುವರಿ ಸಂಬಳವೇ ತಿಂಗಳಿಗೆ 25 ಲಕ್ಷ ರೂಪಾಯಿಗಳಷ್ಟಾಗುತ್ತದೆ. ಸದ್ಯದ ಮಟ್ಟಿಗಂತೂ ಕೆಎಂಎಫ್‌ಗೆ ಆ ಶಕ್ತಿಯಿಲ್ಲ.

ಹಾಗೇ ಸಂಬಳ ಹೆಚ್ಚಿಸಬೇಕೆಂದರೆ ಅದನ್ನು ಕೆಎಂಎಫ್ ನಿರ್ದೇಶಕ ಮಂಡಳಿ ನಿರ್ಧರಿಸಬೇಕೇ ಹೊರತು ಸರ್ಕಾರವಲ್ಲ. ಆದರೆ ಗಣಿರೆಡ್ಡಿಗಳು ಬಳ್ಳಾರಿಯ ಅಡಿಷನಲ್ ಡೈರೆಕ್ಟರ್ ಆಫ್ ಕೋ-ಆಪರೇಟಿವ್ ಸೊಸೈಟೀಸ್ ಚೇಲಾ ರಮೇಶ್ ಎಂಬಾತನ ಮೂಲಕ ಆದೇಶ ಹೇರಿದ್ದಾರೆ. ಕೆಎಂಎಫ್‌ನ ಕೆಚ್ಚಲನ್ನೇ ಕುಯ್ದಾದರೂ ಸೋಮಶೇಖರ ರೆಡ್ಡಿಯನ್ನು ಅಧ್ಯಕ್ಷಗಾದಿಗೆ ತರುವುದು ಗಣಿಕಳ್ಳರ ಹುನ್ನಾರ.


ಕೆಎಂಎಫ್ ಹೇಳಿಕೇಳಿ ಸ್ವತಂತ್ರ ಸಂಸ್ಥೆ. ಸರ್ಕಾರ ಈತನಕ ನಯಾಪೈಸೆಯ ನೆರವಾಗದೇ ಹೋದರೂ ತನ್ನ ಸ್ವಂತ ಶಕ್ತಿಯಿಂದ ಕೆಎಂಎಫ್ ಬೆಳೆದು ನಿಂತಿದೆ. ಇದೇ ಜುಲೈ 30 ರ ಅಧ್ಯಕ್ಷ ಚುನಾವಣೆಯಲ್ಲೇನಾದರೂ ಕೆಎಂಎಫ್ ಗಣಿಕಳ್ಳರ ಪಾಲಾಯಿತೆಂದರೆ ಅದರ ಅವನತಿ ಶುರುವಾದಂತೆಯೇ. ಸೋಮಶೇಖರ ರೆಡ್ಡಿ ರೈತನಲ್ಲ, ಹಾಲಿಗೂ ಆಲ್ಕೋಹಾಲಿಗೂ ವ್ಯತ್ಯಾಸ ಗೊತ್ತಿಲ್ಲ, ಕೆಎಂಎಫ್ ಬೆಳೆದು ಬಂದ ರೀತಿಯಾಗಲಿ ಅದನ್ನು ನಿಭಾಯಿಸುವ ಶ್ರದ್ಧೆಯಾಗಲಿ ಗೊತ್ತಿಲ್ಲ. ದೇವೇಗೌಡರ ಕುಟುಂಬವನ್ನು ತುಳಿಯುವುದೇ ಪರಮಗುರಿಯಂತಿರುವ ಗಣಿಕಳ್ಳರ ಕೈಗೆ ಕೆಎಂಎಫ್ ಸಿಕ್ಕಿತೆಂದರೆ ಮಂಗನ ಕೈಗೆ ಮಾಣಿಕ್ಯ ಬಂದಂತೆ.

ಕೆಎಂಎಫ್ ದಿವಾಳಿಯಾಗುವುದಿಲ್ಲ ಎಂಬುದಕ್ಕೆ ಏನು ಗ್ಯಾರಂಟಿ? ಕರ್ನಾಟಕದ ನಕಾಶೆಯನ್ನೇ ತಿದ್ದಿ ಅದಿರು ದೋಚುವವರಿಗೆ ಕನ್ನಡಿಗರು ಕಟ್ಟಿದ ಕ್ಷೀರಸಾಗರಕ್ಕೆ ತೂತು ಕೊರೆಯುವುದು ಯಾವ ಲೆಕ್ಕ?

ಜಿದ್ದು ಸಾಧಿಸಬೇಕು. ಆದರೆ ಕೋಟ್ಯಂತರ ರೈತರ ಬದುಕಿನ ಮೇಲಲ್ಲ, ಗಣಿಕಳ್ಳರ ದುರ್ಬುದ್ಧಿಗೆ ಕುಮ್ಮಕ್ಕು ಕೊಡುತ್ತಿರುವ ಬಿಜೆಪಿ ಸರ್ಕಾರದ ಅವಿವೇಕಕ್ಕಾದರೂ ಮಿತಿ ಬೇಡವೇ?

● ರಾ. ಸೋಮನಾಥ್

ಹಾಲಿಗೆ ಬೆರೆತರೆ ಗಣಿಧೂಳು...?



ಕೆಎಂಎಫ್ ವಶಕ್ಕಾಗಿ ಗಣಿಚೋರರು ಛೂಬಿಟ್ಟ ಸೋಮಶೇಖರರೆಡ್ಡಿ ಈಗಾಗಲೇ ಬಳ್ಳಾರಿ ಒಕ್ಕೂಟದ ಅಧ್ಯಕ್ಷನಾಗಿ ಗೆದ್ದಾಗಿದೆ. ರಾಜ್ಯಾದ್ಯಂತ ಇಂಥ ಹದಿಮೂರು ಹಾಲು ಒಕ್ಕೂಟಗಳಿಂದ ಒಬ್ಬೊಬ್ಬ ನಿರ್ದೇಶಕ ಆಯ್ಕೆಗೊಂಡು ಅವರೆಲ್ಲ ಸೇರಿ ಕೆಎಂಎಫ್ ಅಧ್ಯಕ್ಷನನ್ನು ಆಯ್ಕೆ ಮಾಡುತ್ತಾರೆ. ಇದಿಷ್ಟೇ ಆದರೆ ರೇವಣ್ಣ ಗೆಲ್ಲುವುದರಲ್ಲಿ ಯಾವುದೇ ಅನುಮಾನವಿಲ್ಲ.

ಆದರೆ ಸರ್ಕಾರಕ್ಕೆ ಕೆಎಂಎಫ್ ನಿರ್ದೇಶಕ ಮಂಡಳಿಗೆ ಮೂವರನ್ನು ನಾಮಕರಣಗೊಳಿಸುವ ಅಧಿಕಾರವಿದೆ. ಪಶುವೈದ್ಯಕೀಯ ಇಲಾಖೆ ನಿರ್ದೇಶಕರು, ಸಹಕಾರ ಸಂಘಗಳ ರಿಜಿಸ್ಟ್ರಾರ್ ಮತ್ತು ಪಶುವೈದ್ಯಕೀಯ ಇಲಾಖೆಯ ಪ್ರಿನ್ಸಿಪಲ್ ಸೆಕ್ರೆಟರಿ ಸೇರಿದಂತೆ ಮೂವರು ನಿರ್ದೇಶಕರು ಕೆಎಂಎಫ್ ನಿರ್ದೇಶಕ ಮಂಡಳಿಗೆ ನಾಮಕರಣಗೊಂಡರೆಂದರೆ ಸಹಜವಾಗೇ ಗಣಿಚೋರರ ಪಾಲಿಗೆ ಮೂರು ಓಟುಗಳು ಬಂದಂತಾಯ್ತು.

ಅಲ್ಲಿಗೆ ಹದಿಮೂರು ಮತ್ತು ಸರ್ಕಾರಿ ನಾಮನಿರ್ದೇಶಿತ ಮೂವರು ಸೇರಿ ಒಟ್ಟು ಹದಿನಾರು ಮಂದಿ ನಿರ್ದೇಶಕರ ಪೈಕಿ ಸೋಮಶೇಖರರೆಡ್ಡಿ ಸೇರಿದಂತೆ ನಾಲ್ವರು ರೇವಣ್ಣನ ವಿರುದ್ಧವಿದ್ದಂತಾಯ್ತು. ಉಳಿಕ ಐದು ಮಂದಿ ನಿರ್ದೇಶಕರನ್ನು ಗಣಿಚೋರರು ಖರೀದಿಸಿದರೆಂದರೆ ಕೆಎಂಎಫ್ ದೇವೇಗೌಡರ ಕುಟುಂಬದ ಕೈಬಿಟ್ಟಂತೆಯೇ.

ಎಮ್ಮೆಲ್ಲೆಗಳನ್ನೇ ಖರೀದಿಸಿದ ಜನಾರ್ದನರೆಡ್ಡಿಗೆ ಯಃಕಶ್ಚಿತ್ ಕೆಎಂಎಫ್ ನಿರ್ದೇಶಕರನ್ನು ಖರೀದಿಸುವುದು ಯಾವ ಮಹಾ? ಭೂಮಿಗೆ ಕನ್ನ ಕೊರೆದವರಿಗೆ ಹಾಲಿಗೆ ಗಣಿಧೂಳು ಬೆರೆಸುವುದು ಯಾವ ಲೆಕ್ಕ?

ನನ್ನತ್ರ ಬಂದ್ರೆ ಶುದ್ಧೀಕರಿಸಿ ಕ್ಷತ್ರಿಯರನ್ನಾಗಿ ಮಾಡ್ತಿನಿ!

ಒಂದು ಕಾಲದಲ್ಲಿ ಭರತ ಖಂಡದ ಮುಖ್ಯ ಭಾಗವನ್ನೆಲ್ಲಾ ಆವರಿಸಿಕೊಂಡಿದ್ದ ಜೈನ ಧರ್ಮ ಇಂದು ಅವಸಾನದ ಅಂಚಿಗೆ ಬಂದಿದೆಯೆಂದು ಧರ್ಮಸ್ಥಳದ ಧರ್ಮಾಧಿಕಾರಿಗಳಾದ ವೀರೇಂದ್ರ ಹೆಗ್ಗಡೆಯವರು ಒಂದೇ ಕಣ್ಣಿನಲ್ಲಿ ಅತ್ತರಂತಲ್ಲಾ. ಕಾರಣ ಕೇಳಲಾಗಿ "ಹೆಚ್ಚುತ್ತಿರುವ ಅಂತರ್ಜಾತಿ ವಿವಾಹಗಳ ದೆಸೆಯಿಂದ ಜೈನ ಧರ್ಮದ ಹೆಣ್ಣು ಗಂಡುಗಳೆಲ್ಲ ಅನ್ಯಜಾತಿಯ ಪಾಲಾಗುತ್ತಿವೆ. ಹೀಗೇ ಆದರೆ ಶ್ರವಣಬೆಳಗುಳದ ಬಾಹುಬಲಿಯನ್ನುಳಿದು ಇನ್ಯಾರು ಉಳಿಯುವುದಿಲ್ಲ" ಎಂದರಂತಲ್ಲಾ. ಇನ್ನು ಜೈನ ಧರ್ಮ ಬಿಟ್ಟ ಮಾಜಿ ಜೈನಳನ್ನ ಕೇಳಿದರೆ "ಅಯ್ಯೋ, ನಮ್ಮ ಮನೆಗೆ ದಿಗಂಬರ ಸ್ವಾಮಿಗಳು ಬರುತ್ತಿದ್ದರು. ಅವರಿಗೆ ಅಹಿಂಸಾ ರೂಪದ ಪಾಕ ತಯಾರಿಸಿ ಬಡಿಸುವಷ್ಟರಲ್ಲಿ ಈ ಧರ್ಮವೇ ಸಾಕು ಅನ್ನಿಸುತ್ತಿತ್ತು, ಅದಕ್ಕೇ ಬಿಟ್ಟೆ" ಎಂದುಬಿಟ್ಟಳಲ್ಲಾ. ಇನ್ನ ಮಾಜಿ ಜಿನೇಂದ್ರರನ್ನು ವಿಚಾರಿಸಲಾಗಿ "ಜೈನಧರ್ಮದ ವ್ರತನಿಷ್ಠೆ ಅಹಿಂಸೆ, ಅಪರಿಗ್ರಹಗಳಂತಹ ಮೌಲ್ಯಗಳಿಂದ ಬಿಡಿಸಿಕೊಳ್ಳದಿದ್ದರೆ ಸಹಜವಾಗಿ ಬದುಕಲು ಸಾಧ್ಯವಿಲ್ಲ ಅನ್ನಿಸಿತು. ಒಂದು ಕೋಳಿಮೊಟ್ಟೆಯನ್ನು ತಿನ್ನಲು ಅವಕಾಶವಿಲ್ಲವೆಂದರೆ ಹೇಗೆ? ಅದಕ್ಕೆ ಬಿಟ್ಟೆ" ಎಂದರಲ್ಲಾ, ಥೂತ್ತೇರಿ!

* * * *

ಜೈನರು ಜಾತಿ ಬಿಡುತ್ತಿದ್ದಾರೆಂದು ವೀರೇಂದ್ರ ಹೆಗ್ಗಡೆಯವರು ಕೊರಗುವ ಅಗತ್ಯವಿಲ್ಲ. ಕ್ರಿಶ್ಚಿಯನ್ನರು ಹೇಗೆ ಶಿಕ್ಷಣ, ಶುಶ್ರೂಷೆ ಮುಖಾಂತರ ಅನ್ಯಜಾತಿ ಜನರನ್ನು ಹಿಡಿದು ಅವರ ಕೊರಳಿಗೆ ಶಿಲುಬೆ ತೂಗುಬಿಡುತ್ತಿದ್ದರೊ ಹಾಗೆಯೇ ಧರ್ಮಾಧಿಕಾರಿಗಳು ತಾವು ಉದ್ಯೋಗ ಕೊಟ್ಟವರನ್ನು ಜೈನರನ್ನಾಗಿಸಬಹುದು, ತಾವು ಸಹಾಯ ಮಾಡಿದ ಮಹಿಳಾ ಸಂಘಕ್ಕೆ ಜೈನ ದೀಕ್ಷೆ ಕೊಡಬಹುದು, ಇನ್ನು ಆದಿ ಚುಂಚನಗಿರಿ ಸ್ವಾಮಿಗಳಿಗೆ "ಧರ್ಮ ದಿವಾಕರ" ಎಂಬ ಬಿರುದು ಕೊಟ್ಟಂತೆ ಹಲವಾರು ಸಣ್ಣಪುಟ್ಟ ಸ್ವಾಮಿಗಳಿಗೆ 'ಧರ್ಮ ಪ್ರಭಾಕರ', 'ಧರ್ಮ ಧುರಂದರ', 'ಧರ್ಮಪುರಂದರ' ಎಂಬ ಬಿರುದುಗಳನ್ನು ಕೊಟ್ಟು, ನಿರ್ವಾಣಿಗಳನ್ನಾಗಿ ಮಾಡಬಹುದು. ಅಲ್ಲದೆ ದೇಶದ ವಸ್ತ್ರ ತ್ಯಾಗಿಗಳನ್ನು ಹಿಡಿದು ತಂದು ಶ್ರವಣಬೆಳಗುಳದ ಬೀದಿಯಲ್ಲಿ ಬಿಡಬಹುದೆಂಬ ಸಲಹೆಗಳು ಸೂಕ್ತವಲ್ಲವೇ, ಥೂತ್ತೇರಿ!

* * * *

ಇನ್ನು ಕನ್ನಡ ಸಾಹಿತ್ಯ ಲೋಕದ ದಿಗ್ಗಜರ ಪೈಕಿ ಶಾಂತಿನಾಥ ದೇಸಾಯರ ಪ್ರಕಾರ "ಹಣ ಗಳಿಸಲು ಏನೆಲ್ಲಾ ಮಾಡುವ ಜೈನರು ಪರಿಹಾರ ಕಾರ್ಯವಾಗಿ ಬಸದಿ ಕಟ್ಟಿಸುತ್ತಾರೆ. ಸುಮಾರು ಜನರ ಭಾವನೆಯಲ್ಲಿ ಜೈನ ಧರ್ಮ ಎಂದೋ ಸತ್ತು ಹೋಗಿದೆ. ಜೈನ ಧರ್ಮದ ಪ್ರಕಾರವೇ ಜೀವನ ಮಾಡಬೇಕು ಅಂದರೆ ಎಲ್ಲರೂ ಉಪವಾಸ ಸಾಯಬೇಕು. ಅದರ ತತ್ವದ ಪ್ರಕಾರ ಜೀವನ ಮಾಡೋದು ಕಡುಕಷ್ಟ. ಜೈನ ಧರ್ಮ ತೀರ ನೆಗೆಟಿವ್ ಧರ್ಮ. ಅದರಲ್ಲಿ ಪಾಸಿಟಿವ್ ಅನ್ನೋದು ಏನೂ ಇಲ್ಲ. ಅದು ಮೃತ್ಯುವಿನ ಕಡೆ ಒಯ್ಯೋ ಧರ್ಮ. ಬಹಳಷ್ಟು ಜನ ಜೈನ ಧರ್ಮಕ್ಕೆ ನಿಷಿದ್ಧವಾದ ಆಚಾರಗಳನ್ನು ಮನೆಯವರಿಂದ ಮುಚ್ಚಿಡುತ್ತಾ ತೋರಿಕೆಗೆ ಜೈನರೆಂದೇ ನಡೆದುಕೊಳ್ಳುತ್ತಾರೆ" ಎಂದು ಹೇಳಿದಂತೆಯೇ ಬದುಕಿ ಬಾಳಿದ ಶಾಂತಿನಾಥ ದೇಸಾಯರು ಇಂದು ಇದ್ದರೆ ವೀರೇಂದ್ರ ಹೆಗ್ಗಡೆಯವರಿಗೆ ಸೂಕ್ತವಾದ ಸಾಂತ್ವನ ಹೇಳುತ್ತಿದ್ದರಂತಲ್ಲಾ, ಥೂತ್ತೇರಿ!

* * * *

ಧರ್ಮಾಧಿಕಾರಿಗಳೆಲ್ಲಾ ಹೀಗೆ ಧರ್ಮಾಭಿಮಾನದಿಂದ ಹಲುಬುತ್ತಿರುವಾಗ ನಾರಾಯಣಾಚಾರಿ ಎಂಬ ಧರ್ಮಾಚಾರಿ ಭರತಭೂಮಿಯ ಎಲ್ಲರನ್ನು ಶುದ್ಧೀಕರಿಸಿ ಕ್ಷತ್ರಿಯರನ್ನಾಗಿ ಮಾಡುತ್ತದಂತಲ್ಲಾ. ಈ ಬಗ್ಗೆ ಕುತೂಹಲವಾಗಿ ಸಂಯುಕ್ತ ಕರ್ನಾಟಕ ಪತ್ರಿಕೆ ಮುಖಾಂತರ. ಫೋನ್ ನಂಬರ್ ದೊರಕಿಸಿಕೊಂಡು ಫೋನ್ ಮಾಡಿದರೆ ರಿಂಗಾಯ್ತು.

ರಿಂಗ್ ಟೋನ್: ಧಿಯೋಯೋನಃ ಪ್ರಚೋದಯಾತ್, ಧೀಯೋಯೋನಃ ಪ್ರಚೋದಯಾತ್.

"ಹಲೋ ಯಾರು?"

ಥೂತ್ತೇರಿ ▸ ಯಾಹೂ

"ನಾನು ಗುರುಗಳೆ, ಯಾಹೂ ಅಂತ ಪತ್ರಕರ್ತ."

"ಪತ್ರಕರ್ತರೊ, ಯಾವ ಜನಾಂಗದವರು?"

"ಪುರುಷ ಜನಾಂಗದವರು!"

"ನಾನು ಲಿಂಗ ಕೇಳಲಿಲ್ಲ, ಯಾವ ಧರ್ಮದವರು ಅಂದೆ?"

"ಓ ಸಾರಿ ಸ್ವಾಮಿ. ನನಿಗೆ ಜನಾಂಗ ಜನನಾಂಗ ಅಂತ ಕೇಳ್ತು, ಅದಕ್ಕೆ ಅಂಗಂದೆ. ನಮಗೆಲ್ಲಾ ಧರ್ಮ ಎಲ್ಲಿದೆ ಸ್ವಾಮಿ? ಯಾವುದೋ ಹೇಳಿಕೊಳ್ಳಲಾಗದ ಜಾತಿಯವನು."

"ಹೇಳಿಕೊಳ್ಳಲಾಗದ ಜಾತಿನೂ ಇದ್ದಾವಾ?"

"ಈಗ ನಿಮ್ಮನ್ನೇ ನೋಡಿ, ನಿಮ್ಮ ಜಾತಿ ಕೇಳಂಗೇಯಿಲ್ಲ."

"ಯಾಕೆ ಕೇಳಂಗಿಲ್ಲಾ?"

"ಹಣೆ ಮೇಲೆ ಮೂರು ನಾಮ ಬಳದಿದ್ದಿರಿ. ಅವುಕ್ಕೆ ಆಧಾರವಾಗಲಿ ಅಂತ ಹುಬ್ಬಿಗೂ ಬಳದು ರೆಕ್ಕೆಬಿಚ್ಚಿದ ಪಕ್ಷಿ ಆಕಾರನೆ ಕೊಟ್ಟಿದ್ದಿರಿ. ನಿಮ್ಮನ್ನ ನೋಡಿದ ಕೂಡ್ಲೆ ಒಬ್ಬ ಕಪಟ ಬ್ರಾಹ್ಮಣ ಅಂತ ಗೊತ್ತಾಗುತ್ತೆ."

"ಯಾರ ಜೊತೆ ಮಾತಾಡ್ತಾಯಿದ್ದಿ ನೀನು?"

"ಹಿಂದೂ ಧರ್ಮದ ಪುನರುತ್ಥಾನದ ಪ್ರವರ್ತಕನಾದ ನಾರಾಯಣಾಚಾರಿ ಜೊತೆ ಮಾತಾಡ್ತಾಯಿದ್ದಿನಿ."

"ಸರಿ ಮುಂದುವರಸು."

"ನಮ್ಮ ನಡುವಿನ ಬ್ರಾಹ್ಮಣ ಬ್ರಹ್ಮ ತೇಜಸ್ಸಿನ ಮುಖದಿಂದ ತನ್ನ ಜಾತಿ ಹೇಳಿಕೊಳ್ಳೊದಿಕ್ಕೆ ಇಷ್ಟಪಡ್ತನೆ ಅಥವಾ ಅವನ ವೇಷನೇ ಅದನ್ನ ಸಾರುತ್ತೆ. ಇನ್ನ ಜೈನ, ಲಿಂಗಾಯತ, ಒಕ್ಕಲಿಗ ಇವರೆಲ್ಲಾ ಒಂದು ರೀತಿ ಹೆಮ್ಮೆಯಿಂದ್ಲೇ ತಮ್ಮ ಜಾತಿ ಬಗ್ಗೆ ಹೇಳಿಕೊತ್ತರೆ. ವಿಶ್ವಕರ್ಮನೂ ಹೇಳ್ತನೆ. ಆದರೆ ಹೇಳಿಕೊಳೊದ್ರಲ್ಲೇ ಕೀಳರಿಮೆ, ಅವಮಾನ, ಖಿನ್ನತೆ ಅನುಭವಿಸೊ ಜಾತಿಗಳು ನಮ್ಮ ನಡುವೆ ಅವೆ."

"ಅವು ಯಾಕೆ ಆ ತರ ಇವೆ ಗೊತ್ತೇನೊ?"

"ನೋಡಾಗ್ಲೆ ನಾನಿಂತವ್ರನೂ ಅಂತ ಗೊತ್ತಾಗಿ ಏಕವಚನ ಬಳಸ್ತಿರಿ."

"ಕೇಳೊ ಇಲ್ಲೀ, ನೀನು ಹೇಳ್ತಿರೊ ಜಾತಿಗಳು ಬ್ರಾಹ್ಮಣದ್ವೇಷ ಬಿಟ್ಟು, ಸಂಸ್ಕೃತ ದ್ವೇಷ ಬಿಟ್ಟು, ದುರಾಚಾರ, ದುರಹಂಕಾರ, ದುರ್ಬುದ್ಧಿ ಬಿಟ್ಟು ನನ್ನತ್ರ ಬಂದ್ರೆ ನಿಮ್ಮನ್ನೆಲ್ಲಾ ಶುದ್ಧೀಕರಿಸಿ, ಕ್ಷತ್ರಿಯರನ್ನಾಗಿ ಮಾಡ್ತಿನಿ."

"ಲೋ ಆಚಾರಿ, ಕ್ಷತ್ರಿಯರಲ್ಲಿರೊ ಗುಣಗಳೇ ಅವಲ್ಲವೇನೊ. ಅವ್ರುನ್ನ ್ಯಂಗೆ ಬುಡಕ್ಕಾಯ್ತದೊ."

"ಗೌರವ ಕೊಟ್ಟು ಮಾತಾಡು."

"ಅದ್ಯಂಗೆ ಮಾತಾಡಕ್ಕಾಯ್ತದೆ? ನನ್ನಲ್ಲಿ ನಿನ್ನ ಬಗ್ಗೆ ಸ್ವೈರಣೆ ಇದೆ, ದುರಹಂಕಾರನೂ ಇದೆ, ನೀನೇಳಿದ ಒಂದೆರಡು ಗುಣನೂ ಇದೆ. ಅವು ನನ್ನಲ್ಲಿ ಇರಲೇಬೇಕು. ಅದು ಕ್ಷತ್ರಿಯನ ಗುಣ. ನನ್ನಲ್ಲಿ ಅವಿದ್ದ ಕಾರಣಕ್ಕೆ ನಿನ್ನನ್ನ ರಕ್ಷಣೆ ಮಾಡಿದ್ದು."

"ನನ್ನನ್ನ ರಕ್ಷಣೆ ಮಾಡಿದ್ದೀಯಾ?"

"ಹೌದು ಕಣೊ. ಪರಕೀಯರು ದಂಡೆತ್ತಿ ಬಂದಾಗ ನಾನು ಯುದ್ಧ ಮಾಡತಿದ್ದೆ. ನೀನು ದೇವಸ್ಥಾನದಲ್ಲಿ ಭಜನೆ ಮಾಡತಿದ್ದೆ. ನಾನು ಗದ್ದೆ ಉತ್ತು ಬತ್ತ ಬೆಳೆದಾಗ ನೀನು ನಿಶ್ಚಿಂತೆಯಿಂದ ಶ್ರಾದ್ಧ ಪೂಜೆ, ಪಿಂಡ ಅಂತ ಹೊಟ್ಟೆ ಸವರುಕೊಂಡು ಜುಟ್ಟು ನೀವಿಕೊಂಡು ನಿಶ್ಚಿಂತೆಯಾಗಿದ್ದೆ."

"ಫೋನಿಡೋ ಶೂದ್ರ ಮುಂಡೆದೆ!"

"ನೀನಿಡೊ ಬೋಸುಡಿಕೆ. ಇನ್ನೊಂದು ಸತಿ ನಮ್ಮನ್ನ ಶುದ್ಧೀಕರುಸ್ತಿನಿ ಅಂತ ಬೊಗಳಿದ್ರೆ ಯಾತ್ರಲ್ಲಿ ಹ್ವಡಿತಿನಿ ಗೊತ್ತ?"

"ಅಯ್ಯೋ ಚಾಂಡಾಳ!"

"ನಿಮ್ಮಪ್ಪ!!"

"ಥೂತ್ತೇರಿ!!!



ಬೆತ್ತನಗೆರೆ ಶಂಕ್ರನ ಬೆನ್ನಿಗೆ ಲಾಂಗ್ ಶಿವನ ಹಂತಕರು

ನೆಲಮಂಗಲಕ್ಕೊಬ್ಬ ಹೊಸ ಕಿರಾತಕ

ಕೊಲ್ಲಲು ಬಂದಿದ್ದು ಬ್ರೇಕ್ ಜಗ್ಗಿಯ ಹುಡುಗರಾ? ನೆಲಮಂಗಲದ ಸೀರಿಯಲ್ ಕಿಲ್ಲರ್ ಬೆತ್ತನಗೆರೆ ಸೀನನ ವಿರುದ್ಧ ತಿರುಗಿ ಬಿದ್ದ ಬೆತ್ತನಗೆರೆ ಶಂಕ್ರ ಎಂಬ ರಣಪಾತಕಿಗೂ ಬೆಂಗಳೂರು ಪಾಪಕೂಪದ ನಿವೃತ್ತ ಪಂಟರ್ ಬ್ರೇಕ್ ಜಗ್ಗಿಗೂ ಜೈಲು ಒಡಂಬಡಿಕೆಯೊಂದು ಏರ್ಪಟ್ಟಿದೆಯಾ? ಜೂನ್ 29 ರ ನೆಲಮಂಗಲದ ಘರ್ಷಣೆಯ ಮರ್ಮವಾದರೂ ಏನು?

ಉತ್ತರವಿನ್ನೂ ಅಸ್ಪಷ್ಟ. ಆವತ್ತು ಹತ ಹ್ಯಾಡಾಳು ದೇವಿಯ ತಮ್ಮ ಮಂಜನ ಹೆಣ ಬೀಳುತ್ತಿತ್ತೆಂದೂ ಕೊಲ್ಲಲೆಂದೇ ಬ್ರೇಕ್ ಜಗ್ಗಿಯ ಶಿಷ್ಯ ಪೂರಿ ಶಿವನ ತಂಡ ಹೊಂಚು ಹಾಕುತ್ತಿತ್ತೆಂದೂ ಪೊಲೀಸರು ನಂಬಲು ಪಕ್ಕಾ ಕಾರಣವಿದೆ. ಪಲ್ಟಿ ಹೊಡೆದ ಸುಮೋ ಗಾಡಿಯನ್ನು ಓಡಿಸುತ್ತಿದ್ದ ಟಗರು ಮಂಜ ಕೂಡ ಗಾಯತ್ರಿನಗರದ ಲಾಂಗ್ ಶಿವನ ಬಂಟನೆ. ಬ್ರೇಕ್ ಜಗ್ಗಿಯ ನೇರ ಪಾತ್ರವಿಲ್ಲದೇ ಹೋದರೂ ಆತನ ಶಿಷ್ಯರೆಂದು ಪೋಜು ಕೊಡುವ ಹಂತಕರ ಹಿಂಡೊಂದು ಸದ್ಯ ನೆಲಮಂಗಲದ ಗ್ಯಾಂಗ್‌ವಾರ್‌ಗೆ ಎಂಟ್ರಿ ಕೊಟ್ಟಿದೆ.


ಬೆಂಗಳೂರು ಸೆರಗಿನ ನೆಲಮಂಗಲದ ಅವನತಿಯ ಪ್ರತೀಕಾರದಂತೆ ಒಂದರ ಮೇಲೊಂದು ಸರಣಿ ಕೊಲೆಗಳಾಗಿದ್ದು ಗೊತ್ತೇ ಇದೆ. ಮೊದಲು ಮಂದಿ ಬಸವಯ್ಯ, ನಂತರ ವಕೀಲ ದೇವರಾಜು ಮತ್ತು ಪಂಚಾಯ್ತಿ ಮೆಂಬರ್ ಕೃಷ್ಣಮೂರ್ತಿ, ಆನಂತರ ಕುರುಬರ ನಾಯಕ ಪುಟ್ಟಸಂಪಯ್ಯ, ತದನಂತರ ಲೋಹಿತ್ ಗೌಡ, ಹೀಗೆ ನೆಲಮಂಗಲದಲ್ಲಿ ನಡೆದ ಒಂದಾದ ಮೇಲೊಂದು ಭೀಕರ ಹತ್ಯೆಗಳಿಗೆಲ್ಲ ಕಾರಣಕರ್ತನಾದವನು ಬೆತ್ತನಗೆರೆ ಸೀನ. ವಿಕಟವೆಂದರೆ ಯಾವ ಶಂಕ್ರನನ್ನು ಮುಂದೆಬಿಟ್ಟು ಇಂಥ ಅನೇಕ ಹತ್ಯೆಗಳನ್ನು ಸೀನ ಮಾಡಿಸುತ್ತಿದ್ದನೋ ಈಗ ಅದೇ ಶಂಕ್ರ ಸೀನನ ಅಕ್ಕನ ಗಂಡ ಹ್ಯಾಡಾಳು ದೇವಿಯನ್ನು ಕೊಂದು ದೇವಿಯ ತಮ್ಮ ಮಂಜನನ್ನೂ ಮುಗಿಸಲು ಹೊರಟಿದ್ದಾನೆ.

ನೈಸರ್ಗಿಕ ನ್ಯಾಯವೋ ಅಥವಾ ಪಾಪದ ಫಲವೋ ಗೊತ್ತಿಲ್ಲ. ಶಂಕ್ರ ಈಗ ಬೆತ್ತನಗೆರೆ ಸೀನನ ಪಾಲಿಗೆ ಯಮಕಿಂಕರ. ಅವನನ್ನು ಬೆತ್ತನಗೆರೆ ಶಂಕ್ರ ಎನ್ನುತ್ತಾರೆ. ಈತ ಸೀನನ ಚಿಕ್ಕಪ್ಪನ ಮಗನಾಗಬೇಕು. ವರಸೆಯಲ್ಲಿ ಬೆತ್ತನಗೆರೆ ಸೀನನಿಗೆ ಶಂಕ್ರ ತಮ್ಮನಾಗಬೇಕು. ಮೊದಮೊದಲು ಬೆತ್ತನಗೆರೆಯ ಕುರುಬರನ್ನು ಒಬ್ಬರ ಮೇಲೊಬ್ಬರಂತೆ ಕೊಂದು ಹಾಕಿದ ಸೀನನ ಪಡೆಗೆ ಶಂಕ್ರನೇ ಸೇನಾನಿಯಾಗಿದ್ದ.

ಯಾವತ್ತು ಸೀನನ ಹೆಸರು ಎರ್ರಾಬಿರ್ರಿ ಬೆಳೆದು ಆತನೇ ನೆಲಮಂಗಲದ ಕಿರಾತಕನೆನ್ನುವ ಮಟ್ಟಿಗೆ ರೋಲ್ ಕಾಲ್ ಹುಟ್ಟತೊಡಗಿತೋ ಶಂಕ್ರ ತಿರುಗಿಬಿದ್ದ. "ಕೊಂದದ್ದು ನಾನು. ಹೆಸರು ಬಂದಿದ್ದು ನಿನಗೆ. ಅದರ ಲಾಭ ಕೂಡ ನೀನೊಬ್ಬನೇ ತಿಂತಿದೀಯಾ...." ಎಂದದ್ದೇ ಶಂಕ್ರನೂ ದೀಲಿಗೆ ನಿಂತುಬಿಟ್ಟ. ಸೀನನ ಅಕ್ಕನ ಗಂಡ ಹ್ಯಾಡಾಳು ದೇವಿ ಕೂಡ ಭಯಂಕರ ಹೆಸರು ಮಾಡಿದ್ದ. ತನ್ನ ಆಪ್ತರನ್ನೇ ಹೆದರಿಸಿ ವಸೂಲಿಗೆ ನಿಂತಿದ್ದ ಶಂಕ್ರನನ್ನು ಕರೆದು ಕೆನ್ನೆಗೆರಡು ಬಿಟ್ಟು ವಾರ್ನ್ ಮಾಡಿದ ಹ್ಯಾಡಾಳು ದೇವಿಗೆ ಅದು ತನ್ನ ಪ್ರಾಣಕ್ಕೇ ಕುತ್ತಾಗುತ್ತದೆಯೆಂಬ ಲೆಕ್ಕಾಚಾರವಾದರೂ ಎಲ್ಲಿತ್ತು?

ಅದು 2009 ರ ಮಾರ್ಚ್ ಹದಿನೇಳು. ಶಂಕ್ರ ಆತನ ಪಕ್ಕಾ ಶಿಷ್ಯ ಯತೀಶ, ಬೆತ್ತನಗೆರೆಯ ಮುನಿ, ದಾಸರಹಳ್ಳಿ ಚಿಕ್ಕ, ಬೆಟ್ಟಳ್ಳಿ ನಾಗ, ಮಂಡ್ಯದ ಬಾಬು ಮತ್ತು ಲಕ್ಕೇನಹಳ್ಳಿ ಜಬಿ ಮುಂತಾದವರಿದ್ದ ಹಂತಕ ಪಡೆ ಹ್ಯಾಡಾಳು ದೇವಿಯನ್ನು ಆತನ ತೋಟಕ್ಕೆ ಆನತಿ ದೂರದಲ್ಲೇ ಕೊಚ್ಚಿ ಕೊಂದಿತ್ತು. ಯಾವ ಬೆತ್ತನಗೆರೆ ಸೀನ ತನ್ನೆಲ್ಲಾ ಸರಣಿ ಕೊಲೆಗಳಿಗೆ ಶಂಕ್ರನನ್ನು ಬಳಸಿಕೊಂಡಿದ್ದನೋ ಅದೇ ಶಂಕ್ರ, ಸೀನನ ಅಕ್ಕನ ಗಂಡನನ್ನೇ ಮುಗಿಸಿಬಿಟ್ಟ.

ಆ ಹೊತ್ತಿಗೆ ಜೈಲು ಪಾಲಾಗಿದ್ದ ಸೀನ ಕಂಬಿಯ ಮರೆಯಲ್ಲೇ ಎದೆ ಬಡಿದುಕೊಂಡು ಬೊಬ್ಬೆಯಿಟ್ಟ. ಮಾಡಿದ ಪಾಪ ಆತನನ್ನೇ ನುಂಗಲಾರಂಭಿಸಿತ್ತು. ಅಲ್ಲಿಗೆ ನೆಲಮಂಗಲದ ಗ್ಯಾಂಗ್‌ವಾರ್‌ನ ಚಿತ್ರಣವೇ ಬದಲಾಗಿತ್ತು. ಬೆತ್ತನಗೆರೆಯ ಕುರುಬರು, ಕಾಂಗ್ರೆಸ್ ನಾಯಕ ಬನ್ನಮಂಗಲ ಕೃಷ್ಣಪ್ಪ, ಅರಿಸಿನಕುಂಟೆಯ ಚಿಕ್ಕನಾಗರಂಥ ಹಳೇ ದುಷ್ಮನ್‌ಗಳನ್ನು ಎದುರಿಸುವ ಬದಲು ಸೀನ ತನ್ನದೇ ಹಳೇ ಶಿಷ್ಯ ಶಂಕ್ರನನ್ನು ಎದುರಿಸಬೇಕಾಯಿತು.


ಬೆತ್ತನಗೆರೆ ಶಂಕರ

ಹಾಗಂತ ಹಂತಕ ಶಂಕ್ರನೇನೂ ಸುಮ್ಮನಿರುವ ಆಸಾಮಿಯಲ್ಲ. ಹ್ಯಾಡಾಳು ದೇವಿಯನ್ನೇ ಕೊಂದ ಮೇಲೆ ತನಗಿನ್ನು ಉಳಿಗಾಲವಿಲ್ಲ ಎಂಬುದು ಆತನಿಗೆ ಚೆನ್ನಾಗಿ ಗೊತ್ತಿತ್ತು. ಆದರೆ ಭಂಡ ಧೈರ್ಯ. ಹೇಗೂ ದೇವಿಯನ್ನು ಮುಗಿಸಿದ್ದಾಗಿದೆ. ಪ್ರತೀಕಾರಕ್ಕೆ ಬರಬೇಕೆಂದರೆ ಸೀನ ಜೈಲಲ್ಲಿದ್ದಾನೆ. ಉಳಿದವನು ದೇವಿಯ ತಮ್ಮ ಪ್ರಕಾಶ. ಆತನಿಗಿಂತಲೂ ಅಪಾಯಕಾರಿಯಾದವನು ದೇವಿಯ ಚಿಕ್ಕಮ್ಮನ ಮಗ ಮಂಜ.

ಮಂಜನನ್ನು ಮುಗಿಸಿಬಿಟ್ಟರೆ ನೆಲಮಂಗಲದ ಮಟ್ಟಿಗೆ ತನಗೆ ದುಷ್ಮನ್‌ಗಳೇ ಇಲ್ಲವಾಗುತ್ತಾರೆ. ಹೇಗೂ ಬನ್ನವಂಗಲ ಕೃಷ್ಣಪ್ಪ, ಚಿಕ್ಕನಾಗರಂಥವರನ್ನು ಹೆದರಿಸಿಬಿಟ್ಟರೆ ಒಂದಷ್ಟು ರೋಲ್‌ಕಾಲ್ ಹುಟ್ಟುತ್ತದೆ. ಜೈಲುಪಾಲಾದ ಸೀನ ತನ್ನ ಸರಣಿ ಹತ್ಯೆಗಳ ಕೇಸನ್ನೆಲ್ಲ ಮುಗಿಸಿ ಹೊರಬರುವುದಂತೂ ಸಾಧ್ಯವೇ ಇಲ್ಲ. ಇನ್ನು ದೇವಿಯ ತಮ್ಮ ಪ್ರಕಾಶ ಯಾವ ಲೆಕ್ಕ?

ಹೀಗೆಂದು ತನ್ನದೇ ಲೆಕ್ಕಾಚಾರಕ್ಕೆ ಬಿದ್ದ ಶಂಕ್ರನ ಇಡೀ ಗ್ಯಾಂಗ್ ಹ್ಯಾಡಾಳು ದೇವಿಯ ಕೊಲೆ ಕೇಸಿನಲ್ಲಿ ಜೈಲು ಪಾಲಾಯಿತಾದರೂ ಶಂಕ್ರ ಮಾತ್ರ ಪೊಲೀಸರಿಗೆ ಸಿಗಲೇ ಇಲ್ಲ. ಅತ್ತ ಜೈಲು ಸೇರಿದ ಶಂಕ್ರನ ಬಲಗೈ ಬಂಟ ಯತೀಶ ಖತರ್‌ನಾಕ್ ಕಾರಸ್ಥಾನವೊಂದಕ್ಕೆ ಕೈಹಾಕಿದ್ದ. ಆ ಹೊತ್ತಿಗೆ ಪರಪ್ಪನ ಅಗ್ರಹಾರ ಜೈಲಲ್ಲಿದ್ದವ ಬ್ರೇಕ್ ಜಗ್ಗಿಯ ಹಳೇ ಶಿಷ್ಯ ಲಾಂಗ್ ಶಿವ. ತಮ್ಮ ಮೆಂಟಲ್ ಪ್ರಸಾದಿಯ ಹತ್ಯೆಯಾದ ನಂತರ ರೌಡಿಜಮ್ಮಿಗೇ ವಿದಾಯ ಹೇಳಿ ಯಾರ ಕಣ್ಣಿಗೂ ಬೀಳದೇ ನಾಪತ್ತೆಯಾದ ಬ್ರೇಕ್ ಜಗ್ಗಿಯ ಒಂದಾನೊಂದು ಕಾಲದ ಸಹಚರರಿಗೆಲ್ಲ ಸದ್ಯ ಜೈಲಲ್ಲಿರುವ ಲಾಂಗ್ ಶಿವನೇ ದಳಪತಿ.

ಜಗ್ಗಿ ತಮ್ಮ ಮೆಂಟಲ್ ಪ್ರಸಾದಿ ಹತ್ಯೆಗೆ ಪ್ರತೀಕಾರವಾಗಿ ಸೈಲೆಂಟ್ ಸುನೀಲನ ಶಿಷ್ಯ ಡಿಂಗಿ ನಾಗರಾಜನನ್ನು ಕೊಂದು ಜೈಲು ಸೇರಿದವನು ಲಾಂಗ್ ಶಿವ. ಡಿಂಗಿಯ ಕೊಲೆಯಾದ ಒಂದೇ ವಾರಕ್ಕೆ ಗಾಯತ್ರಿನಗರದ ಲಕ್ಕಿ ಗ್ಯಾಂಗ್ ಲಾಂಗ್ ಶಿವನ ಶಿಷ್ಯ ಲೊಡ್ಡೆ ಪ್ರಕಾಶನನ್ನು ನೆಲಮಂಗಲದ ಬಳಿ ಕೊಚ್ಚಿಕೊಂದಿತು. ಹೀಗೆ ಕೊಲೆಯಾದ ಲೊಡ್ಡೆ ಪ್ರಕಾಶನ ಅಣ್ಣನೇ ಪೂರಿಶಿವ!

ಜೈಲಲ್ಲಿ ಉಪಾಯವಾಗಿ ಲಾಂಗ್ ಶಿವನ ದೋಸ್ತಿ ಬೆಳೆಸಿದ ಶಂಕ್ರನ ಶಿಷ್ಯ ಯತೀಶ ನಿಗೂಢ ತಂತ್ರವೊಂದನ್ನು ಮುಂದಿಟ್ಟಿದ್ದಾನೆ. ಅದು ಸುಪಾರಿ. ಹ್ಯಾಡಾಳು ದೇವಿಯ ಚಿಕ್ಕಪ್ಪನ ಮಗ ಮಂಜನನ್ನು ಮುಗಿಸಿಕೊಟ್ಟರೆ ಐದು ಲಕ್ಷ ರೂಪಾಯಿ ಕೊಡಲು ಶಂಕ್ರ ರೆಡಿ ಎಂದಿದ್ದಾನೆ ಯತೀಶ.

ಒಂದೆಡೆ ಶಂಕ್ರನ ಸಪೋರ್ಟು ಮತ್ತೊಂದೆಡೆ ದುಡ್ಡಿಗೆ ದುಡ್ಡು. ಎತ್ತಿಂದೆತ್ತ ಅಳೆದರೂ ಲುಕ್ಸಾನಿಲ್ಲ ಎಂದು ಲೆಕ್ಕ ಹಾಕಿದ ಲಾಂಗ್ ಶಿವ ಪೂರಿಶಿವನನ್ನು ಜೈಲಿಗೆ ಕರೆಸಿಕೊಂಡು ಕೆಲಸ ಒಪ್ಪಿಸಿದ್ದಾನೆ. ಜೂನ್ 29 ರ ಮುಹೂರ್ತ ನಿಗದಿಯಾಗಿದೆ. ಒಂದು ಸುಮೋ ಗಾಡಿಯಲ್ಲಿ ಪೂರಿ ಶಿವನ ಗ್ಯಾಂಗ್ ರೆಡಿಯಾದರೆ ಮತ್ತೊಂದು ಸುಮೋದ ಸಾರಥ್ಯ ವಹಿಸಿದವನು ಟಗರು ಮಂಜ. ಸಂಜೆ ಏಳು ಗಂಟೆಯಾಗುತ್ತಿದ್ದಂತೆ ಎರಡೂ ಗಾಡಿಗಳು ರೌಂಡಿಂಗ್‌ಗಿಳಿದಿವೆ. ನೆಲಮಂಗಲದ ಗಣೇಶನ ಗುಡಿ ಬಳಿಯಿದ್ದ ಮಂಜನ ಮನೆ ಮುಂದೆ ಟಗರು ಮಂಜನ ಸುಮೋ ಹೊಂಚು ಹಾಕುತ್ತಿದ್ದರೆ ಹಿಂಭಾಗದಲ್ಲಿ ಪೂರಿ ಶಿವನ ಗ್ಯಾಂಗ್ ಕಾದು ಕುಳಿತಿದೆ.

ಅದೇನು ಯಡವಟ್ಟಾಯಿತೋ ಗೊತ್ತಿಲ್ಲ. ಮೊದಲೇ ಹುಷಾರಾಗಿದ್ದ ಹ್ಯಾಡಾಳು ದೇವಿಯ ತಮ್ಮ ಮಂಜ ನಿಂತಿದ್ದ ಸುಮೋ ಗಾಡಿಯನ್ನು ನೋಡಿಬಿಟ್ಟ. ಹೇಗೂ ಶಂಕ್ರನಿಗೆ ರೌಂಡಿಂಗ್ ಶುರುಹಚ್ಚಿಕೊಂಡಿದ್ದನಲ್ಲ, ಎರಡು ಕ್ವಾಲಿಸ್ ಗಾಡಿಗಳಲ್ಲಿ ಹುಡುಗರನ್ನು ಕರೆಸಿದ ಮಂಜ ಅನಿರೀಕ್ಷಿತವಾಗಿ ಟಗರು ಮಂಜನ ಗಾಡಿಗೇ ಲಾಕ್ ಮಾಡಿಬಿಟ್ಟ. ಹಿಂದೊಂದು ಕ್ವಾಲಿಸ್ ಮುಂದೊಂದು ಕ್ವಾಲಿಸ್ ಗಾಡಿಗಳಲ್ಲಿ ಮಂಜನ ಹುಡುಗರು ಲಾಕ್ ಮಾಡಿದ್ದು ಗೊತ್ತಾಗಿದ್ದೇ ಹುಷಾರಾದ ಟಗರು ಮಂಜ ತನ್ನ ಸುಮೋ ಸ್ಟಾರ್ಟ್ ಮಾಡಿದ್ದೇ ನುಗ್ಗಿಸಿಬಿಟ್ಟ. ಹಾಗೇ ದಬಾಯಿಸಿ ಸುಮೋ ನುಗ್ಗಿಸಿ ಪರಾರಿಯಾಗಲೆತ್ನಿಸಿದ ಟಗರು ಮಂಜನನ್ನು ಹ್ಯಾಡಾಳು ಮಂಜನ ಗಾಡಿಗಳು ಬೆನ್ನಟ್ಟುತ್ತಿದ್ದಂತೆ ನೆಲಮಂಗಲದ ಇನ್ಸ್‌ಪೆಕ್ಟರ್ ಯತಿರಾಜು ಮತ್ತು ಎಸ್.ಐ. ರಾಜು ಹಿಂಬಾಲಿಸಿದ್ದಾರೆ.

ಗಾಬರಿಗೆ ಬಿದ್ದು ಸೊಂಡೆಕೊಪ್ಪ ರಸ್ತೆಗೆ ಗಾಡಿ ನುಗ್ಗಿಸಿದ ಟಗರು ಮಂಜನ ನಸೀಬೇ ಕೆಟ್ಟಿತ್ತೇನೊ. ಸುಮೋ ಪಲ್ಟಿ ಹೊಡೆದು ಪಕ್ಕದ ಕಂದಕಕ್ಕೆ ಬಿದ್ದಿದೆ. ಇಬ್ಬರು ಎಸ್ಕೇಪಾಗಿದ್ದು ಬಿಟ್ಟರೆ ಮಂಜುನಾಥನಗರದ ಮನೋಜ್, ನೆಲಮಂಗಲದ ರಾಜೇಶ ಉರ್ಫ್ ಲೂಸ್, ಕೊಳಾಲದ ಹರೀಶ ಮತ್ತು ಟಗರು ಮಂಜು ಸುಮೋದೊಳಕ್ಕೆ ಸಿಲುಕಿ ಕೈಕಾಲು ಮುರಿದುಕೊಂಡಿದ್ದಾರೆ. ಹಿಂಬಾಲಿಸಿದ ನೆಲಮಂಗಲ ಪೊಲೀಸರು ಬಿದ್ದು ಒದ್ದಾಡುತ್ತಿದ್ದ ಟಗರು ಗ್ಯಾಂಗನ್ನು ಆಸ್ಪತ್ರೆಗೆ ಸೇರಿಸಿದ್ದಾರೆ. ಈ ಮಧ್ಯೆ ಎಸ್ಕೇಪಾದ ಪೂರಿಶಿವ ಅತ್ತಲಿಂದ ಟಗರು ಮಂಜನ ಮೊಬೈಲಿಗೆ ಫೋನ್ ಮಾಡಿ 'ಹೊಡೆದ್ರೊ ಅಥವಾ ಎಸ್ಕೇಪಾದ್ರೋ..." ಎಂದು ಕೇಳಿದ್ದನ್ನು ಪೊಲೀಸರೇ ಕೇಳಿಸಿಕೊಂಡಿದ್ದಾರೆ.

ಸದ್ಯ ಟಗರು ಮಂಜನ ಗ್ಯಾಂಗ್ ನೆಲಮಂಗಲದ ಲಾಕಪ್ಪಿನಲ್ಲಿದ್ದರೆ, ಬೇಟೆ ಮಿಸ್ಸಾದ ಪೇಚಿನಲ್ಲಿ ಶಂಕ್ರ ತಲೆತಲೆ ಚಚ್ಚಿಕೊಳ್ಳುತ್ತಿದ್ದಾನೆ. ಹ್ಯಾಡಾಳು ಮಂಜನ ಆಯುಸ್ಸಿನ್ನೂ ಗಟ್ಟಿಯಿತ್ತೇನೊ. ಅಥವಾ ಶಂಕ್ರನ ಕೇಡುಗಾಲ ಶುರುವಾಗಿರಬೇಕು.


ಬಹುಶಃ ಇಷ್ಟರಲ್ಲೇ ನೆಲಮಂಗಲ ಪೊಲೀಸರ ಕೈಯಲ್ಲಿ ಬೆತ್ತನಗೆರೆ ಶಂಕ್ರನ ಎನ್‌ಕೌಂಟರ್ ನಡೆದರೂ ಅಚ್ಚರಿ ಪಡಬೇಕಿಲ್ಲ. ಬೆಂಗಳೂರು ಪಾಪ ಕೂಪಕ್ಕೂ ನೆಲಮಂಗಲದ ರಕ್ತ ಪಿಪಾಸುಗಳಿಗೂ ಏರ್ಪಟ್ಟ ದೋಸ್ತಿಗೆ ಇನ್ನೆಷ್ಟು ಹೆಣ ಬೀಳುತ್ತದೋ ಗೊತ್ತಿಲ್ಲ. ಒಂದೆಡೆ ಶಂಕ್ರ ಮತ್ತೊಂದೆಡೆ ಸೀನ ಇಬ್ಬರಲ್ಲಿ ಯಾರೇ ನಿಕಾಲಿಯಾದರೂ ನೆಲಮಂಗಲದ ಸರಣಿ ಹತ್ಯೆ ನಿಲ್ಲುವ ಲಕ್ಷಣಗಳಿಲ್ಲ.

● ರಾ. ಸೋಮನಾಥ್

ಧಮಕಿ ಹಾಕಿದ ಜನಾರ್ದನ ರೆಡ್ಡಿ

ಟಪಾಲ್ ಗಣೇಶ್ ಹತ್ಯೆಗೆ ಆದಿರು ಕಳ್ಳರ ಸುಪಾರಿ?

'ಈ ನಮ್ಮ ಕನ್ನಡನಾಡು' ಎಂಬುದು ಗಾಲಿ ಜನಾರೆಡ್ಡಿ ನಡೆಸುವ ಬಳ್ಳಾರಿಯ ಲೋಕಲ್ ದಿನಪತ್ರಿಕೆ. ತಮಾಷೆಯೆಂದರೆ ಅದರ ಸಂಪಾದಕ ಮಾಲೀಕ, ಲೇಖಕ ಕೊನೆಗೆ ಓದುಗ ಕೂಡ ಜನಾರ್ದನ ರೆಡ್ಡಿಯೆ!




ಪ್ರಸಾರ, ವ್ಯಾಪಾರ ಯಾವುದೂ ಇಲ್ಲದ ಇಂಥ ಅರೆಸತ್ತ ಪತ್ರಿಕೆಯ ಜೂನ್ 28 ರ ಸಂಚಿಕೆಯಲ್ಲಿ ಜನಾರ್ದನ ರೆಡ್ಡಿ ಬರೆದ(!) ಧಮಕಿ ಸಂಪಾದಕೀಯದ ಕೆಲ ಸಾಲುಗಳು ಹೀಗಿವೆ–

ಈ ಟಪಾಲ್ ಗಣೇಶ ಮತ್ತು ದಿವಾಕರ್ ಬಾಬು ಬಳ್ಳಾರಿ ಜಿಲ್ಲೆಗಾಗಲಿ ರಾಜ್ಯಕ್ಕಾಗಲಿ ಏನು ಕೊಡುಗೆ ಕೊಟ್ಟಿದ್ದಾರೆ? ಅದರಲ್ಲೂ ಟಪಾಲ್ ಗಣೇಶ್ ಪ್ರತಿನಿತ್ಯ ಪತ್ರಿಕಾ ಮಾಧ್ಯಮಗಳ ದಿಕ್ಕುತಪ್ಪಿಸಿ ನನ್ನ ವಿರುದ್ಧ ಸುಳ್ಳು ಆರೋಪ ಮಾಡುತ್ತಾನೆ. ಈಗಲಾದರೂ ಮೀಡಿಯಾಗಳು ಇಂಥವರಿಗೆ ಮಣೆ ಹಾಕುವುದನ್ನು ನಿಲ್ಲಿಸಿ ಸತ್ಯ ಬರೆಯಬೇಕು. ಇನ್ನು ಮುಂದಾದರೂ ಟಪಾಲ್ ಗಣೇಶ್ ಥರದವರು ಬುದ್ಧಿ ಕಲಿಯಬೇಕು....!

ಇದು ಮಂತ್ರಿ ಜನಾರ್ದನ ರೆಡ್ಡಿ ತನ್ನ ಹೆಸರಲ್ಲಿ ಬರೆಸಿದ ಸಂಪಾದಕೀಯ. ರೆಡ್ಡಿಗೆ ಬರೆಯಲು ಬರುತ್ತೋ ಇಲ್ಲವೋ ಆ ಮಾತು ಬೇರೆ; ಆದರೆ ಹೀಗೆ ಬುದ್ಧಿ ಕಲಿಯಬೇಕು, ಅರ್ಥ ಮಾಡಿಕೊಳ್ಳಬೇಕು ಎಂಬರ್ಥದಲ್ಲಿ ಜನಾರ್ದನ ರೆಡ್ಡಿ ಹೂಂಕರಿಸುತ್ತಾನೆಂದರೆ ಅದಕ್ಕೆ ಬೇರೆಯದೇ ಅರ್ಥವಿದೆ. ನಿಸ್ಸಂಶಯವಾಗಿ ಅದು ಧಮಕಿ. ಶುರುವಿನಿಂದಲೂ ಗಣಿ ರೆಡ್ಡಿಗಳಿಂದ ಕೊಲೆ ಬೆದರಿಕೆ ಎದುರಿಸಿಕೊಂಡೇ ಬಂದ ಟಪಾಲ್ ಗಣೇಶ್ ಹತ್ಯೆಗೆ ರೌಡಿ ಶ್ರೀರಾಮುಲು ಗ್ಯಾಂಗ್ ಒಂದಲ್ಲ ಎರಡು ಬಾರಿ ಕೈಹಾಕಿದೆ. ಗಣಿ ಚೋರರ ಬಾಡಿಗೆ ಹಂತಕರಿಂದ ಸ್ವಲ್ಪದರಲ್ಲೇ ಪಾರಾದ ಟಪಾಲ್ ಗಣೇಶ್ ಕರ್ನಾಟಕಕ್ಕೆ ಬೇರೇನೂ ಕೊಡದೇ ಹೋದರೂ ಗಡಿನಕ್ಷೆ ತಿದ್ದಿ ಆದಿರು ದೋಚಿದ್ದನ್ನು ಸಾಕ್ಷಾಧಾರ ಸಮೇತ ಬೆಳಕಿಗೆ ತಂದರಲ್ಲ; ಅದಕ್ಕಿಂತ ಇನ್ನೇನು ಬೇಕು?

ಇದೇ ಕಾರಣಕ್ಕೆ, ಆಂಧ್ರದ ರಾಯದುರ್ಗದ ಹಿರೇಹಾಳ್ ಪೊಲೀಸ್ ಠಾಣೆಯಲ್ಲಿ ಟಪಾಲ್ ಗಣೇಶ್ ಮತ್ತವರ ಅಣ್ಣ ಏಕಾಂಬರಮ್ ವಿರುದ್ಧ ರೆಡ್ಡಿ ಸುಳ್ಳು ಕ್ರಿಮಿನಲ್ ಕೇಸ್ ಹಾಕಿಸಿದ್ದಾನೆ. ಅದೂ ಕೊಲೆಯತ್ನದ ಕೇಸು. ಭಾಷಾ ಎಂಬ ಗಣಿ ರೆಡ್ಡಿಯ ಚೇಲಾನನ್ನು ಟಪಾಲ್ ಬ್ರದರ್ಸ್ ಮಾರಣಾಂತಿಕ ಹಲ್ಲೆ ನಡೆಸಿ ಕೊಲ್ಲಲು ಯತ್ನಿಸಿದರಂತೆ.



ಇದಾಗಿ ಕೆಲ ದಿನಕ್ಕೇ ತೋರಣಗಲ್ ಪೊಲೀಸರನ್ನು ಛೂಬಿಟ್ಟು ಟಪಾಲ್ ಗಣೇಶ್ ವಿರುದ್ಧ ಮತ್ತೊಂದು ಕಳವಿನ ಖೊಟ್ಟಿ ಕೇಸು ಹಾಕಿಸಿದ. ಅರಣ್ಯಾಧಿಕಾರಿಗಳನ್ನು ಕೊಲ್ಲಲು ಯತ್ನಿಸಿದರೆಂಬ ಇನ್ನೊಂದು ಕೇಸಿಗೆ ದಿವಾಕರ್ ಬಾಬುವನ್ನು ರೆಡ್ಡಿ ಸಿಕ್ಕಿಸಿದ್ದ. ಗಣೇಶ್ ವಿರುದ್ಧ ನಿಷೇಧಾಜ್ಞೆ ಉಲ್ಲಂಘಿಸಿದ ಮಗದೊಂದು ಕೇಸು, ಅರಣ್ಯಾಧಿಕಾರಿಗಳ ಮೇಲೆ ದಾಳಿ ನಡೆಸಿದರೆಂಬ ಇನ್ನೊಂದು ಕೇಸು ಹೀಗೆ ಒಂದರ ಮೇಲೊಂದು ಸುಳ್ಳು ಕೇಸುಗಳನ್ನು ಹಾಕಿಸುತ್ತಲೇ ಬಂದವನು ಜನಾರೆಡ್ಡಿ.

ಇಷ್ಟಾಗ್ಯೂ ಟಪಾಲ್ ಕುಟುಂಬ ಜಗ್ಗಲಿಲ್ಲ. ಈಗ ಗಣಿಚೋರರರ ಹತಾಶೆ ಯಾವ ಮಟ್ಟ ಮುಟ್ಟಿದೆಯೆಂದರೆ ಪತ್ರಿಕೆಯ ಸಂಪಾದಕೀಯವನ್ನೇ ಧಮಕಿಗೆ ಬಳಸುತ್ತಿದ್ದಾರೆ. ಜೂನ್ 28 ರ ರೆಡ್ಡಿ ಸಂಪಾದಕೀಯ ಪ್ರಕಟಗೊಂಡ ಮರುದಿನದಿಂದಲೇ ಟಪಾಲ್ ಮೊಬೈಲಿಗೆ ಬೆದರಿಕೆ ಕರೆಗಳು ಬರುತ್ತಿವೆ. ಮನೆಗೇ ನುಗ್ಗಿ ಕತ್ತರಿಸ್ತೀವಿ, ಹೆಣವೇ ಸಿಗದಂತೆ ಸುಟ್ಟು ಹಾಕ್ತೀವಿ ಎಂಬರ್ಥದ ಧಮಕಿ ಕರೆಗಳು ಪದೇಪದೇ ಬರುತ್ತಿವೆ. ಇಂಥ ಧಮಕಿಯ ಹಿಂದಿರುವುದು ಶ್ರೀರಾಮುಲುನ ರೌಡಿಪಡೆಯಲ್ಲದೇ ಬೇರೆ ಯಾರೂ ಆ ಮಟ್ಟಕ್ಕಿಳಿಯೋಲ್ಲ ಎಂಬುದು ಬಳ್ಳಾರಿಗೇ ಗೊತ್ತು.

ಹಾಗಿಲ್ಲದಿದ್ದರೆ ಜನಾರೆಡ್ಡಿ ತನ್ನ ಸಂಪಾದಕೀಯದಲ್ಲೇ ಏಕೆ ಥ್ರೆಟ್ ಕೊಡುತ್ತಿದ್ದ? ಇದರರ್ಥ ಟಪಾಲ್ ಗಣೇಶ್ ಪ್ರಾಣಕ್ಕೆ ಕುತ್ತು ಬಂದಿದೆ. ಹೇಗೂ ರೆಡ್ಡಿಗಳದೇ ಸರ್ಕಾರವಿದೆ. ಅಧಿಕಾರವಿಲ್ಲದೆಯೇ ಅನಿಲ್ ಲಾಡ್ ಮನೆಗೆ ನುಗ್ಗಿ ಬೆಂಕಿ ಹಚ್ಚಿದ ಶ್ರೀರಾಮುಲುಗೆ ಗಣೇಶ್‌ರಂಥ ಒಬ್ಬಂಟಿಯನ್ನು ಕೊಲ್ಲುವುದು ಯಾವ ಲೆಕ್ಕ?

ವಿರೋಧಿ ಕಾಂಗ್ರೆಸ್ ಮತ್ತು ಜೆಡಿಎಸ್‌ಗಳು ಈಗಲಾದರೂ ಗಣೇಶ್ ಬೆಂಬಲಕ್ಕೆ ಬರದೇ ಹೋದರೆ ಏನರ್ಥ? ■

ಕಿರುಚಿತ್ರಗಳು ನೀಡಿದ ಸಂತೋಷ

'ದೇವೀರಿ' ಚಿತ್ರ ಮಾಡಿದ ಮೇಲೆ ನಾನು ಸುಮಾರು 20 ಸಾರಿ ಕೇರಳಕ್ಕೆ ಹೋಗಿರಬಹುದು. ನಾನು ಆ ರಾಜ್ಯಕ್ಕೆ ಇಷ್ಟೊಂದು ಬಾರಿ ಭೇಟಿ ನೀಡಿದ್ದ ಕಾರಣಕ್ಕೆ ನನ್ನ ಕೆಲ ಫ್ರೆಂಡ್ಸ್ ನನ್ನನ್ನು 'ಕವಿತಾ ಕುಟ್ಟಿ' ಎಂದು ಕರೆಯಲಾರಂಭಿಸಿದ್ದರು.

ಮೊನ್ನೆ ಕೇರಳ ಚಲನಚಿತ್ರ ಅಕಾಡೆಮಿಯಿಂದ ಫೋನ್ ಬಂತು. ರಾಷ್ಟ್ರೀಯ ಕಿರು ಚಿತ್ರೋತ್ಸವಕ್ಕೆ ಜ್ಯೂರಿಯಾಗಿ ಬರ್‍ತೀರಾ ಅಂತಾ ಕೇಳಿದರು. ನನ್ನ ಮಗಳು ಇಶಾ ಕೂಡ ಕೇರಳ ನೋಡಲು ಆಸೆಪಟ್ಟಿದ್ದರಿಂದ ಒಪ್ಪಿಕೊಂಡೆ. ಆ ಸ್ಪರ್ಧೆಯಲ್ಲಿ 17 ಕಿರುಚಿತ್ರ, **fiction, 7 animation** ಮತ್ತು ಆರು ಮ್ಯೂಸಿಕ್ ವಿಡಿಯೋಗಳಿದ್ದವು. ಹಿಂದಿಯ ಖ್ಯಾತ ನಟ-ನಿರ್ದೇಶಕ ಅಮುಲ್ ಪಾಲೇಕರ್ ಜ್ಯೂರಿಯ ಅಧ್ಯಕ್ಷತೆ ವಹಿಸಿದ್ದರು. ಜೆ.ಪಿ. ರಾಮಚಂದ್ರನ್ ಅಂತಾರಾಜ್ಯ ಪ್ರಶಸ್ತಿ ವಿಜೇತ ಸಿನಿಮಾ ವಿಮರ್ಶಕರು ಸಹ ಜ್ಯೂರಿಯಲ್ಲಿದ್ದರು. ಅಲ್ಲಿಗೆ ಹೋದ ಮೊದಲೆರಡು ದಿನ ಯಾವ ಕೆಲಸವೂ ಇರಲಿಲ್ಲ. ಅಮ್ಮಾ, ಇಶಾಳನ್ನು ಕರ್‍ಕೊಂಡು ಬೀಚು, ಹೌಸ್‌ಬೋಟ್ ಅಂತ ಸುತ್ತಾಡಿದೆ. ಮೂರನೆ ದಿನ ಸ್ಪರ್ಧೆಯಲ್ಲಿದ್ದ ಸಿನಿಮಾಗಳನ್ನು ನೋಡಲು ಶುರು ಮಾಡಿದೆವು.

ನಾನು ಇಲ್ಲಿಯತನಕ ಹೆಚ್ಚು ಸಾಕ್ಷ್ಯ ಚಿತ್ರ ಹಾಗೂ ಚಲನಚಿತ್ರಗಳನ್ನು ನೋಡಿದ್ದರಿಂದ ಈ ಕಿರುಚಿತ್ರಗಳ ಬಗ್ಗೆ ಹೆಚ್ಚು ನಿರೀಕ್ಷೆ ಇಟ್ಟುಕೊಂಡಿರಲಿಲ್ಲ. ಆದರೆ ಕೆಲವು ಸಿನಿಮಾಗಳು ಎಷ್ಟು ವಿಭಿನ್ನವಾಗಿದ್ದವು ಅಂದರೆ ಅವು ನನಗೆ ಆಶ್ಚರ್ಯ ಮತ್ತು ಖುಷಿ ಕೊಟ್ಟವು. ಅದನ್ನೆಲ್ಲ ನಿಮ್ಮೊಂದಿಗೆ ಹಂಚಿಕೊಳ್ಳಲು ಈ ಲೇಖನ.

'ಡಿಯರ್ ಕಿಮ್' ಎನ್ನುವ ಒಂದು ಸಿನಿಮಾ ತುಂಬಾ ಚೆನ್ನಾಗಿತ್ತು. ನೋಡಿ ಎಂತಹ ಸಬ್ಜೆಕ್ಟು.... ಕಸ ಎತ್ತಿಕೊಂಡು ದಿನಗೂಲಿ ಮಾಡೋ ಮೂವರಿಗೆ ಸಿನಿಮಾ ಬಗ್ಗೆ ವಿಪರೀತ ಹುಚ್ಚು. ಅದೂ ಎಂತಹ ಸಿನಿಮಾ ಬಗ್ಗೆ ಅಂತೀರಾ? ಮಾಮೂಲಿ ಕಮರ್ಷಿಯಲ್ ಸಿನಿಮಾ ಬಗ್ಗೆ ಅಲ್ಲ, ಬದಲಾಗಿ ಅಂತರರಾಷ್ಟ್ರೀಯ ಸಿನಿಮಾಗಳ ಬಗ್ಗೆ ಅವರಿಗೆ ಕ್ರೇಜ್. ಈ ಮೂವರು ಗೊಡಾರ್ಡ್ ಕಿಯಾರೊಸಾಮಿ, ಕಿಮ್ ಕು ಡುಕ್ ತರಹದ ನಿರ್ದೇಶಕರ ಸಿನಿಮಾಗಳ ಕಥೆ ಬಗ್ಗೆ ಚರ್ಚೆ ಮಾಡೋದು ಎಷ್ಟು ಚೆನ್ನಾಗಿ ಸೆರೆಹಿಡಿದಿದ್ದಾರೆಂದರೆ ಅದು ಅಸಹಜವಾಗಿ ಕಾಣಿಸುವುದಿಲ್ಲ, ಯಾಕೆಂದರೆ ಮಲೆಯಾಳಿಗಳು ಅಷ್ಟು ಓದಿಕೊಂಡಿರೋರು, ತಿಳ್ಕೊಂಡಿರೋರು. ಅದಕ್ಕೆ ಇಲ್ಲಿ ಒಂದು ಉದಾಹರಣೆ ಕೊಡಬಹುದು. ಕೇರಳದ ಒಂದು ಪುಸ್ತಕ ಪ್ರಕಾಶನ ಸಂಸ್ಥೆ ಖ್ಯಾತ ಸ್ಪಾನಿಷ್ ಬರಹಗಾರ ನೊಬೆಲ್ ವಿಜೇತ ಗೇಬ್ರಿಯಲ್ ಮಾರ್ಕ್ವೆಜ್‌ಗೆ ಒಂದು ಕಾಗದ ಬರೆದು ನಿಮ್ಮ ಕಥೆಯೊಂದನ್ನು ಮಲಯಾಳಂಗೆ ಅನುವಾದ ಮಾಡಬಹುದಾ? ಎಂದು ಅನುಮತಿ ಕೇಳಿತಂತೆ. ಮಾರ್ಕ್ವೆಜ್‌ಗೆ ಕೇರಳವಿರಲಿ, ಮಲೆಯಾಳಂ ಅಂದ್ರೇನು ಅಂತಾ ಗೊತ್ತಾಗದೇ ಮಾಡ್ಕೊಳ್ಳಿ ಅಂತ ಅನುಮತಿ ಕೊಟ್ಟರಂತೆ. ಆ ಪುಸ್ತಕ ಪ್ರಕಟಗೊಂಡು ಎಷ್ಟು ಜನಪ್ರಿಯವಾಯಿತೆಂದರೆ ಹಳ್ಳಿಹಳ್ಳಿಯಲ್ಲೂ ಮಾರ್ಕ್ವೆಜ್ ಅವರನ್ನು ಓದಿದ ಜನರಿದ್ದರು. ಅಷ್ಟೇ ಯಾಕೆ, ಕೆಲವು ಮಲೆಯಾಳಿಗಳು ಮಾರ್ಕ್ವೆಜ್‌ರವರು ಮಲೆಯಾಳಿಯೇ ಅಂದುಕೊಂಡಿದ್ದರು......

ಇಂತಹ ಕಾರಣಗಳಿಂದ 'ಡಿಯರ್ ಕಿಮ್' ಸಿನಿಮಾದಲ್ಲಿ ದಿನಗೂಲಿ ಮಾಡುವವರು ಅಂತರರಾಷ್ಟ್ರೀಯ ನಿರ್ದೇಶಕರ ಬಗ್ಗೆ ಚರ್ಚಿಸುವುದು ವಿಚಿತ್ರವಾಗಿ ಕಾಣಿಸುವುದಿಲ್ಲ. ಕಥೆಯ ಮೂವರು ನಾಯಕರು ನಗರಕ್ಕೆ ಹೋಗುತ್ತಿರುವವನೊಬ್ಬನ ಕೈಗೆ ಹಣ ಕೊಟ್ಟು ಕಿಮ್ ಕು ಡುಕ್‌ರವರ ಸಿನಿಮಾದ ಡಿವಿಡಿ ತರಲು ಹೇಳುತ್ತಾರೆ. ಆತ ಡಿವಿಡಿ ತಂದ ಮೇಲೆ ಎಲ್ಲರೂ ಸಂಭ್ರಮದಿಂದ ಡಿವಿಡಿ ಪ್ಲೇಯರ್ ಒಂದನ್ನು ಅರೇಂಜ್ ಮಾಡಿಕೊಂಡು ಅದರೊಳಗೆ ಡಿವಿಡಿ ಹಾಕಿದರೆ, ಅದು ಯಾವುದೋ ಬ್ಲೂಫಿಲ್ಮ್! ನಿರಾಶೆಗೊಂಡ ಈ ಮೂವರು ಚಿತ್ರ ಪ್ರೇಮಿಗಳು "ರಾಷ್ಟ್ರೀಯ ಚಲನಚಿತ್ರೋತ್ಸವ ಯಾವಾಗಲೂ ಬರೀ ಪಟ್ಟಣಗಳಲ್ಲಿ ನಡೆಯುತ್ತದೆ. ಅದರ ಬದಲು ಹಳ್ಳಿಹಳ್ಳಿಗೂ ಬಂದರೆ ನಾವೂ ನೋಡಬಹುದಲ್ಲ"

ನಾನು ಇಲ್ಲಿಯತನಕ ಹೆಚ್ಚು ಸಾಕ್ಷ್ಯ ಚಿತ್ರ ಹಾಗೂ ಚಲನಚಿತ್ರಗಳನ್ನು ನೋಡಿದ್ದರಿಂದ ಈ ಕಿರುಚಿತ್ರಗಳ ಬಗ್ಗೆ ಹೆಚ್ಚು ನಿರೀಕ್ಷೆ ಇಟ್ಟುಕೊಂಡಿರಲಿಲ್ಲ. ಆದರೆ ರಾಷ್ಟ್ರೀಯ ಕಿರು ಚಿತ್ರೋತ್ಸವಕ್ಕೆ ಜ್ಯೂರಿಯಾಗಿ ಹೋಗಿದ್ದಾಗ ಕೆಲವು ಸಿನಿಮಾಗಳು ಎಷ್ಟು ವಿಭಿನ್ನವಾಗಿದ್ದವು ಅಂದರೆ ಅವು ನನಗೆ ಆಶ್ಚರ್ಯ ಮತ್ತು ಖುಷಿ ಕೊಟ್ಟವು. ಅದನ್ನೆಲ್ಲ ನಿಮ್ಮೊಂದಿಗೆ ಹಂಚಿಕೊಳ್ಳಲು ಈ ಲೇಖನ.

● ಕವಿತಾ ಲಂಕೇಶ್

ಎಂದುಕೊಳ್ಳುತ್ತಾರೆ. ಅದೇನೇ ಆಗಲಿ ತಿರುವನಂತಪುರದಲ್ಲಿ ನಡೆವ ಚಿತ್ರೋತ್ಸವಕ್ಕೆ ಹೋಗೇಬಿಡೋಣ ಅಂತಾ ನಿರ್ಧರಿಸುತ್ತಾರೆ. ಮುಂಜಾನೆ ಹಳ್ಳಿಯಿಂದ ತಿರುವನಂತಪುರಕ್ಕೆ ಇರೋದೊಂದೇ ಬಸ್ಸು. ಇವರು ಕಾಯ್ತಾನೇ ಇರುತ್ತಾರೆ. ಆದರೆ ಸಾರಿಗೆ ನೌಕರರ ಮುಷ್ಕರ ನಡೆಯುತ್ತಿರುವುದರಿಂದ ಆ ಬಸ್ಸು ಬರುವುದೇ ಇಲ್ಲ. ವಾಪಸ್ ಹಳ್ಳಿಗೆ ಹಿಂದಿರುಗಿ ಕಿಮ್ ಕು ಡುಕ್ ಅವರಿಗೆ ಒಂದು ಕಾಗದ ಬರೆಯೋಣ ಅಂತ ನಿರ್ಧರಿಸುತ್ತಾರೆ. ಕಾಗದ ಶುರುವಾಗುವುದು ಹೀಗೆ: "ಪ್ರೀತಿಯ ಕಿಮ್, ನಾವು ನಿಮ್ಮ ಯಾವುದೇ ಸಿನಿಮಾವನ್ನು ನೋಡದಿದ್ದರೂ ಈ ಜಗತ್ತಿನಲ್ಲೇ ನಿಮ್ಮ ದೊಡ್ಡ ಅಭಿಮಾನಿಗಳು. ಯಾಕೆಂದರೆ ನಾವು ನಿಮ್ಮ ಸಿನಿಮಾಗಳ ವಿಮರ್ಶೆಗಳನ್ನು ಓದಿದ್ದೀವಿ...." ಮಲಯಾಳಂನಲ್ಲಿ ಬರೆದಿರುವ ಆ ಪತ್ರವನ್ನು ಇಂಗ್ಲಿಷ್‌ಗೆ ಅನುವಾದ ಮಾಡಿಸಿದ ಮೇಲೆ ಅದನ್ನು ಕಿಮ್‌ಗೆ ಹೇಗೆ ಕಳಿಸೋದು, ಆತನ ವಿಳಾಸ ಪತ್ತೆ ಮಾಡೋದು



ಹೇಗೆ ಎಂದು ಚಿಂತೆಗೀಡಾಗುತ್ತಾರೆ. ಕೊನೆಗೆ ಇಂಟರ್‌ನೆಟ್‌ನಲ್ಲಿ ಎಲ್ಲರ ಅಡ್ರೆಸ್ ಇರುತ್ತೆ ಅಂತ ಗೊತ್ತಾಗಿ ಒಂದು ಬ್ರೌಸಿಂಗ್ ಸೆಂಟರ್‌ಗೆ ಹೋಗುತ್ತಾರೆ. ಆ ಬ್ರೌಸಿಂಗ್ ಸೆಂಟರ್ ಮಾಲೀಕನಿಂದ ಇಂಟರ್‌ನೆಟ್ ಅನ್ನು ಬ್ರೌಸ್ ಮಾಡುವುದು ಹೇಗೆ ಎಂದು ಕಲಿತುಕೊಂಡು ಇಡೀ ದಿನ ಕೀಬೋರ್ಡ್ ಕುಟ್ಟುತ್ತ ಕಾಗದವನ್ನು ರೆಡಿ ಮಾಡುತ್ತಾರೆ. ಅಂಗಡಿ ಮಾಲೀಕನಿಗೆ ಇದನ್ನು ನಿರ್ದೇಶಕ ಕಿಮ್ ಕು ಡುಕ್‌ಗೆ ಕಳಿಸು ಎಂದು ಅವರು ಕೇಳಿಕೊಂಡಾಗ ಆತ ಇಮೇಲ್-ಐಡಿ ಕೇಳುತ್ತಾನೆ. ಇಂಟರ್‌ನೆಟ್‌ನಲ್ಲೇ ಹುಡುಕಿ ಮಾರಾಯ್ರೆ ಎಂಬ ಉತ್ತರ ಬರುತ್ತದೆ. ಅಷ್ಟೊತ್ತಿಗೆ ಕಿಲಕಿಲ ಎಂದು ನಗುತ್ತ ಬರುವ ಇಬ್ಬರು ಹುಡುಗಿಯರನ್ನು ನೋಡುವ ಮಾಲೀಕ "ಆಯ್ತು ಕಳಿಸ್ತೀನಿ ಬಿಡಿ" ಅಂತ ಅವರಿಗೆ ಹೇಳಿ ಪತ್ರವನ್ನೇ ಡಿಲೀಟ್ ಮಾಡುತ್ತಾನೆ.

ತಮ್ಮ ಪತ್ರ ಕಿಮ್ ಅನ್ನು ಮುಟ್ಟುತ್ತದೆ ಎಂದೇ ನಂಬಿರುವ ಈ ಮೂವರು ಆತ ತಮಗೆಂದು ತನ್ನ ಯಾವ್ಯಾವ ಸಿನಿಮಾದ ಡಿವಿಡಿಗಳನ್ನು ಕಳುಹಿಸಬಹುದು ಎಂದು ಚರ್ಚಿಸುತ್ತಾರೆ. ಅಷ್ಟೇ ಅಲ್ಲ ಒಂದು ಬಂಡೆಯ ಮೇಲೆ ಕಿಮ್ ನಿರ್ದೇಶಿಸಿದ ಸಿನಿಮಾಗಳ ಹೆಸರು



ಬರೆದು, ಅದಕ್ಕೆ ಕಲ್ಲಿನಲ್ಲಿ ಹೊಡೆಯುತ್ತಾ, ಕಿರುಚುತ್ತಾ ಯಾವ ಹೆಸರಿಗೆ ಕಲ್ಲು ಬೀಳುತ್ತೋ ಆ ಡಿವಿಡಿಗಳು ತಮಗೆ ತಲುಪುತ್ತವೆ ಅಂತ ಕುಣಿದಾಡುತ್ತಾರೆ. ಅಲ್ಲಿಗೆ ಚಿತ್ರ ಮುಗಿಯುತ್ತದೆ. ಈ ಚಿತ್ರ ಪ್ರೇಮಿಗಳು ಕೊನೆಯವರೆಗೂ ಆಶಾವಾದದಿಂದಲೇ ಇರುತ್ತಾರೆ ಕಿಮ್‌ನ ಡಿವಿಡಿಗಳು ಬಂದೇ ಬರುತ್ತವೆ ಎಂದು...

****

ಇನ್ನೊಂದು ಖುಷಿಕೊಟ್ಟ ಸಿನಿಮಾ 'ನ್ಯೂಸ್'. ಸುಮಾರು ಏಳು ವರ್ಷದ ಹುಡುಗ ಒಬ್ಬ ವ್ಯಾಪಾರಸ್ಥ ಮಾಲೀಕನ ಮನೆಯಲ್ಲಿ ಕೆಲಸ ಮಾಡುತ್ತಿರುತ್ತಾನೆ. ದಿನಾ ಸಾಯಂಕಾಲ ಬಿಟ್ಟೂಬಿಡದೇ 'ನ್ಯೂಸ್' ನೋಡೋದು ಆ ವ್ಯಾಪಾರಿಯ ಹವ್ಯಾಸ. ಅವನು ನ್ಯೂಸ್ ನೋಡುತ್ತಿರುವಾಗ ಈ ಕೆಲಸಗಾರ ಹುಡುಗ ತುಟಿಪಿಟಿಕ್ ಎಂದರೆ ಬಸ್ಕಿ ಹೊಡೆವ ಶಿಕ್ಷೆ ಗ್ಯಾರಂಟಿ. ಆ ಮಾಲೀಕ ಕೆಲಸಕ್ಕೆ ಹೋದಾಗ ಈ ಪುಟ್ಟ ಹುಡುಗ ಪಾತ್ರೆ ತೊಳೆದು, ಬಟ್ಟೆ ತೊಳೆದು, ಗಬಗಬ ಊಟ ಮಾಡಿ, ಸಾಯಂಕಾಲ ತರಕಾರಿ ತರುವುದು ಆತನ ದಿನಚರಿ. ತರಕಾರಿ ಮಾರುವ ಹದಿಹರೆಯದ ಹುಡುಗ ಈ ಪುಟ್ಟನ ಫ್ರೆಂಡಾಗುತ್ತಾನೆ. ಮೋಹಿನಿ ಎಂಬ ಪುಟ್ಟ ಹುಡುಗಿಯೂ ಇವನ ಸ್ನೇಹಿತೆಯಾಗುತ್ತಾಳೆ. ಯಾರೋ ಟಿವಿ ಪತ್ರಕರ್ತ ಮೋಹಿನಿಯ ಫೋಟೋ ತೆಗೆದು 'ನ್ಯೂಸ್'ನಲ್ಲಿ ಅದು ಪ್ರಸಾರವಾಗುತ್ತೆ ಎಂದಿರುತ್ತಾನೆ. ಅದಕ್ಕೆ ಅವಳು ದಿನಾ ಈ ಪುಟ್ಟನನ್ನು "ನನ್ ಫೋಟೋ ಬಂತಾ" ಅಂತ ಕೇಳುತ್ತಿರುತ್ತಾಳೆ. ಆದರೆ ಅವನು "ಇಲ್ಲಾ ಯಾರೋ ಮಂತ್ರಿ ಭ್ರಷ್ಟಾಚಾರದಲ್ಲಿ ಸಿಕ್ಕಿಹಾಕಿಕೊಂಡು ಬಿಟ್ರಂತೆ" ಅಂತಲೋ, ಅಥವಾ ಇನ್ಯಾವುದೋ ಸುದ್ದಿಯ ಬಗ್ಗೆ ಹೇಳುತ್ತಿರುತ್ತಾನೆ. ಭ್ರಷ್ಟಾಚಾರ ತರಹದ ಪದಗಳ ಅರ್ಥವೇನು ಎಂದು ಆಕೆ ಕೇಳಿದಾಗ, ತರಕಾರಿಯವನ ಹತ್ತಿರ ಹೋಗಿ ಅದರ ಅರ್ಥ ಕೇಳುತ್ತಿರುತ್ತಾನೆ. ಈ ಇಬ್ಬರು ಮುಗ್ಧ ಮಕ್ಕಳಿಗೆ ಭಯೋತ್ಪಾದನೆ, ಕೋಮುಗಲಭೆ... ಇತ್ಯಾದಿ ಶಬ್ದಗಳ ಅರ್ಥವೇ ಗೊತ್ತಿರುವುದಿಲ್ಲ. ಕೊನೆಗೊಂದು ದಿನ ಆ ಹುಡುಗ ನ್ಯೂಸ್‌ನಲ್ಲಿ ಮೋಹಿನಿಯ ಫೋಟೋ ನೋಡುತ್ತಾನೆ! ಖುಷಿಗೊಂಡು ಅವಳಿಗೆ ಹೇಳಲು ಹೋಗುತ್ತಾನೆ. ಆದರೆ ಅವಳು ದಿನಾ ಇರುತ್ತಿದ್ದ ಜಾಗದಲ್ಲಿ ಇರುವುದಿಲ್ಲ. ಆಗ ಆತ ತನಗೇ ಹೇಳಿಕೊಳ್ಳುತ್ತಿರುವಂತೆ ಮಾತನಾಡುತ್ತಾನೆ: "ಮೋಹಿನಿ, ಇವತ್ತು ನಿನ್ನ ಫೋಟೋ ಟಿವಿಯಲ್ಲಿ ಬಂತು. ಅವರು ಮೈನರ್ ರೇಪ್ ಅಂಡ್ ಮರ್ಡರ್ ಅಂತಾ ಹೇಳ್ತಿದ್ದರು..." ಆದರೆ ತಾನು ಏನನ್ನು ಹೇಳುತ್ತಿದ್ದೇನೆ ಎಂಬುದರ ಅರ್ಥವೇ ಅವನಿಗೆ ಗೊತ್ತಿಲ್ಲ. ಆಗ ಅದರರ್ಥ ಕೇಳಲು ತರಕಾರಿಯವನತ್ತ ಓಡಿಹೋಗುತ್ತಾನೆ.... ಹೀಗೆ ಅಂತ್ಯಗೊಳ್ಳುವ ಈ ಸಿನಿಮಾ ಮುಗ್ಧ ಮಕ್ಕಳು ತಮ್ಮ 'ಹೊರ' ಪ್ರಪಂಚದಲ್ಲಿ ನಡೆವ ಸನ್ನಿವೇಶಗಳು 'ತಮ್ಮೊಳಗೇ' ಜರುಗತೊಡಗುವುದನ್ನು ಕಾಣುವುದನ್ನು ಸೂಕ್ಷ್ಮವಾಗಿ ತೋರಿಸುತ್ತದೆ.

****

ಇನ್ನೊಂದು ಸಿನಿಮಾ 'ದಿ ಲಾಸ್ಟ್ ಲೀಫ್.' ಇದು ಓ. ಹೆನ್ರಿಯ ಒಂದು ಸಣ್ಣ ಕತೆಯಾಧಾರಿತ ಸಿನಿಮಾ. ಹೆನ್ರಿಯವರ ಕತೆಯಲ್ಲಿ ಸಾವಿನ ಹೊಸ್ತಿಲಿನಲ್ಲಿರುವ ಹುಡುಗಿಯೊಬ್ಬಳಲ್ಲಿ ಅವಳ ಸ್ನೇಹಿತ ಭರವಸೆ ಮೂಡಿಸಿ ಆಕೆಯನ್ನು ಕಾಪಾಡುತ್ತಾನೆ. ಆದರೆ ಆ ಪ್ರಕ್ರಿಯೆಯಲ್ಲಿ ಅವನೇ ಸತ್ತು ಹೋಗುತ್ತಾನೆ. ಶರ್ರಿ ಎನ್ನುವ ನಿರ್ದೇಶಕ ಆ ಕತೆಯನ್ನು ಬದಲಾವಣೆ ಮಾಡಿ ಇಬ್ಬರು 'ನನ್'ಗಳ ನಡುವಿನ ಪ್ರೀತಿ, ಕಾಮವಾಗಿ ಮೂಡಿಸಿದ್ದಾನೆ. ಒರ್ವ ನನ್ ಅನಾರೋಗ್ಯದಿಂದ ಸಾಯುತ್ತಿರುವಾಗ, ಆಕೆಯ ಆರೈಕೆಗೆ ಬರುವ ಮತ್ತೊಬ್ಬಳು ನನ್‌ಳನ್ನು ಪ್ರೀತಿಸ್ತಾಳೆ. ಆರೋಗ್ಯವಾಗಿರುವ ನನ್ ಈ ಪ್ರೀತಿ, ಪ್ರೇಮಸಲ್ಲಾಪದ ಬಗ್ಗೆ ಪಶ್ಚಾತ್ತಾಪ ಪಟ್ಟು ಪಾಪ ನಿವೇದನೆ ಮಾಡಿಕೊಳ್ತಾಳೆ. ಆದರೆ ಸಾಯುತ್ತಿರುವ ನನ್ "ನಾನು ಮಾಡಿದ ತಪ್ಪಿನಲ್ಲೇ ನಾನು ಖುಷಿಪಡುತ್ತೇನೆ, ಈ ದೇಹ-ಮನಸ್ಸು ಸಾಯುತ್ತಿರುವ ಈ ಗಳಿಗೆಯಲ್ಲಿ ಖುಷಿ ಕೊಟ್ಟ ಈ ಸಂಬಂಧ ತಪ್ಪಲ್ಲ" ಎಂದು ಕೊನೆಯುಸಿರು ಬಿಡುತ್ತಾಳೆ.

ಕಾವ್ಯಮಯವಾಗಿರುವ, ಬೋಲ್ಡ್ ಆಗಿಯೂ ಇರುವ ಈ ಸಿನಿಮಾ ವರ್ತಮಾನದ ತಲ್ಲಣಗಳಿಗೆ ಸಾಕ್ಷಿಯಂತಿದೆ.....

****

ಈ ಮೂರು ಸಿನಿಮಾಗಳ ನಡುವೆ ಪ್ರಶಸ್ತಿಗಾಗಿ ಪೈಪೋಟಿ ನಡೆದಿತ್ತು. ಆದರೆ ಕೊನೆಗೆ 'ಸ್ಪೇಷನ್' ಮತ್ತು 'ಹೆಲ್' ಎಂಬ ಸಿನಿಮಾಗಳಿಗೆ ಪ್ರಶಸ್ತಿಯನ್ನು ಘೋಷಿಸಿದೆವು.

'ಹೆಲ್' ಸಿನಿಮಾ ಕೇವಲ 4 ನಿಮಿಷ 43 ಸೆಕೆಂಡುಗಳದ್ದು. ನೋಡಲು ರಕ್ತಸಿಕ್ತ ಮತ್ತು ಭಯಂಕರ. ಒಬ್ಬ ಆಜಾನುಬಾಹು ಕಟುಕ ಎಮ್ಮೆ, ಹಸುಗಳನ್ನು ಸಲೀಸಾಗಿ ಹಿಂದೆಮುಂದೆ ನೋಡದೇ ಕತ್ತರಿಸ್ತಾ, ಆ ಪ್ರಾಣಿಗಳ ದೇಹದ ಭಾಗಗಳನ್ನು ಮಾರುತ್ತಿರುತ್ತಾನೆ. ಅದೇ ಆತನ ಕೆಲಸ. ಹೀಗೆ ಒಂದು ಯಂತ್ರದ ತರಹ ಅವನು ಕೆಲಸ ಮಾಡುತ್ತಿರುವಾಗ, ಒಬ್ಬ ದುರ್ಬಲ ಅಂಗವಿಕಲ ಏನನ್ನೋ ನೋಡುತ್ತಾ ನಿಂತಿರುತ್ತಾನೆ. ಈ ಕಟುಕ ಅವನನ್ನು ಮೊದಮೊದಲು ಗಮನಿಸುವುದಿಲ್ಲ. ಕೊನೆಗೆ ಅವನು ಏನು ನೋಡುತ್ತಿದ್ದಾನೆ ಎಂಬ ಕುತೂಹಲದಿಂದ ಬಂದು ನೋಡುತ್ತಾನೆ. ಅಲ್ಲಿ ಆಗತಾನೇ ಹುಟ್ಟಿದ ಒಂದು ಕರು ಸತ್ತು ಬಿದ್ದಿರುತ್ತದೆ. ಅದಕ್ಕೆ ಈ ಅಂಗವಿಕಲ ಒಂದು ಹಿಡಿ ಹುಲ್ಲು ಇಟ್ಟು ವಿಕಾರವಾಗಿ ಕುಂಟುತ್ತಾ ಹೋಗುತ್ತಾನೆ.... ಇದನ್ನು ನೋಡಿದ ದೈತ್ಯ ಕಟುಕನ ಕೈಯಿಂದ ಮಚ್ಚು ಕೆಳಕ್ಕೆ ಬೀಳುತ್ತದೆ. ಇದಿಷ್ಟೇ ಸಿನಿಮಾ.

ಸಿನಿಮಾ ಒಂದು ದೃಶ್ಯಮಾಧ್ಯಮ. ಇಂತಹ ಮಾಧ್ಯಮದಲ್ಲಿ ಯಾವುದೇ ಒಂದು ಡೈಲಾಗ್ ಇಲ್ಲದೇ ನಾಲ್ಕೇ ನಿಮಿಷಗಳ ಅವಧಿಯಲ್ಲಿ ಪರಿಣಾಮಕಾರಿ ಸಂದೇಶ ನೀಡಬಹುದು ಎಂದು ಈ ಸಿನಿಮಾ ತೋರಿಸುತ್ತದೆ.

ಅಂದಹಾಗೆ, ಇದರ ನಿರ್ದೇಶಕ ನಂದಾಲಾಲ್ ಯಾವುದೇ ಫಿಲ್ಮ್ ಇನ್‌ಸ್ಟಿಟ್ಯೂಟನಲ್ಲಿ ತರಬೇತಿ ಪಡೆದವನಲ್ಲ. ತಮಾಷೆ ಅಂದ್ರೆ ಈ ಯುವ ನಿರ್ದೇಶಕ ಪ್ರಶಸ್ತಿ ಸ್ವೀಕರಿಸಲು ಬಂದಾಗ ತುಂಬಾ ಸಿಟ್ಟಾಗಿ ಬಂದಿದ್ದ. ಅವನ ಚಿಕ್ಕ ಭಾಷಣದಲ್ಲಿ "ಸಿನಿಮಾ ಮಾಡುವಾಗ ಎಷ್ಟು ಹಿಂಸೆಯಾಯಿತು ಅಂದ್ರೆ ಪ್ರತಿ ಶಾಟ್ ಆದ ಮೇಲೆ ನಾನೊಂದು 'ಶಾಟ್' (ಪೆಗ್) ಸೇವಿಸುತ್ತಿದ್ದೆ....." ಎಂದು ನಮ್ರವಾಗಿ ಎಲ್ಲರೆದುರೇ ಒಪ್ಪಿಕೊಂಡ. ■

ಗುರ್‌ಗಾಂವ್‌ನಲ್ಲಿ ಶೋಭಾ ಶಾಪಿಂಗ್ ಶೋಕಿ

ದೆಹಲಿ ಮೀಟಿಂಗ್ ಮರೆತ ಯಡ್ಡಿ

ಶ್ರೀಮಾನ್ ಯಡಿಯೂರಪ್ಪ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಯೋ ಅಥವಾ ಸಚಿವೆ ಶೋಭಾ ಕರಂದ್ಲಾಜೆಯ ಅಸಿಸ್ಟೆಂಟೋ ಎಂದು ಅನುಮಾನ ತರಿಸುವ ಘಟನೆ ಇದು.

ಕಳೆದ ಜೂನ್ ತಿಂಗಳ ಮಧ್ಯಭಾಗದಲ್ಲಿ ಯಡಿಯೂರಪ್ಪ ದೆಹಲಿಗೆ ಹೋಗಿ ಕೇಂದ್ರ ಕೃಷಿ ಸಚಿವ ಶರದ್ ಪವಾರ್ ಜೊತೆ ಕರ್ನಾಟಕದ ಕೃಷಿಗೆ ಸಂಬಂಧಿಸಿದಂತೆ ಮಾತುಕತೆ ನಡೆಸುವುದಿತ್ತು. ಮುಂಗಾರು ವೈಫಲ್ಯ, ಬಿತ್ತನೆ ಬೀಜ, ರಸಗೊಬ್ಬರ ಪೂರೈಕೆಗೆ ಸಂಬಂಧಿಸಿದಂತೆ ನಡೆಯಬೇಕಿದ್ದ ಮಹತ್ವದ ಸಭೆ ಅದಾಗಿತ್ತು. ಆದರೆ ಯಡ್ಡಿ ಈ ಮೀಟಿಂಗ್‌ಗೆ ಲೇಟಾಗಿ ಹೋಗಿ, ಏನನ್ನೂ ವಿವರವಾಗಿ ಚರ್ಚಿಸಲಾಗದೇ ಕೇವಲ ಒಂದು ಮನವಿ ಪತ್ರ ಮಾತ್ರ ಕೊಟ್ಟು ಬಂದಿದ್ದಾರೆ.

ಮೊದಲೇ ನಿಗದಿಯಾಗಿದ್ದ ಈ ಮೀಟಿಂಗ್‌ಗೆ ಯಡ್ಡಿ ದೆಹಲಿಯವರೆಗೂ ಹೋಗಿದ್ದರಾದರೂ ಲೇಟಾಗಿ ಯಾಕೆ ಹೋದರು ಗೊತ್ತೆ?

ಶೋಭಾ ಕರಂದ್ಲಾಜೆಯ ಶಾಪಿಂಗ್ ಶೋಕಿಯಿಂದ!

ಬಸವನ ಹಿಂದೆ ಬಾಲ ಎನ್ನುವಂತೆ ಜೂನ್ 2 ರಂದು ಯಡ್ಡಿಯ ಜೊತೆ ದೆಹಲಿಗೆ ಹೋಗಿದ್ದರು ಶೋಭಾ ಮೇಡಂ. ಅವತ್ತು ಗೃಹ ಸಚಿವ ವಿ.ಎಸ್. ಆಚಾರ್ಯ ಕೂಡ ಜೊತೆಯಲ್ಲಿದ್ದರು. ಏನಾಯಿತೆಂದರೆ ಜೂನ್ 2 ರಂದು ಸಂಜೆ ಶರದ್ ಪವಾರ್ ಜೊತೆ ಯಡ್ಡಿ ಮೀಟಿಂಗ್ ಫಿಕ್ಸ್ ಆಗಿತ್ತು. ಆದರೆ ಅವತ್ತು ಮಧ್ಯಾಹ್ನ ಯಡ್ಡಿ, ಶೋಭಾ ಹಾಗೂ ಆಚಾರ್ಯ ಟೀಂ ದೆಹಲಿಯಿಂದಾಚೆಗಿನ ಗುರ್‌ಗಾಂವ್‌ಗೆ ಹೋಗಿದ್ದಾರೆ.

ದೆಹಲಿ ಹೊರವಲಯದ ನ್ಯಾಷನಲ್ ಹೈವೆ 8ಕ್ಕೆ ತಾಕಿಕೊಂಡಿರುವ ಈ ಗುರ್‌ಗಾಂವ್‌ನಲ್ಲಿ ಇವತ್ತು ಇಡೀ ಇಂಡಿಯಾ ದೇಶದಲ್ಲೇ ಎಲ್ಲೂ ಕಾಣಸಿಗದಷ್ಟು ಶಾಪಿಂಗ್ ಮಾಲ್‌ಗಳಿವೆ. ಡಿಎಲ್‌ಎಫ್ ಮೆಗಾ ಮಾಲ್, ಆಂಬಿಯನ್ಸ್ ಮಾಲ್, ರಿಲಯನ್ಸ್ ಟ್ರೆಂ ಔಟ್, ಮೆಟ್ರೋಪಾಲಿಟನ್, ಗುರ್‌ಗಾಂವ್ ಸೆಂಟ್ರಲ್ ಮಾಲ್ ಮುಂತಾದ ಶಾಪಿಂಗ್ ಮಾಲ್‌ಗಳಲ್ಲಿ ಅತ್ಯಾಧುನಿಕ ವೈಭವೋಪೇತ, ದುಬಾರಿ ಬಟ್ಟೆ, ಆಭರಣ, ಫರ್‌ಫ್ಯೂಮ್, ಚಪ್ಪಲಿ, ಎಲೆಕ್ಟ್ರಾನಿಕ್ ವಸ್ತುಗಳು ಸಿಗುತ್ತವೆ. ಭಾರತದ ಅತೀ ಶ್ರೀಮಂತರು, ಕಾಸನ್ನು ಕಸದಂತೆ ಚೆಲ್ಲಾಡುವ ಜನರು ಮಾತ್ರ ಕಾಲಿಡುವಂತಹ ಮಾಲ್‌ಗಳಿವು. ನಿಮಗೆ ಬೆಂಗಳೂರಿನ ಯೂಬಿ ಸಿಟಿ ಶಾಪಿಂಗ್ ಮಾಲ್ ಬಗ್ಗೆ ಗೊತ್ತಿದೆಯಾ?

ಇಲ್ಲಿ 10 ಲಕ್ಷ ರೂಪಾಯಿಗಳ ಲೇಡೀಸ್ ಬ್ಯಾಗ್, 20 ಲಕ್ಷ ರೂಪಾಯಿ ವಾಚ್, 1 ಲಕ್ಷ ರೂ. ಸೆಂಟ್, 20 ಸಾವಿರ ರೂಪಾಯಿನ ಶರ್ಟ್‌ಗಳು ಸಿಗುತ್ತವೆ.

ಶೋಭಾ ಮೇಡಂ ಶಾಪಿಂಗ್‌ಗೆಂದು ಹೋಗಿದ್ದ ಗುರ್‌ಗಾಂವ್‌ನಲ್ಲಿ ಇಂತಹ ಐನೂರಕ್ಕೂ ಹೆಚ್ಚು ಶಾಪಿಂಗ್ ಮಳಿಗೆಗಳಿವೆ. ಅಲ್ಲಿನ ಒಂದೊಂದು ಶಾಪಿಂಗ್ ಮಾಲ್‌ಗಳೂ ಕನಿಷ್ಠ ಮೂರೆಕರೆ ವಿಸ್ತೀರ್ಣದವು. ಒಂದೊಂದು ಮಾಲ್‌ನಲ್ಲೂ ನೂರಿನ್ನೂರು ವೈಭವದ ಅಂಗಡಿಗಳಿವೆ.

ಇಂತಲ್ಲಿಗೆ ಶಾಪಿಂಗ್‌ಗೆಂದು ಶೋಭಾ ಹೋದಾಗ ಈ ಮುಖ್ಯಮಂತ್ರಿ ಯಡ್ಡಿ ಹಾಗೂ ಗೃಹ ಸಚಿವ ಆಚಾರ್ಯನೂ ಜೊತೆಗೆ ಹೋಗಿದ್ದಾರೆ. ಕೆಲ ಹೊತ್ತು ಶೋಭಾ ಹಿಂದೆ ಅಸಿಸ್ಟೆಂಟ್‌ಗಳ ರೀತಿ ಅಂಗಡಿಯಿಂದ ಅಂಗಡಿಗೆ ಅಲೆದಾಡಿದ ಈ ಮುದುಕ ನಾಯಕರಿಬ್ಬರಿಗೂ ಸುಸ್ತಾಗಿದೆ. ಕೊನೆಗೆ ಯಡ್ಡಿ ಹಾಗೂ ಆಚಾರ್ಯ ಡಿಎಲ್‌ಎಫ್ ಸಿಟಿ ಸೆಂಟರ್ ಮಾಲ್‌ಗೆ ಬಂದು ಕುಳಿತಿದ್ದಾರೆ. ಎಷ್ಟು ಕಾದರೂ ಶೋಭಾ ಹಿಂತಿರುಗಿ ಬರದಿದ್ದಾಗ ಇವರಿಬ್ಬರೂ ನಾಯಕರು ಅಲ್ಲೇ ಕುಳಿತು ಐಸ್‌ಕ್ರೀಂ ತರಿಸಿ ತಿಂದಿದ್ದಾರೆ. ಆದರೆ ಸಮಯ ಆಗಲೇ ಸಂಜೆಯಾಗುತ್ತಾ ಬಂದಿದ್ದರಿಂದ ಯಡ್ಡಿಯ ಅಧಿಕಾರಿಯೊಬ್ಬ ಹೆದರಿಕೊಂಡೇ ಹತ್ತಿರ ಬಂದು ಶರದ್ ಪವಾರ್ ಜೊತೆಗಿನ ಮೀಟಿಂಗ್ ಬಗ್ಗೆ ನೆನಪಿಸಿದ್ದಾನೆ.


"ಈಗಿಂದೀಗಲೇ ಇಲ್ಲಿಂದ ಹೊರಟರೂ ಈ ಸಂಜೆಯ ಟ್ರಾಫಿಕ್‌ನಲ್ಲಿ ದೆಹಲಿ ತಲುಪಿ ನಿಗದಿತ ಸಮಯಕ್ಕೆ ಮೀಟಿಂಗ್‌ಗೆ ಹೋಗಲು ಕಷ್ಟ" ಎಂದೂ ಹೇಳಿದ್ದಾರೆ.

ಆದರೆ ಐಸ್‌ಕ್ರೀಂ ತಿನ್ನುತ್ತಾ ಕೂತಿದ್ದ ಯಡ್ಡಿಗೆ ಮೀಟಿಂಗ್ ಬಗ್ಗೆ ಎಚ್ಚರವೇ ಇರಲಿಲ್ಲ. ಕೊನೆಗೆ ತೀರಾ ಲೇಟಾಗಿ ಹೋಯಿತು ಎನಿಸಿದಾಗ ಕೂತಲ್ಲಿಂದಲೇ ಶೋಭಾಗೆ ಫೋನ್ ಮಾಡಿ ಕರೆಸಿಕೊಂಡಿದ್ದಾರೆ.

ಶೋಭಾಗೆ ತನ್ನ ಶಾಪಿಂಗ್ ಅಂತ್ಯ ಹಾಡುವ ಮನಸ್ಸೇ ಇರಲಿಲ್ಲ. ಆದರೂ ಆಕೆ ಖರೀದಿಸಿದ್ದ ಮಾಲುಗಳನ್ನು ಹೊತ್ತುಕೊಂಡು ಕಷ್ಟಪಟ್ಟು ಕೊನೆಗೂ ಶಾಪಿಂಗ್ ಮಾಲ್‌ನಿಂದ ಹೊರಬಿದ್ದಳಂತೆ.

ಆದರೇನೂ ಯಡ್ಡಿ ದೆಹಲಿ ತಲುಪಿ ಶರದ್





ರಾಜ್ಯಕ್ಕೆ ಬರಗಾಲ.. ಶೋಭಾಗೆ ಶಾಪಿಂಗ್ ಕಾಲ..

ಸಚಿವೆ ಶೋಭಾ ಕರಂದ್ಲಾಜೆ RSS ಹಿನ್ನೆಲೆಯವರು. ದೇಶ ಸೇವೆ, ಸನಾತನ ಧರ್ಮ, ಸಂಸ್ಕೃತಿ ಎಂದೆಲ್ಲಾ ಅರೆದು ಕುಡಿದಿರುವವರು. ಆದರೆ ಇದೆಲ್ಲಾ ಬೇರೆಯವರಿಗೆ ಪುಗಸಟ್ಟೆ ಬೋಧನೆ ಮಾಡಲು ಮಾತ್ರ. ತನ್ನ ವೈಯಕ್ತಿಕ ಖುಷಿಯ ವಿಚಾರಕ್ಕೆ ಬಂದರೆ ಈ ಸಚಿವೆ ದೇಶ; ಜನ ಕೊನೆಗೆ ಈಗ ರಾಜ್ಯದಲ್ಲಿ ಬರಗಾಲ ಇದೆ ಎಂಬುದನ್ನು ಮರೆತುಬಿಡುತ್ತಾರೆ.

ಲಕ್ಷಾಂತರ ರೂಪಾಯಿಗಳ ಶಾಪಿಂಗ್ ಮಾಡಿದ ಶೋಭಾಗೆ ಇದೇ ಒಂದು ಚಟ. ಅವತ್ತು ಗುರ್‌ಗಾಂವ್‌ನಲ್ಲಿ ಹಾಗೂ ದುಬೈನ ಶ್ರೀಮಂತ ರೆಸಾರ್ಟುಗಳಲ್ಲಿ ಶೋಭಾ ಚೀನಾದ ಶಾಂಘಾಯ್‌ನಲ್ಲಿ, ಸ್ಪೇನ್ ದೇಶದ ಮ್ಯಾಡ್ರಿಡ್‌ನಲ್ಲಿ ಹಾಗೂ ದುಬೈನ ಶ್ರೀಮಂತ ರೆಸಾರ್ಟುಗಳಲ್ಲಿ ಶೋಭಾ ಮೇಡಂರ ಶಾಪಿಂಗ್ ಬಗ್ಗೆ ದಂತಕತೆಗಳೇ ಇವೆ.

ಆದರೆ ಒಂದು ರಾಜ್ಯದ ಮುಖ್ಯಮಂತ್ರಿಯೊಬ್ಬ ತನಗಾಗಿ ಗುರ್‌ಗಾಂವ್ ಶಾಪಿಂಗ್ ಕಾಂಪ್ಲೆಕ್ಸ್ ಬಾಗಿಲಲ್ಲಿ ಗೇಟ್‌ಕೀಪರ್ ತರ ಕಾಯುತ್ತಾ ನಿಂತಿರುವಂತೆ ಈಕೆ ಮಾಡಿರುವುದು ಮಾತ್ರ ಗಿನ್ನಿಸ್ ದಾಖಲೆಯೇ ಬಿಡಿ.

ಅಲ್ಲಾ ಈ ಶೋಭಾಗಂತೂ ಮತಿಯಿಲ್ಲ, ಆದರೆ ಯಡ್ಡಿಗಾದರೂ ವಿವೇಕ ಬೇಡವೆ?

ಯಡ್ಡಿ ಸಿಎಂಗಿರಿ ಕಾಮಿಡಿಗಳು

ಈ ಯಡಿಯೂರಪ್ಪಾಗ ಅಧಿಕಾರ ಕೈಗೆ ಸಿಕ್ಕ ಮೇಲೆ ಸಿಎಂಗಿರಿ ಅನ್ನುವುದೇ ಒಂದು ಕಾಮಿಡಿ ಪಾತ್ರದಂತಾಗಿ ಹೋಗಿದೆ.


ಸದಾ ಟೆನ್ಷನ್ ಹಾಗೂ ಆತುರದಲ್ಲಿರುವುದು ಯಡ್ಡಿ ಜಾಯಮಾನ. ಕಳೆದ ವಾರ ದೆಹಲಿ ಏರ್‌ಪೋರ್ಟಿನಲ್ಲಿ ಒಂದು ಅಪಹಾಸ್ಯಕರ ಪ್ರಸಂಗ ನಡೆದಿದೆ.

ಯಡ್ಡಿ ಬೆಂಗಳೂರಿಗೆ ವಾಪಸ್ ಬರಲು ಏರ್‌ಪೋರ್ಟಿನೊಳಗೆ ಹೋಗುತ್ತಿದ್ದಾಗ ಅವರೆದುರು ಮಹಾರಾಷ್ಟ್ರ ಮುಖ್ಯಮಂತ್ರಿ ಅಶೋಕ್ ಚೌಹಾಣ್ ಬರುತ್ತಿದ್ದರಂತೆ. ಅವರು ಯಡ್ಡಿಗೆ ವಿಷ್ ಮಾಡಿ ಮಾತನಾಡಿಸಲು ನಿಂತರೆ ಈ ಯಡ್ಡಿ ಮಾತೇ ಆಡದೆ ಆತ ಯಾವುದೋ ಪುಢಾರಿ ಎಂಬಂತೆ ಬರಿದೇ ಕೈ ಬೀಸಿ ಬಂದು ಬಿಟ್ಟಿದ್ದಾರೆ. ಆಮೇಲೆ ಯಡ್ಡಿ ಜೊತೆಗಿದ್ದವರು 'ಸಾರ್, ಅವರು ಮಹಾರಾಷ್ಟ್ರ ಸಿಎಂ' ಅಂದ ಮೇಲೆ ಯಡ್ಡಿಗೆ ಜ್ಞಾನೋದಯವಾಗಿ ಬೆಂಗಳೂರಿಗೆ ಬಂದ ಮೇಲೆ ಕ್ಷಮೆ ಕೋರಿ ಒಂದು ಪತ್ರ ಬರೆದಿದ್ದಾರೆ. ಆದರೆ ಅವತ್ತು ಮಹಾರಾಷ್ಟ್ರ ಸಿಎಂಗೆ ಯಡ್ಡಿ ವರ್ತನೆ ನೋಡಿ ಆಶ್ಚರ್ಯವಾಗಿತ್ತಂತೆ.

ಒಮ್ಮೆ ಸಾರಾಯಿ ವಿರೋಧಿ ಹೋರಾಟಗಾರ ಎ.ಟಿ. ಬಾಬು ಹತ್ತೆ ಕುರಿತು ಮೇಧಾ ಪಾಟ್ಕರ್ ಭೇಟಿಗೆ ಬಂದಿದ್ದಾಗಲೂ ಮಾತಾಡಲು ಕೂತ ಯಡ್ಡಿ ಕೆಲ ಹೊತ್ತಿನ ನಂತರ ತನ್ನ ಸಹಾಯಕರ ಕಿವಿಯಲ್ಲಿ "ಈಕೆ ಯಾರು?" ಅಂತ ಕೇಳಿದ್ದರು.

ಕಳೆದ ಮಾರ್ಚ್‌ನಲ್ಲಿ ಕೇಂದ್ರ ಗೃಹ ಸಚಿವ ಪಿ. ಚಿದಂಬರಂ ಆಂತರಿಕ ಭದ್ರತೆ ಬಗ್ಗೆ ಯಡ್ಡಿ ಜೊತೆ ಬೆಂಗಳೂರಿನಲ್ಲಿ ಚರ್ಚಿಸಲು ಮೂರು ಬಾರಿ ಸಮಯ ನಿಗಧಿ ಮಾಡಿದ್ದರೂ ಯಡ್ಡಿ ಅಟೆಂಡ್ ಮಾಡಿರಲಿಲ್ಲ.

ಅವತ್ತು ಇನ್ಯಾವ ಶಾಪಿಂಗ್ ಮಾಲಿನಲ್ಲಿದ್ದನೋ ಈ ಪುಣ್ಯಾತ್ಮ?



ಗಣಿಧಣಿಗಳ ಶೋಕಿಗೆ ಖಜಾನೆ ಖಾಲಿ!

ಬಳ್ಳಾರಿಯ ಗಣಿ ಧಣಿಗಳು ಕರ್ನಾಟಕದ ಭೂಗರ್ಭವನ್ನು ಬಗೆದು ಸಮೃದ್ಧ ಗಣಿ ಸಂಪತ್ತನ್ನು ಲೂಟಿ ಮಾಡಿದ್ದಾಯಿತು. ರಾಜ್ಯದ ಗಡಿ ರೇಖೆಯನ್ನೇ ತಿದ್ದಿ ಕರ್ನಾಟಕದ ಸುಮಾರು 40 ಎಕರೆಯನ್ನು ಆಂಧ್ರದ ಒಡಲಿಗೆ ಸೇರಿಸಿದ್ದಾಯಿತು. ಏರ್‌ಪೋರ್ಟ್ ನಿರ್ಮಾಣಕ್ಕೆ ಬಳ್ಳಾರಿ ಬಡ ರೈತರ ಜೀವನಾಧಾರವಾಗಿದ್ದ ಫಲವತ್ತಾದ ತುಂಡು ಭೂಮಿಗಳನ್ನು ಕಿತ್ತುಕೊಂಡು ಅವರ ಹೊಟ್ಟೆ ಮೇಲೆ ತಣ್ಣೀರು ಬಟ್ಟೆ ಹಾಕುವ ಪುಣ್ಯ ಕಾರ್ಯಕ್ಕೆ ಕೈ ಹಾಕಿದ್ದಾಯಿತು. ಅದೆಲ್ಲ ಸಾಲದೆಂಬಂತೆ ಈಗ ರಾಜ್ಯದ ಜನತೆ ತಮ್ಮ ಬೆವರು ಹರಿಸಿ ತೆರಿಗೆ ಕಟ್ಟಿ ತುಂಬಿಸಿದ್ದ ಖಜಾನೆಗೆ ಕೈ ಹಾಕಿ ಖಾಲಿ ಮಾಡುವುದಕ್ಕೆ ಮುಂದಾಗಿದ್ದಾರೆ.

ಮುಖ್ಯಮಂತ್ರಿ ಯಡಿಯೂರಪ್ಪ ಕಳ್ಳರಿಗೆ ಖಜಾನೆಯ ಬೀಗದ ಕೈ ಕೊಟ್ಟು ತಮ್ಮ ಬೋಳು ತಲೆಯ ಮೇಲೆ ಕೈಯಿಟ್ಟು ಕುಳಿತಿದ್ದಾರೆ. ಅದಕ್ಕೆ ಈಗ್ಗೆ ಎರಡು ದಿನಗಳ ಹಿಂದೆ ಯಡ್ಡಿ ನೇತೃತ್ವದಲ್ಲಿ ರಾಜ್ಯ ಕ್ಯಾಬಿನೆಟ್ ತೆಗೆದುಕೊಂಡ ತೀರ್ಮಾನಗಳೇ ಸಾಕ್ಷಿಯಾಗಿ ನಿಂತಿವೆ.

ಮೊನ್ನೆ ಜುಲೈ ತಿಂಗಳ ಮೊದಲ ದಿನವೇ ರಾಜ್ಯ ಮಂತ್ರಿ ಮಂಡಲ ಸಭೆ ಸೇರಿ ಬಳ್ಳಾರಿ ಜಿಲ್ಲೆಗೆ ಹಲವಾರು ಯೋಜನೆಗಳನ್ನು ಘೋಷಿಸಿ ನೂರಾರು ಕೋಟಿ ರೂಪಾಯಿ ಬಿಡುಗಡೆ ಮಾಡಿದೆ. ಅದನ್ನು ಕೇಳಿದಾಕ್ಷಣ ಬಹಳಷ್ಟು ಜನ ಸಂತಸಗೊಂಡಿರಬಹುದು. ಬಳ್ಳಾರಿ ಮೊದಲೇ ರಾಜ್ಯದ ಅತ್ಯಂತ ಹಿಂದುಳಿದ ಜಿಲ್ಲೆಗಳಲ್ಲೊಂದು. ಇಲ್ಲಿಯತನಕ ಬಂದಿರುವ ಎಲ್ಲಾ ಸರ್ಕಾರಗಳು ಅದಕ್ಕೆ ಕೊಡಬೇಕಾದಷ್ಟು ಹಣ ಕೊಡದೆ ಇಡೀ ಜಿಲ್ಲೆ ಸೊರಗುವಂತೆ ಮಾಡಿವೆ, ಈಗ ಯಡಿಯೂರಪ್ಪನವರಾದರೂ ನೂರಾರು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿ ಅದನ್ನು ಉದ್ಧಾರ ಮಾಡಲು ಹೊರಟಿದ್ದಾರಲ್ಲ ಅಂತ ಸಮಾಧಾನಪಟ್ಟುಕೊಳ್ಳಬಹುದು. ಆದರೆ, ವಾಸ್ತವ ಅದಲ್ಲ, ರಾಜ್ಯದ ಖಜಾನೆಯಿಂದ ಬಳ್ಳಾರಿಗೆ ದುಡ್ಡು ಹರಿಯುತ್ತಿರುವುದು ಬಳ್ಳಾರಿಯಲ್ಲಿ ಹಸಿವಿನಿಂದ ಬಳಲುತ್ತಿರುವ ಸಾಮಾನ್ಯ ಜನತೆಗೆ ಅನ್ನ ನೀಡುವುದಕ್ಕಲ್ಲ, ಕುಡಿಯಲು ನೀರೂ ಇಲ್ಲದೆ ಪರದಾಡುತ್ತಿರುವ ಜನರಿಗೆ ನೀರುಣಿಸುವುದಕ್ಕಲ್ಲ, ತಲೆಯ ಮೇಲೆ ಸೂರಿಲ್ಲದೇ ಬಿಸಿಲಿಗೆ ಬೇಯುತ್ತಿರುವ, ಚಳಿಯಲ್ಲಿ ನಡುಗುತ್ತಿರುವ, ಮಳೆಯಲ್ಲಿ ತೋಯುತ್ತಿರುವ ಜನರಿಗೆ ತಲೆ ಮೇಲೊಂದು ಸೂರು ಕೊಡುವುದಕ್ಕಲ್ಲ, ಬದಲಿಗೆ ಬಳ್ಳಾರಿ ಗಣಿ ದೊರೆಗಳ ಐಶಾರಾಮಿ ಜೀವನವನ್ನು ಮತ್ತಷ್ಟು ಐಷಾರಾಮಿಗೊಳಿಸುವುದಕ್ಕೆ. ಅವರ ಬೆಂಚ್ ಕಾರುಗಳು ಓಡಾಡುವ ರಸ್ತೆಗಳನ್ನು ನಾಜೂಕು ಮಾಡುವುದಕ್ಕೆ. ಅವರು ಹೆಲಿಕಾಪ್ಟರ್‌ಗಳಿಂದ, ವಿಮಾನಗಳಿಂದ ಇಳಿದು ಕಾರಿನಲ್ಲಿ ತಮ್ಮ ಅರಮನೆ ಸೇರುವುದಕ್ಕೆ ಬೇಕಿರುವ ರಸ್ತೆಗಳನ್ನು ಹಾಕುವುದಕ್ಕೆ. ಬಳ್ಳಾರಿಯಿಂದ ಪದೇ ಪದೇ ಹೈದರಾಬಾದಿಗೆ ಹೋಗಿ ತಮ್ಮ ಸ್ನೇಹಿತ ಆಂಧ್ರದ ಮುಖ್ಯಮಂತ್ರಿ ರಾಜಶೇಖರ ರೆಡ್ಡಿಯನ್ನು ಭೇಟಿ ಮಾಡುವುದಕ್ಕೆ ಅನುಕೂಲವಾಗಲಿ ಎಂಬುದಕ್ಕೆ, ಇರುವ ರಸ್ತೆಗಳನ್ನು ಮತ್ತಷ್ಟು ಉತ್ತಮಗೊಳಿಸುವುದಕ್ಕೆ. ಯಡಿಯೂರಪ್ಪ, ಜನಾರ್ದನರೆಡ್ಡಿ, ಸೋಮಶೇಖರ ರೆಡ್ಡಿ, ಶ್ರೀರಾಮುಲು "ಬಳ್ಳಾರಿ ಅಭಿವೃದ್ಧಿ

ಪವಾರ್ ಭೇಟಿಗೆ ಹೋದಾಗ ಲೇಟ್ ಆಗಿಯೇ ಹೋಗಿತ್ತು, ಹಾಗಾಗಿ ಯಾವ ವಿಚಾರವನ್ನು ವಿವರವಾಗಿ ಚರ್ಚಿಸದೆ ಕೇವಲ ಮನವಿ ಪತ್ರ ನೀಡಿ ಬಂದಿದ್ದಾರೆ ಯಡ್ಡಿ.

ಆ ಮನವಿಯಲ್ಲಿ ಕರ್ನಾಟಕಕ್ಕೆ 37 ಲಕ್ಷ ಟನ್ ರಸಗೊಬ್ಬರ ನೀಡುವಂತೆ ಕೇಳಿಕೊಂಡಿರುವುದನ್ನು ಬಿಟ್ಟರೆ ಬೇರೇನೂ ಇರಲಿಲ್ಲ.

ಕೊನೆಗೆ ಈ ಲೋಪ ಸರಿಪಡಿಸಲು ಇತ್ತೀಚೆಗೆ ರಾಜ್ಯ ಕೃಷಿ ಕಮಿಷನರ್ ಸುಬ್ರಮಣ್ಯರವರು ದೆಹಲಿಗೆ ಹೋಗಿ ಕೇಂದ್ರ ಕೃಷಿ ಕಾರ್ಯದರ್ಶಿ ನಂದಕುಮಾರ್‌ರನ್ನು ಭೇಟಿಯಾಗಿ ಬಾಕಿ ವಿಚಾರಗಳನ್ನೆಲ್ಲಾ ಚರ್ಚಿಸಿ ಬಂದಿದ್ದಾರೆ.

ಇಲ್ಲಿ ಕೇಳಬೇಕಾದ ಪ್ರಶ್ನೆ ಇಷ್ಟೆ; ಮೊನ್ನೆಯ ಲೋಕಸಭಾ ಚುನಾವಣಾ ಪ್ರಚಾರ ನಡೆಸುವಾಗ ಯಡ್ಡಿ ಯಾವ ಊರಿಗೆ ಹೋದರೂ "ನಿಮ್ಮ ಕ್ಷೇತ್ರದ ಅಭಿವೃದ್ಧಿ ನಡೆಸುವುದಾಗಿ ರಕ್ತದಲ್ಲಿ ಬರೆದು ಕೊಡುತ್ತೇನೆ" ಅಂತ ವೀರಾವೇಶದ ಮಾತಾಡುತ್ತಿದ್ದರು.

ಆದರೆ ಮುಂಗಾರು ವೈಫಲ್ಯ, ಬಿತ್ತನೆ ಬೀಜ, ರಸಗೊಬ್ಬರ ಕೊರತೆ ಬಗ್ಗೆ ಚರ್ಚಿಸಲು ಕೇಂದ್ರ ಕೃಷಿ ಸಚಿವ ಮಾತುಕತೆಗೆ ಕರೆದರೆ ಯಡ್ಡಿ ಹೋಗಲಿಲ್ಲ ಯಾಕೆ?

ರಾಜ್ಯದ ರೈತರ ಹಿತಾಸಕ್ತಿಗಿಂತ ಶೋಭಾ ಕರಂದ್ಲಾಜೆ ಜೊತೆ ಶಾಪಿಂಗೇ ಮುಖ್ಯವಾಯಿತಾ ಯಡ್ಡಿಗೆ?

ಅವತ್ತು ಗುರ್‌ಗಾಂವ್ ಶಾಪಿಂಗ್ ಮಾಲ್‌ನಲ್ಲಿ ಯಡ್ಡಿ-ಶೋಭಾ ಆಚಾರ್ಯರನ್ನು ದೆಹಲಿಯ ಕೆಲ ಪತ್ರಕರ್ತರು ನೋಡಿದ್ದಾರೆ. ಅಕಸ್ಮಾತ್ತಾಗಿ ಅವರಿಗೆ ಯಡ್ಡಿ ಶರದ್ ಪವಾರ್ ಮೀಟಿಂಗ್ ವಿಚಾರವೂ ಗೊತ್ತಿತ್ತು. ಹಾಗಾಗಿ ಅವರಿಗೆ ಆಶ್ಚರ್ಯವಾಗಿ "ಅಲ್ಲಿದ್ದ ಆಫೀಸರ್ ಒಬ್ಬನಿಗೆ" ನಿಮ್ಮ ಸಿಎಂಗೆ ಪವಾರ್ ಜೊತೆ ಮೀಟಿಂಗ್ ಇದೆಯಲ್ಲವಾ? ಆದರೆ ಅವರು ಇಲ್ಯಾಕಿದ್ದಾರೆ?' ಅಂತ ಕೇಳಿದ್ದಾರೆ. ಆಗ ಆ ಅಧಿಕಾರಿ ದೇಶಾವರಿ ನಗುತ್ತಾ "ಶೋಭಾ ಮೇಡಂ ಇಲ್ಲಿ ಶಾಪಿಂಗ್ ಮಾಡಕ್ಕೆ ಬಂದಿದ್ದಾರೆ, ಅದಕ್ಕೆ ಎಲ್ಲಾ ಜೊತೇಲಿ ಬಂದಿದ್ದಾರೆ" ಅಂದಿದ್ದಾನೆ.

ಇದು ಯಡ್ಡಿಯ ಆಡಳಿತ ಶೈಲಿ!

ಅಧಿಕಾರಕ್ಕೆ ಬಂದ ಹೊಸದರಲ್ಲೇ ಹಾವೇರಿ ರೈತರಿಗೆ ರಸಗೊಬ್ಬರ ನೀಡದೆ ಗುಂಡು ಹೊಡೆಸಿದ ಯಡ್ಡಿ ಈ ಬಾರಿ ರಾಜ್ಯದ ರೈತಾಪಿ ಕಷ್ಟದಲ್ಲಿರುವಾಗ ಅದರ ಬಗ್ಗೆ ಯೋಚಿಸದೆ ಸಚಿವೆ ಶೋಭಾ ಕರಂದ್ಲಾಜೆ ಜೊತೆ ಶಾಪಿಂಗ್ ಶೋಕಿ ಮಾಡುತ್ತಾ ಸುತ್ತುತ್ತಿದ್ದಾರೆ.


ತನ್ನ ಜವಾಬ್ದಾರಿ ಏನೆಂದು ಅರ್ಥ ಮಾಡಿಕೊಳ್ಳುವುದನ್ನು ಬಿಟ್ಟು ಅಧಿಕಾರಿಗಳನ್ನು ಬೆದರಿಸಿದರೆ, ರೆಸಾರ್ಟ್‌ಗೆ ಹೋಗಿ ಶೋಕಿ ಮೀಟಿಂಗ್ ಮಾಡಿದರೆ ರಾಜ್ಯದ ಜನರ ಕಷ್ಟಗಳು ಪರಿಹಾರವಾಗಿ ಬಿಡುತ್ತವೆಯೆ?

ಮುಖ್ಯಮಂತ್ರಿಯೊಬ್ಬ ನಡೆದುಕೊಳ್ಳುವ ರೀತಿಯಾ ಇದು?

■ ಬಿಳಿದಾಳೆ ಪಾರ್ವತೀಶ

ಮನುವಾದಿ ಮನೋರೋಗಿ ನಾರಾಯಣಾಚಾರ್ಯ

ಬ್ರಾಹ್ಮಣನೆಂಬ ಜಾತಿ ದುರಹಂಕಾರ ತುಂಬಿದ ಹಾಗೂ ಬ್ರಾಹ್ಮಣೇತರ ಮೇಲೆ ದ್ವೇಷ ಕಾರುವ ಹೊಸ ಕ್ರಿಮಿಯೊಂದು ಕರ್ನಾಟಕದ ಸಾಂಸ್ಕೃತಿಕ ವಲಯದಲ್ಲಿ ಕಾಣಿಸಿಕೊಂಡಿದೆ. ಇವನ ಹೆಸರು ಕೆ.ಎಸ್. ನಾರಾಯಣಾಚಾರ್ಯ. ರಾಮಾಯಣಾಚಾರ್ಯನೆಂತಲೂ ಅಡ್ಡ ಹೆಸರಿದೆ ಇವನಿಗೆ.



ಈಗ ಕರ್ನಾಟಕದ ಜನರನ್ನು ಪೀಡಿಸುತ್ತಿರುವ ಡೆಂಗ್ಯೂ ಜ್ವರ, ಚಿಕನ್ ಗುನ್ಯಾ, ಹಂದಿ ಜ್ವರದಂತೆಯೇ ಈ ನಾರಾಯಣಾಚಾರ್ಯನ ಮನುವಾದ ವೆಂಬ ಮನೋರೋಗ ಜನರನ್ನು ಬಾಧಿಸಲು ಶುರು ಮಾಡಿದೆ.

ಕುವೆಂಪು ರಾಮಾಯಣವನ್ನೇ ಓದದೆ ಶೂದ್ರತಪಸ್ವಿ ಬರೆದುಬಿಟ್ಟರು. ದೇ. ಜವರೇಗೌಡರಿಗೆ ಇಂಗ್ಲಿಷ್ ಬರುತ್ತಿರಲಿಲ್ಲ, ಕನ್ನಡವೂ ಗೊತ್ತಿಲ್ಲ, ಅಂಬೇಡ್ಕರ್ ಸಂವಿಧಾನ ಬರೆಯಲಿಲ್ಲ.....

–ಇವು ಮುಠ್ಠಾಳ ಮನುವಾದಿ ನಾರಾಯಣಾಚಾರ್ಯನ ತಲಹರಟೆ ಮಾತುಗಳು. ಈ ಅವಿವೇಕಿಯ ಚಿಲ್ಲರೆ ಮಾತುಗಳಿಂದಾಗಿ ಈಗ ತಣ್ಣಗಾಗಿರುವ ಬ್ರಾಹ್ಮಣ-ಶೂದ್ರ ಜಗಳ ಮತ್ತೆ ಭುಗಿಲೇಳುವಂತೆ ಕಾಣುತ್ತಿದೆ. ಇದರಿಂದ ಬ್ರಾಹ್ಮಣರೇ ಮುಜುಗರ ಪಟ್ಟುಕೊಳ್ಳಬೇಕಾಗುತ್ತದೆಯೇ ವಿನಃ ನಾರಾಯಣಾಚಾರಿ ಬೇರೇನನ್ನು ಸಾಧಿಸಲಾರ.


ಕನಕಪುರದ ಕ್ರಿಮಿ

ಈಗ 74ರ ವಯಸ್ಸಿನ ನಾರಾಯಣಾಚಾರಿ ಹುಟ್ಟಿದ್ದು ಕನಕಪುರದ ಬ್ರಾಹ್ಮಣ ವಠಾರದಲ್ಲಿ. ಆದರೆ ಕನಕಪುರದ ಯಾರಿಗೂ ಇವನ ಮೂತಿ ನೆನಪಿಲ್ಲ. ಆರೆಂಟು ವರ್ಷಗಳ ಹಿಂದೆ ತಾಲ್ಲೂಕು ಕನ್ನಡ ಸಾಹಿತ್ಯ ಸಮ್ಮೇಳನವೊಂದಕ್ಕೆ ಇವನನ್ನು ಅಧ್ಯಕ್ಷನನ್ನಾಗಿಸಿ ತಪ್ಪು ಮಾಡಿದ್ದು ಬಿಟ್ಟರೆ ಅಲ್ಲಿನ ಸಾಹಿತ್ಯಾಸಕ್ತರಿಗೂ ಇವನ ಬಗ್ಗೆ ಕಿಂಚಿತ್ತೂ ಗೌರವವಿಲ್ಲ. ಇಂಥ ನಾರಾಯಣಾಚಾರಿ ಮೈಸೂರಿಗೆ ಓದಲು ಹೋಗಿ ಸುಸಂಸ್ಕೃತ ವ್ಯಕ್ತಿಯಾಗಿದ್ದ ಸಿ.ಡಿ. ನರಸಿಂಹಾಚಾರ್ ಮಾರ್ಗದರ್ಶನದಲ್ಲಿ ಓದಲು ಕಲಿತ. ಆಗಲೇ ಇವನಿಗೆ ಕುವೆಂಪು, ದೇಜಗೌ ಎಲ್ಲಾ ಗೊತ್ತಿದ್ದರು. ಆದರೇನು

'ಬೆಲ್ಲದ ಕಟ್ಟೆಯ ಕಟ್ಟಿ
ಬೇವಿನ ಜೀಜವ ಬಿತ್ತಿ
ಜೇನು ಮಳೆಗರೆದರೆ
ವಿಷ ಹೋಗುವುದೇನಯ್ಯ'

–ಎನ್ನುವಂತೆ ಸಜ್ಜನರ ಸಿಹಿ ಸಹವಾಸದಲ್ಲಿದ್ದರೂ ನಾರಾಯಣಾಚಾರಿಯೊಳಗಿದ್ದ ಬೇವಿನ ವಿಷ ತೊಲಗಲಿಲ್ಲ, ಕೊನೆಗೆ ಇವನ ವ್ಯಕ್ತಿತ್ವದೊಳಗಿದ್ದ ಕೊಳಕುತನ ಗಮನಿಸಿ ಮೈಸೂರು ವಿಶ್ವವಿದ್ಯಾನಿಲಯವು ಡಾಕ್ಟರೇಟ್ ನೀಡಲು ನಿರಾಕರಿಸಿ ಆಚೆಗಟ್ಟಿತ್ತು. ಕೊನೆಗೆ ಧಾರವಾಡದ ಕರ್ನಾಟಕ ಕಾಲೇಜಿಗೆ ವಕ್ಕರಿಸಿಕೊಂಡ ಆಚಾರಿ ಅಲ್ಲೇ ಮೇಷ್ಟ್ರಾಗಿ ಕೊನೆಗೆ ಅದೇ ಕಾಲೇಜಿನ ಪ್ರಿನ್ಸಿಪಾಲನಾಗಿ ನಿವೃತ್ತನಾಗಿ ಈಗ ಮತ್ತೆ ಮೈಸೂರಿಗೆ ಬಂದು ಸ್ಥಾಪನೆಯಾಗಿದ್ದಾನೆ.

ಇವನಿಗೆ ಈಗ ಪ್ರವಚನದಿಂದಲೇ ಅನ್ನ ಸಂಪಾದನೆಯಾಗಬೇಕು. ರಾಮಾಯಣ, ಮಹಾಭಾರತಗಳನ್ನು ಬರೀ ಟೆಲಿವಿಜನ್‌ನಲ್ಲಿ ಮಾತ್ರ ನೋಡಿ ಗೊತ್ತಿರುವ ಕೆಲವು ಶೆಟ್ಟರ ಮನೆಗಳವರು, ಮೇಲುಜಾತಿಯ ಜನ ಇವನ ಪ್ರವಚನ ಕೇಳಲು ಹೋಗುತ್ತಿರುತ್ತಾರೆ. ಪಾವಗಡ ಪ್ರಕಾಶ್ ಎಂಬ ಇನ್ನೊಬ್ಬ ವಿಪ್ರೋತ್ತಮ ಹಿಂದೂತ್ವವಾದಿಯೇ ಇವನಿಗೆ ಆಸರೆ. ಈ ನಾ. ಆಚಾರಿ ಒಂದು ಗಂಟೆ ಪ್ರವಚನ ನಡೆಸಿದರೆ ಅದರಲ್ಲಿ ಒಂದತ್ತು ನಿಮಿಷ ಮಾತ್ರ ಆಧ್ಯಾತ್ಮ, ವೇದ ಇತ್ಯಾದಿ ಒದರುತ್ತಾನೆ. ಇನ್ನುಳಿದ ಅವಧಿ ಪೂರಾ ತೇಟು RSS ಬಾಲಕನಂತೆ ಗಾಂಧಿ, ನೆಹರೂಗೆ ಬಾಯಿಗೆ ಬಂದಂತೆ ಬೈಯುತ್ತಾ, ಕಮ್ಯುನಿಸ್ಟರು, ಸಮಾಜವಾದಿಗಳನ್ನು ದೂಷಿಸುತ್ತಾ ತಲಹರಟೆ ನಡೆಸುತ್ತಿರುತ್ತಾನೆ.



ಸಂಯುಕ್ತ ಕರ್ನಾಟಕದಲ್ಲಿ ಶೂದ್ರರ ಲೇವಡಿ....

ಸರ್ಕಾರ ರಾಮನವಮಿಗೆ ರಜಾ ಕೊಡಲ್ಲ. ಈದ್ ಮಿಲಾದ್‌ಗೆ ಕೊಡ್ತದೆ ಯಾಕೆ? ಹರಿಜನ ಅಂತ ಯಾಕ್ರಿ ಹೇಳಬೇಕು. ಹರಜನ ಅನ್ನಬಾರದು ಯಾಕೆ? ಅಂತ ಕೊಕ್ಕೆ ಹಾಕುವುದು ಇವನ ಚಾಳಿ.

ಇಂತಹ ನೂರಾರು ತಿಕ್ಕಲು ಮಾತಾಡುವ ನಾ. ಆಚಾರಿಗೆ ಕೆಲ ಅವಿದ್ಯಾವಂತರು ಪ್ರವಚನ ಕಲಾನಿಧಿ ಅನ್ನೋ ಬಿರುದನ್ನು ಅಂಟಿಸಿಬಿಟ್ಟಿದ್ದಾರೆ. ಈ ಆಚಾರಿಯ ಅಹಂಕಾರ ಯಾವ ಲೆವೆಲ್‌ನಲ್ಲಿದೆ ಅಂದರೆ "ನನ್ನ ಪ್ರವಚನ ಕೇಳುತ್ತಿರೊ ನೀವೇ ಪುಣ್ಯವಂತರು. ನಾನು ಸತ್ತ ಮೇಲೆ ನನ್ನ ಥರ ನಿಮಗೆ ಯಾರೂ ಸಿಗಲ್ಲ" ಅಂತ ಓಳು ಬಿಡುತ್ತಿರುತ್ತಾನೆ.

ನಾ ಆಚಾರಿಯ ಅಸಂಬದ್ಧ ಪ್ರಲಾಪ

ಪ್ರವಚನ ಕಲಾನಿಧಿ ನಾ ಆಚಾರಿ ತನ್ನ ಪ್ರವಚನ-ಭಾಷಣ-ಬರಹಗಳಲ್ಲಿ ಒಗೆದ ಬೊಗಳೆ ದಾನೆನ್ನಲು ಇಲ್ಲಿ ಇನ್ನೂ ಕೆಲವು ಉದಾಹರಣೆಗಳಿವೆ.

* ಗಾಂಧಿ, ನೆಹರು, ಕಮ್ಯುನಿಸ್ಟರು, ಪ್ರಗತಿಪರರಿಂದ ಈ ದೇಶ ಹಾಳಾಗಿದೆ.
* ರುದ್ರಭಟ್ಟ ಸಂಸ್ಕೃತ ಕಾವ್ಯವನ್ನು ಕನ್ನಡಕ್ಕೆ ತಂದು ಹಾಳು ಮಾಡಿಬಿಟ್ಟ.
* ಪುತಿನರ ಗೋಕುಲ ನಿರ್ಗಮನ ಬೀದಿ ಸೂಳೆಯ ನರ್ತನದಂತೆ.
* ಬ್ರಾಹ್ಮಣರಿರುವುದೇ ವಿದ್ಯೆ ಕಲಿಸಲು.
* Educated Rascals ನಮ್ಮ ಪರಂಪರೆ ಮರೆತಿದ್ದಾರೆ.
* ಸೆಕ್ಯುಲರಿಸಂ ಅನ್ನೋದು ಆತ್ಮಹತ್ಯಾತ್ಮಕ

ಈ ನೀಚನ ಇಂಥ ಹೊಲಸು ಮಾತುಗಳಿಗೆ ಕೊನೆಮೊದಲೇ ಇಲ್ಲ. ಇಂಥ ಮೂರನೇ ದರ್ಜೆ, ಚಿಲ್ಲರೆ ಆಸಾಮಿಗೆ ಸಂಯುಕ್ತ ಕರ್ನಾಟಕ ಪತ್ರಿಕೆ ಒಂದು ಅಂಕಣವನ್ನೇ ಕೊಟ್ಟು ಶೂದ್ರರ ವಿರುದ್ಧ ಬ್ರಾಹ್ಮಣ ಶಸ್ತ್ರ ಝಳಪಿಸಲು ಹೊರಟಿದೆ.

ಜೂನ್ 19 ರ ಸಂಯುಕ್ತ ಕರ್ನಾಟಕ ಈ ರಾಸ್ಕಲ್ ನಾ ಆಚಾರಿಯ ಕೈಲಿ ಏನೆಂದು ಬರೆಸಿದೆ ನೋಡಿ!

ಹೊಟ್ಟೆಗೆ ಅನ್ನಾ ತಿನ್ನುವವರು ಇಷ್ಟು ದುರಹಂಕಾರ ಪ್ರದರ್ಶಿಸಲು ಸಾಧ್ಯವೇ?

ಇವನ ಹಿಂಬಾಲಕರು ಎಂಥ ಮೂರ್ಖರೆಂದರೆ ಒಂದು ಸಾರಿ ಮಲ್ಲೇಶ್ವರದಲ್ಲಿ ಆಚಾರಿ ಪ್ರವಚನದ ಬೇಧಿ ಮಾಡಿಕೊಳ್ಳುತ್ತಿದ್ದಾಗ ಒಂದು ಪಾರಿವಾಳ ಹಾರಿ ಬಂದು ಅವನ ಹತ್ತಿರ ಪೂರಾ 2 ಗಂಟೆ ಕೂತಿತ್ತಂತೆ. ಅದು ಆಂಜನೇಯನೇ ರಾಮಾಯಣ ಕೇಳಲು ಪಾರಿವಾಳದ ರೂಪದಲ್ಲಿ ಬಂದಿದ್ದ ಅಂತ ಈಗ ಬಂಡಲ್ ಬಿಡುತ್ತಿದ್ದಾರೆ.

ಮನುವಾದವೆಂಬ ಜಾಪಾಳ ಮಾತ್ರೆ ತಿಂದು ರಾಜ್ಯಾದ್ಯಂತ ಭಾಷಣ ಬೇಧಿ ಮಾಡಿಕೊಂಡು ತಿರುಗುವ ನಾ.ಆಚಾರಿ ಈಗ ಸಂಯುಕ್ತ ಕರ್ನಾಟಕದಲ್ಲಿ ಸಮುದ್ರ ಮಂಥನ ಎಂಬ ಅಂಕಣ ಬರೆಯುತ್ತಿದ್ದಾನೆ.

ಜೂನ್ 29 ರ ಅಂಕಣದಲ್ಲಿ "ಜಾತಿ ಸೃಷ್ಟಿ ಮಾಡಿದವರು ಯಾರು?" ಎಂದು ಬರೆಯುತ್ತಾ ನಾ. ಆಚಾರಿ ಕೆಲವು ಹೊಸ ವಿಚಾರ ಸಂಶೋಧಿಸಿದ್ದಾನೆ.

"ಬ್ರಾಹ್ಮಣರು ಜಾತಿ ಸೃಷ್ಟಿಸಿದರು" "ಮನು ಮಾಡಿದ್ದು" ಎಂಬ ವಾದ ಹೇಗಿದೆಯೆಂದರೆ ರಾಜ್ಯಾಂಗವನ್ನು ಅಂಬೇಡ್ಕರ್ ನಿರ್ಮಾಣ ಮಾಡಿದರು ಎಂಬಂತೆ, ಅದಕ್ಕೆ ಕಮಿಟಿ ಇರಲಿಲ್ಲವೆ, ಅಂಬೇಡ್ಕರ್ ಸುಮ್ಮನೆ ಬರೆದುಕೊಂಡು ಕರಡು ತಯಾರಿಸಿದವರಲ್ಲವೆ" ಅನ್ನುತ್ತಾನೆ.

ಇವನ ಬಾಯಿಹರುಕುತನಕ್ಕೆ ಆದಷ್ಟು ಬೇಗ ಬೀಗ ಹಾಕದಿದ್ದರೆ ರಾಜ್ಯದಲ್ಲಿ ಇನ್ನೊಂದು ಸುತ್ತಿನ ಬ್ರಾಹ್ಮಣ-ಬ್ರಾಹ್ಮಣೇತರ ಜಗಳ ಶುರುವಾಗುವುದರಲ್ಲಿ ಸಂಶಯವೇ ಇಲ್ಲ. ■

ಮಾಡುವುದಕ್ಕೆ ಬಿಡುಗಡೆಗೊಳಿಸಲಾಗಿದೆ" ಎಂದು ಎಷ್ಟೋ ನಯನಾಜೂಕಿನಿಂದ ನಾಟಕ ಮಾಡಿದರೂ ಬಳ್ಳಾರಿ ಅಭಿವೃದ್ಧಿ ಎಂದರೆ ಯಾರ ಅಭಿವೃದ್ಧಿ ಎಂಬುದನ್ನು ಅರ್ಥಮಾಡಿಕೊಳ್ಳಲಾರದಷ್ಟು ದಡ್ಡರೇನಲ್ಲ ಕರ್ನಾಟಕದ ಜನ.

ಮೊನ್ನೆ ನಡೆದ ಕ್ಯಾಬಿನೆಟ್ ಮೀಟಿಂಗ್‌ನಲ್ಲಿ ಬಳ್ಳಾರಿ ಮೂಲಕ, ರೆಡ್ಡಿಗಳು ನಿರ್ಮಿಸಲು ಹೊರಟಿರುವ ಬಳ್ಳಾರಿ ವಿಮಾನ ನಿಲ್ದಾಣದ ಮೂಲಕ ಆಂಧ್ರಕ್ಕೆ ತೆರಳಿ ಅದರ ರಾಜಧಾನಿ ಹೈದರಾಬಾದ್‌ಗೆ ಸಂಪರ್ಕ ಕಲ್ಪಿಸುವ ಬೃಹತ್ ರಾಜ್ಯ ಹೆದ್ದಾರಿ 132 ಯನ್ನು ಅಭಿವೃದ್ಧಿಪಡಿಸುವುದಕ್ಕೆ ಸಮ್ಮತಿ ನೀಡಲಾಗಿದೆ. ಈ ಯೋಜನೆಯ ಅಂದಾಜು ವೆಚ್ಚ 354.50 ಕೋಟಿ ರೂಪಾಯಿಗಳು. ಇದೊಂದೇ ಯೋಜನೆಯನ್ನು ಪ್ರಕಟಿಸಿದರೆ ಬಳ್ಳಾರಿಯ ಸಾಮಾನ್ಯ ಜನ ಅದರಿಂದ ತಮಗೇನೂ ಉಪಯೋಗವಿಲ್ಲವೆಂದು ದಂಗೆ ಏಳುತ್ತಾರೆಂಬ ಭಯದಿಂದ ಕುಡಿಯುವ ನೀರಿಗಾಗಿ 15 ಕೋಟಿ ಕೊಟ್ಟು ಕಣ್ಣೊರೆಸಿದ್ದಾರೆ. ರೆಡ್ಡಿಗಳನ್ನು ಎದುರು ಹಾಕಿಕೊಳ್ಳುವಷ್ಟು ತಾಕತ್ತಿಲ್ಲದ ನರಸತ್ತ ಯಡ್ಡಿ ಕ್ಯಾಬಿನೆಟ್ ಮೀಟಿಂಗ್‌ನಲ್ಲಿ ರೆಡ್ಡಿಗಳು ಹೀಗೆ ಖಜಾನೆ ಲೂಟಿ ಹೊಡೆಯುವ ತೀರ್ಮಾನಗಳನ್ನು ತೆಗೆದುಕೊಳ್ಳುತ್ತಿದ್ದರೂ ಬಾಯ್ಮುಚ್ಚಿಕೊಂಡು ಕುಳಿತಿದ್ದರು. ಏನೇ ಆಗಲಿ, ರೆಡ್ಡಿಗಳ ಹಿಡಿತದಲ್ಲಿಲ್ಲವೆ ಯಡ್ಡಿ?

ಆದರೆ, ತಲೆಬಾಗುವುದಕ್ಕೂ ಒಂದು ಮಿತಿ ಬೇಡವೆ? ಕಳೆದ ಕ್ಯಾಬಿನೆಟ್ ಮೀಟಿಂಗ್‌ನಲ್ಲಿ ಇದೇ ರೆಡ್ಡಿಗಳು ಯಡ್ಡಿ ಮತ್ತು ಇನ್ನಿತರ ಮಂತ್ರಿಗಳನ್ನೆಲ್ಲಾ ಬೆದರಿಸಿ ತಮ್ಮ ಮೇಲಿರುವ, ತಮ್ಮ ಬೆಂಬಲಿಗರ ಮೇಲಿರುವ ಪೊಲೀಸ್ ಕೇಸುಗಳನ್ನೆಲ್ಲಾ ವಾಪಸು ತೆಗೆಸಿದ್ದರು. ಅಲ್ಲದೇ, ಬಳ್ಳಾರಿಯ 'ಅಭಿವೃದ್ಧಿ'ಗೆ 36 ಕೋಟಿ ರೂಪಾಯಿ ಮಂಜೂರು ಮಾಡಿಸಿಕೊಂಡು ಹೋಗಿದ್ದರು. ಅದಾದ ಮೂರು ತಿಂಗಳೂ ಕಳೆದಿಲ್ಲ ಈಗ ಮತ್ತೊಂದು ಮಹಾದರೋಡೆ ಮಾಡಿದ್ದಾರೆ.

ಬಳ್ಳಾರಿಯಲ್ಲಿ ರೆಡ್ಡಿ ದರ್ಬಾರ್ ಹೇಗೆ ನಡೆಯುತ್ತಿದೆ ಎಂಬುದಕ್ಕೆ ಅವರು ಸ್ಥಾಪಿಸಲು ಹೊರಟಿರುವ ವಿಮಾನ ನಿಲ್ದಾಣವೇ ಸಾಕ್ಷಿ ಹೇಳುತ್ತದೆ. ಮೊದಲೇ ಅತ್ಯಂತ ಹಿಂದುಳಿದಿರುವ ಈ ಪ್ರದೇಶದಲ್ಲಿ ಮೂರು ಹೊತ್ತಿನ ಊಟಕ್ಕೂ ಪರದಾಡಬೇಕಾದ ಪರಿಸ್ಥಿತಿ ಇದೆ. ಇಡೀ ಬಳ್ಳಾರಿ ಜಿಲ್ಲೆಯನ್ನು ಜಾಲಾಡಿದರೂ ವಿಮಾನದಲ್ಲಿ ಬೆಂಗಳೂರಿಗೆ, ಹೈದರಾಬಾದಿಗೆ ಓಡಾಡುವ ಶ್ರೀಮಂತರು ಹೆಚ್ಚೆಂದರೆ ನೂರು ಇರಬಹುದು. ಆದರೂ ಅಲ್ಲಿಗೊಂದು ವಿಮಾನ ನಿಲ್ದಾಣ ಬೇಕೆಬೇಕೆಂದು ಹಠ ಹಿಡಿದು ಅದನ್ನು ಕಟ್ಟಲು ಹೊರಟಿದ್ದಾರೆ ಈ ರೆಡ್ಡಿಗಳು. ಇದನ್ನು ಮಾಡುತ್ತಿರುವುದು ಬಳ್ಳಾರಿಯ ನಾಗರಿಕರಿಗೆ ಅನುಕೂಲ ಮಾಡಿಕೊಡುವುದಕ್ಕಲ್ಲ, ಬದಲಿಗೆ ತಮಗೆ ಅನುಕೂಲ ಮಾಡಿಕೊಳ್ಳುವುದಕ್ಕೆ ಎಂಬುದು ಮೇಲ್ನೋಟಕ್ಕೆ ಕಾಣುತ್ತದೆ. ರೆಡ್ಡಿಗಳ ಈ ಶೋಕಿಗೆ ರಾಜ್ಯದ ಜನತೆ ಕಷ್ಟಪಟ್ಟು ತುಂಬಿಸಿದ ಸರ್ಕಾರಿ ಖಜಾನೆ ಖಾಲಿಯಾಗುವುದು ಒಂದು ವಿಚಾರವಾದರೆ ಅದಕ್ಕಿಂತ ಕ್ರೂರವಾದದ್ದು ಈ ವಿಮಾನ ನಿಲ್ದಾಣಕ್ಕಾಗಿ ಶಿರ್ವ, ಜಾಗನೂರು ಮತ್ತು ಕಪ್ಪಗಲ್ಲು ಹಳ್ಳಿಗಳ ಸಾವಿರಾರು ರೈತರು ತಮ್ಮ ಜೀವನಾಧಾರವಾಗಿರುವ 1800 ಎಕರೆ ಫಲವತ್ತಾದ ಭೂಮಿ ಕಳೆದುಕೊಳ್ಳಬೇಕಾಗಿರುವುದು. ಆದರೆ, ಈ ರೈತರು ಅಷ್ಟು ಸುಲಭವಾಗಿ ರೆಡ್ಡಿಗಳ ಸಂಚಿಗೆ ಬಲಿಯಾಗುವ ಲಕ್ಷಣಗಳು ಕಾಣುತ್ತಿಲ್ಲ. 'ಜೀವ ಕೊಟ್ಟರೂ ಭೂಮಿ ಬಿಡುವುದಿಲ್ಲ' ಎಂದು ಹಠಕ್ಕೆ ಬಿದ್ದು ರೆಡ್ಡಿಗಳ ವಿರುದ್ಧ ಹೋರಾಟಕ್ಕಿಳಿದಿದ್ದಾರೆ.

ಬಳ್ಳಾರಿ ದೊರೆಗಳು ಮತ್ತವರ ಸೇವಕ ಶ್ರೀರಾಮುಲು ಎಷ್ಟರಮಟ್ಟಿಗೆ ಕನ್ನಡ ನಾಡನ್ನು ಲೂಟಿ ಹೊಡೆದು ಕೊಬ್ಬಿದ್ದಾರೆಂಬುದಕ್ಕೆ ಇನ್ನೊಂದು ಉದಾಹರಣೆ ಕೊಡಬಹುದು. ಇತ್ತೀಚೆಗೆ ಶ್ರೀರಾಮುಲುನ ಅಳಿಯ ಸುರೇಶ್ ಬಾಬುನ ಮದುವೆಗೆ ಇವರು ಖರ್ಚು ಮಾಡಿದ್ದು ಬರೋಬ್ಬರಿ 20 ಕೋಟಿ! ಮೂವತ್ತು ಎಕರೆ ಪ್ರದೇಶದಲ್ಲಿ ಮದುವೆಗಾಗಿಯೇ ಕಟ್ಟಲಾಗಿದ್ದ ಅರಮನೆಂಥ ಮಂಟಪದಲ್ಲಿ ಒಟ್ಟು 500 ಹವಾ ನಿಯಂತ್ರಕಗಳನ್ನು ಹಾಕಿದ್ದರು. ಖುದ್ದು ಯಡ್ಡಿಯಾದಿಯಾಗಿ ರೆಡ್ಡಿಗಳ ಮುಲಾಜಿನಡಿಯಲ್ಲಿ ಹೀನಬದುಕು ಸವೆಸುತ್ತಿರುವ ರಾಜಕಾರಣಿಗಳ ಹಿಂಡೇ ಅಲ್ಲಿ ನೆರೆದಿತ್ತು. ಬಳ್ಳಾರಿ ಜಿಲ್ಲೆಯ ಸರ್ಕಾರಿ ಅಧಿಕಾರಿಗಳನ್ನು, ನೌಕರರನ್ನು ಕೂಲಿ ಆಳುಗಳಂತೆ ದುಡಿಸಿಕೊಳ್ಳಲಾಯಿತು. ಈ ಗಣಿಧಣಿಗಳೇನು ಹುಟ್ಟುತ್ತಲೇ ಕುಬೇರರಾಗಿ ಹುಟ್ಟಿದವರೇನಲ್ಲ. ಹತ್ತಿಪ್ಪತ್ತು ವರ್ಷಗಳ ಹಿಂದೆ ಅವರೆಲ್ಲರೂ ಕೇರ್ ಆಫ್ ಫುಟ್‌ಪಾತ್ ಆಗಿದ್ದವರೆ. ಈಗ ಒಂದು ಮದುವೆಗೇ 20 ಕೋಟಿ ಖರ್ಚು ಮಾಡುತ್ತಾರೆಂದರೆ ಇನ್ನು ಕರ್ನಾಟಕವನ್ನು ಅದ್ಯಾವ ಮಟ್ಟಕ್ಕೆ ಕೊಳ್ಳೆ ಹೊಡೆದಿರಬೇಡ?

ಏರ್‌ಪೋರ್ಟ್ ಸ್ಥಾಪಿಸಿಕೊಳ್ಳುವುದಕ್ಕೆ, ಕುಡಿದ ನೀರೂ ಅಲುಗಾಡದಂತೆ ಕಾರು ಓಡಿಸುವುದಕ್ಕೆ ನಾಜೂಕು ರಸ್ತೆ ಹಾಕಿಸಿಕೊಳ್ಳುವುದಕ್ಕೆ, ಅದ್ದೂರಿ ಮದುವೆ ಮಾಡುವುದಕ್ಕೆ ಈ ಪರಿ ದುಡ್ಡು ಚೆಲ್ಲುವ ಈ ಹಲಾಲ್‌ಕೋರರು ತಾವೇ ಸರಿಹೋಗುವ ಛಾಯಮಾನದವರಲ್ಲ. ಅವರ ಎಂಜಲನ್ನು ತಿಂದಿರುವ ಯಡ್ಡಿಯಂಥೂ ಅವರಿಗೆ ಪಾಠ ಕಲಿಸುವುದಿಲ್ಲ. ಕನ್ನಡನಾಡಿನ ಜನರೇ ಆ ಕೆಲಸ ಮಾಡಬೇಕಷ್ಟೆ. ಈಗಾಗಲೇ ವಿಮಾನ ನಿಲ್ದಾಣಕ್ಕಾಗಿ ಭೂಮಿ ಕಳೆದುಕೊಳ್ಳಲಿರುವ ರೈತರು ಆ ಕೆಲಸ ಪ್ರಾರಂಭಿಸಿದ್ದಾರೆ. ಉಳಿದವರು ಅವರೊಂದಿಗೆ ಕೈಜೋಡಿಸಬೇಕಷ್ಟೆ. ■

ಜಾಕ್ಸನ್ ತನ್ನ ಮಕ್ಕಳೊಂದಿಗೆ.



ಜಾಕ್ಸನ್ ಕೇವಲ ನೃತ್ಯ ಪಟುವಲ್ಲ, ಒಳ್ಳೆಯ ಕವಿ, ಅದ್ಭುತ ಹಾಡುಗಾರ. ಅವನ ಆಳದಲ್ಲಿ ಮಗುವೊಬ್ಬನಿದ್ದ, ಅದಕ್ಕೆ ಅವನಿಗೆ ಮಕ್ಕಳೆಂದರೆ ಪ್ರೀತಿ. ಇಂತಹ ಜಾಕ್ಸನ್‌ನನ್ನು 2001 ಮಾರ್ಚ್ ತಿಂಗಳಲ್ಲಿ ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದವರು ಭಾಷಣಕ್ಕೆಂದು ಕರೆದರು. ಅವನು ಮೊಟ್ಟಮೊದಲ ಬಾರಿಗೆ ಸಾರ್ವಜನಿಕ ಭಾಷಣ ಮಾಡಿದ್ದು ಅಲ್ಲೇ. ನಮ್ಮ ಓದುಗರಿಗಾಗಿ ಜಾಕ್ಸನನ 'ಹೀಲ್ ದ ಕಿಡ್ಸ್' ಭಾಷಣದ ಆಯ್ದ ಭಾಗಗಳ ಅನುವಾದವನ್ನು ಇಲ್ಲಿ ನೀಡುತ್ತಿದ್ದೇನೆ.

● ಡಾ. ಲಕ್ಷ್ಮೀಪತಿ ಸಿ.ಜಿ.

ಹುಚ್ಚನ ಅಂತರಾಳ

ಮೈಕಲ್ ಜಾಕ್ಸನ್ ತೀರಿಕೊಂಡಿರುವುದು ಮನಸ್ಸಿಗೆ ಬೇಸರ ತರುತ್ತಿದೆ. ಈತ ಐದು ವರ್ಷ ವಯಸ್ಸಿನ ಮಗುವಾಗಿದ್ದಾಗಿನಿಂದ ತನ್ನ ವಿಶೇಷ ನೃತ್ಯ, ಹೃದಯ ಮುಟ್ಟುವ ಸಂಗೀತ, ಕಪ್ಪು ಜನರ ಆಳದ ಯಾತನೆ, ಆರ್ದ್ರತೆ, ಕಕ್ಕುಲತೆಯನ್ನು ವ್ಯಕ್ತಪಡಿಸುವ ಹಾಡುಗಳು ಇವತ್ತು ಮನಸ್ಸನ್ನು ಕಾಡುತ್ತಿವೆ. ಕಪ್ಪು ಜನಾಂಗದ ದುರಂತವೇನೋ ಎಂಬಂತೆ ತನ್ನ ಬಣ್ಣದ ಕೀಳರಿಮೆ ಮೀರುವ ಸಲುವಾಗಿ ಜಾಕ್ಸನ್ ಬಿಳಿ ಚರ್ಮವನ್ನು ಮುಖಕ್ಕೆ ಮೆತ್ತಿಸಿಕೊಂಡ. ತನ್ನ ಆಕಾರವನ್ನು ನಾನಾ ರೀತಿಗಳಲ್ಲಿ ಬದಲಾಯಿಸುತ್ತಾ ವಿಕಾರರೂಪಕ್ಕೊಳಗಾದ. ಆತನ ಮುಖದ ಮೇಲಿದ್ದ ಬಿಳಿ ಚರ್ಮವು ಪದರ ಪದರವಾಗಿ ಉದುರಿಹೋಗುತ್ತಿತ್ತು, ಕಣ್ಣಿನ ದೃಷ್ಟಿ ಮಂದವಾಗಿತ್ತು, ಮೊದಲು ವಜ್ರದಂತೆ ಹೊಳೆಯುತ್ತಿದ್ದ ಆತನ ಕಪ್ಪು ಮುಖ, ಗೋಲಿಯಂತೆ ಹೊಳೆಯುತ್ತಿದ್ದ ಕಣ್ಣುಗಳು, ಸದೃಢವಾದ ದೇಹ ಎಂದಿಗೂ ಹಿಂದಿರುಗಿ ಬರಲಾರದಂತಾಗಿದ್ದವು.

ಜಾಕ್ಸನ್ ಕೇವಲ ನೃತ್ಯ ಪಟುವಲ್ಲ, ಒಳ್ಳೆಯ ಕವಿ, ಅದ್ಭುತ ಹಾಡುಗಾರ. ಅವನ ಆಳದಲ್ಲಿ ಮಗುವೊಬ್ಬನಿದ್ದ. ಅದಕ್ಕೆ ಅವನಿಗೆ ಮಕ್ಕಳೆಂದರೆ ಪ್ರೀತಿ. ಇಂತಹ ಜಾಕ್ಸನ್‌ನನ್ನು 2001 ಮಾರ್ಚ್ ತಿಂಗಳಲ್ಲಿ ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದವರು ಭಾಷಣಕ್ಕೆಂದು ಕರೆದರು. ಅವನು ಮೊಟ್ಟಮೊದಲ ಬಾರಿಗೆ ಸಾರ್ವಜನಿಕ ಭಾಷಣ ಮಾಡಿದ್ದು ಅಲ್ಲೇ. ನಮ್ಮ ಓದುಗರಿಗಾಗಿ ಜಾಕ್ಸನನ 'ಹೀಲ್ ದ ಕಿಡ್ಸ್' ಭಾಷಣದ ಆಯ್ದ ಭಾಗಗಳ ಅನುವಾದವನ್ನು ಇಲ್ಲಿ ನೀಡುತ್ತಿದ್ದೇನೆ.

"ಥ್ಯಾಂಕ್ಯೂ ಡಿಯರ್ ಫ್ರೆಂಡ್ಸ್, ಸಭೆಯ ಅಧ್ಯಕ್ಷರೇ, ನೀವು ನನಗೆ ಭಾಷಣ ಮಾಡಲು ಆಹ್ವಾನಿಸಿದ್ದು ನನಗೆ ನೀಡಿದ ಗೌರವ. ಇದನ್ನು ಗೌರವಪೂರ್ವಕವಾಗಿ ಸ್ವೀಕರಿಸಿದ್ದೇನೆ.

ಈ ಸಂಜೆ ನಿಮ್ಮೆದುರಿಗೆ ಮಾತಾಡಲು ನನಗಿರುವ ಅರ್ಹತೆಗಳನ್ನು ಕುರಿತು ಸಣ್ಣ ಪಟ್ಟಿಯೊಂದನ್ನು ಮಾಡುತ್ತೇನೆ. ನಾನು ಶೈಕ್ಷಣಿಕ ತಜ್ಞನಲ್ಲ, ಈ ಸಭಾಂಗಣದಲ್ಲಿ ಶಿಕ್ಷಣವೇತ್ತರು ಮಾತಾಡಿಹೋಗಿದ್ದಾರೆ. ಆದರೆ ಅವರೆಲ್ಲರೂ ಮೂನ್‌ವಾಕ್‌ನಲ್ಲಿ ನಿಪುಣರಾಗಿರಲಿಲ್ಲ, ಅದರಲ್ಲೂ ಐನ್‌ಸ್ಟೀನ್ ಈ ವಿಚಾರದಲ್ಲಿ ಭಯಂಕರವಾಗಿದ್ದಿರಬೇಕು.

ಆದರೆ ನಾನು ಹೆಮ್ಮೆಯಿಂದ ಹೇಳಿಕೊಳ್ಳಬಲ್ಲೆ, ನಾನು ಇತರರಿಗಿಂತ ಹೆಚ್ಚು ಸ್ಥಳಗಳನ್ನೂ ಮತ್ತು ಸಂಸ್ಕೃತಿಗಳನ್ನು ಅನುಭವಿಸಿದ್ದೇನೆ. ಮನುಷ್ಯನ ಜ್ಞಾನ ಎಂಬುದು ಕೇವಲ ಗ್ರಂಥಾಲಯದ ಪುಸ್ತಕಗಳಲ್ಲಿಲ್ಲ, ಮಣಗಟ್ಟಲೆ ಜ್ಞಾನ ಮನುಷ್ಯನ ಹೃದಯದ ಮೇಲೆ ಬರೆಯಲ್ಪಟ್ಟಿದೆ. ಮನುಷ್ಯನ ಆತ್ಮಗಳ ಮೇಲೆ ಕೊರೆಯಲ್ಪಟ್ಟಿದೆ. ಮನೋಧರ್ಮದ ಮೇಲೆ ಬಿಡಿಸಲ್ಪಟ್ಟಿದೆ. ಸ್ನೇಹಿತರೇ, ನೀವು ನಂಬಲಾರಿರಿ ನನಗೀಗ ವಯಸ್ಸು 43. ಈ 43ನೇ ವಯಸ್ಸಿಗೆ ನಾನು ಸಾಕಷ್ಟು ಕಂಡಿದ್ದೇನೆ. ಇನ್ನು ಕೆಲವೇ ವರ್ಷಗಳಲ್ಲಿ ಕನಿಷ್ಠವೆಂದರೂ ನನಗೆ 80 ವರ್ಷದ ವ್ಯಕ್ತಿಯಷ್ಟು ಅನುಭವವಾಗಿರುತ್ತದೆ. ಆದುದರಿಂದ ಮನಗೊಟ್ಟು, ಕಿವಿಗೊಟ್ಟು ನನ್ನ ಮಾತನ್ನು ಕೇಳಿ. ಈ ರಾತ್ರಿ ನಾನು ಹೇಳಲಿರುವ ಮಾತುಗಳು ನಮ್ಮ ಗ್ರಹಕ್ಕೂ ಮತ್ತು ಮನುಷ್ಯ ಲೋಕಕ್ಕೂ ಸಾಂತ್ವನವನ್ನು ನೀಡಬಲ್ಲದು.

ನಾವೆಲ್ಲರೂ ನಮ್ಮ ಬಾಲ್ಯದ ಫಲಿತಗಳು. ಆದರೆ ನಾನು ಅಂತಹ ಒಂದು ಸುಂದರ ಬಾಲ್ಯವನ್ನು ಕಳೆದುಕೊಂಡವನು. ಜಾಕ್ಸನ್ 5 ತಂಡದ ನಾವು ಜಗತ್ತನ್ನು ಲೆಕ್ಕಿಸದೆ ಹಾಡುತ್ತಾ, ಕುಣಿಯುತ್ತಾ ಬಾಲ್ಯವನ್ನು ಕಳೆಯಬೇಕಿತ್ತು, ನಾನು ಎಳೆಯ ವಯಸ್ಸಿನಲ್ಲಿಯೇ ನೃತ್ಯ ಮಾಡಲು ಹಾಡಲು ಶುರು ಮಾಡಿದೆ. ಇಲ್ಲಿಯವರೆಗೆ ನನ್ನ ನೃತ್ಯ ಮತ್ತು ಹಾಡು ನಿಂತಿಲ್ಲ, ಕುಣಿಯುವಾಗ ಮತ್ತು ನರ್ತಿಸುವಾಗ ನಾನು ಅನಿರ್ವಚನೀಯ ಆನಂದವನ್ನು ಅನುಭವಿಸುತ್ತೇನೆ. ಆ ಕ್ಷಣದಲ್ಲಿ ಸ್ವರ್ಗಕ್ಕೆ ಹತ್ತಿರವಾಗಿ ಬದುಕುತ್ತೇನೆ. ಆದರೆ ನನ್ನ ಬಾಲ್ಯದಲ್ಲಿಯೂ ಕೆಲವು ಇಂಥದ್ದೇ ಆಸೆಗಳಿದ್ದವು. ಮರಳಿನಲ್ಲಿ ಮನೆ ಕಟ್ಟುವುದು ಗಾಳಿಯಲ್ಲಿ ಬಲೂನುಗಳನ್ನು ತೇಲಿ ಬಿಡುವುದು ಸ್ನೇಹಿತರೊಡನೆ ಕಣ್ಣಾಮುಚ್ಚಾಲೆಯಾಡುವುದು. ಆದರೆ ವಿಧಿ ಇವುಗಳಿಂದ ನನ್ನನ್ನು ವಂಚಿಸಿತು. ನನ್ನ ಸುತ್ತ ಕಿವಿಗೆ ಅಪ್ಪಳಿಸುತ್ತಿದ್ದ ನಗುವಿನ ಅಲೆ ಮತ್ತು ಕಣ್ಣಿಗೆ ಕಾಣುತ್ತಿದ್ದ ಆಟದ ಬಯಲು ಅಸೂಯೆಯನ್ನು ಹುಟ್ಟಿಸುತ್ತಿದ್ದವು.

ನನಗೆ ಯಾವಾಗಲೂ ಒಂದು ಕೊರಗಿದೆ. ನಾನು ಬಾಲ್ಯವಿಲ್ಲದ ಬದುಕನ್ನು ಕಳೆದುಬಿಟ್ಟೆನಲ್ಲಾ ಎಂದು ಯೋಚಿಸುತ್ತೇನೆ. ಆದರೆ ಹಾಲಿವುಡ್‌ನ ಬಾಲ ಕಲಾವಿದರು ಮಾತ್ರ ಬಾಲ್ಯವನ್ನು ಕಳೆದುಕೊಂಡಿಲ್ಲ, ಇಡೀ ವಿಶ್ವದ ಮಕ್ಕಳೇ ಬಾಲ್ಯವಿಲ್ಲದೆ ನರಳುತ್ತಿದ್ದಾರೆ. ಇದೊಂದು ಜಾಗತಿಕ ದುರಂತ. ಇಡೀ ಭೂಗೋಳವನ್ನು ಆವರಿಸಿರುವ ಪ್ರಳಯ. ಈ ಆಧುನಿಕ ದಿನಮಾನದಲ್ಲಿ ಬಾಲ್ಯವೆಂಬುದು ಘೋರ ಅನುಭವವಾಗಿದೆ. ನಮ್ಮ ಸುತ್ತಮುತ್ತ ಸಂತೋಷ ವಿಲ್ಲದ ಕೇವಲ ಅಂಕಗಳನ್ನು ಪಡೆಯುವ ಮಕ್ಕಳನ್ನು ಉತ್ಪಾದಿಸುತ್ತಿದ್ದೇವೆ.

ಇತ್ತೀಚಿನ ದಿನಗಳಲ್ಲಂತೂ ಮಕ್ಕಳನ್ನು ಬೇಗ ದೊಡ್ಡವರನ್ನಾಗಿ ಮಾಡಲು ಪ್ರೋತ್ಸಾಹಿಸಲಾಗುತ್ತಿದೆ. ಬಾಲ್ಯವೆಂಬುದು ಹೊರೆಯಾಗಿದೆ. ಈ ಹೊರೆಯನ್ನು ಮಕ್ಕಳು ಹೊರಲೇ ಬೇಕಾಗಿದೆ. ನಾವು ಈ ಹೊರೆಯನ್ನು ಇಳಿಸಬೇಕಾಗಿದೆ. ನಮ್ಮ ಪೀಳಿಗೆಯು ಅಪ್ಪ - ಅಮ್ಮಂದಿರ ಜೊತೆಗೆ ಒಂದು ಬಗೆಯ ಅತಿರೇಕದ ಸಂಬಂಧಗಳನ್ನು ಹೊಂದಿದೆ. ಮನಶಾಸ್ತ್ರಜ್ಞರು ಬೇಷರತ್ತಾಗಿ ಮಕ್ಕಳನ್ನು ಪ್ರೀತಿಸದೆ ಹೋದರೆ ಅದರಿಂದ ಉಂಟಾಗುವ ಅನಾಹುತವನ್ನೂ ತಿಳಿಸಿಕೊಡುತ್ತಿದ್ದಾರೆ. ಆದರೆ ಒಂದು ಪೀಳಿಗೆಯನ್ನು ಮತ್ತೊಂದು ಪೀಳಿಗೆಗೆ ಬೆಸೆಯುತ್ತಿದ್ದ ಅಮರವಾದ ಸಂಬಂಧವು ಛಿದ್ರವಾಗಿದೆ. ಅಪ್ಪ - ಅಮ್ಮ ಮತ್ತು ಕುಟುಂಬದ ಸದಸ್ಯರಿಂದ ಮಕ್ಕಳು ದೂರವಾಗಿದ್ದಾರೆ. ಈ ಪ್ರೀತಿಯ ಉಲ್ಲಂಘನೆ ಹೊಚ್ಚ ಹೊಸ ಪೀಳಿಗೆಯೊಂದನ್ನು ರೂಪಿಸುತ್ತಿದೆ. ಈ ಪೀಳಿಗೆಯನ್ನು 'ಓ' ಎಂದು ಕರೆಯೋಣ. ಈ ಓ ಪೀಳಿಗೆಗೆ ಬಾಹ್ಯದಲ್ಲಿ ಎಲ್ಲವೂ ಇದೆ. ಶ್ರೀಮಂತಿಕೆ, ಯಶಸ್ಸು, ಬಣ್ಣ ಬಣ್ಣದ ಬಟ್ಟೆಗಳು, ನವನೂತನ ಕಾರುಗಳು ಎಲ್ಲವೂ ಇದೆ. ಆದರೆ ಒಳಗೆ ಮಾತ್ರ ಯಾತನೆ ತುಂಬಿದ ಶೂನ್ಯ. ಎಲ್ಲಿ ಒಂದು ಕಾಲದಲ್ಲಿ ಹೃದಯ ಪ್ರೀತಿಯಿಂದ ಮಿಡಿಯುತ್ತಿತ್ತೋ ಪ್ರೇಮದಿಂದ ತುಂಬಿತ್ತೋ ಆ ಜಾಗದಲ್ಲಿ ಗಾಯ ಗಳಿವೆ. ಆತ್ಮ ಬಂಜರುಭೂಮಿಯಾಗಿದೆ. ಕೇಂದ್ರ ಶೂನ್ಯವಾಗಿದೆ.

ಅಯ್ಯೋ! ಕೇವಲ ಮಕ್ಕಳು ಮಾತ್ರ ಈ ರೀತಿ ನರಳುತ್ತಿಲ್ಲ, ಅಪ್ಪ ಅಮ್ಮಂದಿರ ನರಳಾಟವೂ ಹೀಗೆಯೇ ಇದೆ. ಚಿಕ್ಕ ಮಗುವಿನ ದೇಹದಲ್ಲಿ ವಯಸ್ಸನ್ನು ಅರಳಿಸುತ್ತಾರೆ. ನಮ್ಮ ಬಾಲ್ಯದ ಗುಣಗಳನ್ನು ಕಿತ್ತೆಸೆಯಲಾಗುತ್ತದೆ. ಆದರೆ ಮಗುವಿನ ಗುಣಗಳು ವಯಸ್ಸಿನಲ್ಲಿ ಉಳಿಯುವುದು ಅಗತ್ಯವೆಂಬುದನ್ನು ಯಾರೂ ಮನಗಾಣುತ್ತಿಲ್ಲ.

ಮನುಷ್ಯ ಕುಟುಂಬ ತನ್ನ ಅಮೂಲ್ಯ ಪರಂಪರೆಯನ್ನು ಕಳೆದುಕೊಂಡುಬಿಟ್ಟಿದೆ ಪ್ರೀತಿಯನ್ನು ಕೂಡ. ಅದರೊಂದಿಗೆ ಬರುವ ಘನತೆ ಮತ್ತು ಅಭಿಮಾನವನ್ನೂ ಕೂಡ. ಹಿಂದಿನ ದಿನಗಳಲ್ಲಿ ಸಾಕುಬೇಕಾದಷ್ಟು ಅನುಭವಿಸುವ ಸಂಪತ್ತಿರಲಿಲ್ಲ, ಅವರ ಮನೆಗಳಲ್ಲಿ ವಿದ್ಯುತ್ ದೀಪವೂ ಇರಲಿಲ್ಲ, ಚಳಿಗಾಲದಲ್ಲಿ ಬೆಚ್ಚಗಾಗಿಸುವ ಯಂತ್ರಗಳೂ ಇರಲಿಲ್ಲ, ಆದರೆ ಅಲ್ಲಿ ಕತ್ತಲಿರಲಿಲ್ಲ, ಚಳಿಯೂ ಇರಲಿಲ್ಲ, ಮನುಷ್ಯನ ಹೃದಯದ ಬೆಚ್ಚಗಿನ ಪ್ರೀತಿ ಮತ್ತು ವಾತ್ಸಲ್ಯದಿಂದ ಹೊಳೆಯುತ್ತ ಇಡೀ ಕುಟುಂಬವನ್ನೇ ಬೆಚ್ಚಗಿಡುತ್ತಿದ್ದವು.

ಇಡೀ ಪ್ರಪಂಚದಾದ್ಯಂತ ಮಕ್ಕಳ ಸಂತೋಷವನ್ನು ಮತ್ತು ಬಾಲ್ಯದ ಭದ್ರತೆಯನ್ನು ನಿಧಾನವಾಗಿ ಗುಡಿಸಿಹಾಕಲಾಗಿದೆ. ಗೆಳೆಯರೇ, ಆದುದರಿಂದ ಈ ರಾತ್ರಿ ನಾನು ವಿಶ್ವದ ಮಕ್ಕಳ ಹಕ್ಕುಗಳನ್ನು ನಿಮ್ಮ ಮುಂದಿಡಲಿದ್ದೇನೆ. ಈ ಹಕ್ಕುಗಳನ್ನು ಪ್ರತೀ ಮನೆಯಲ್ಲಿಯೂ ಛಾಪಿಸಿರಿ.

1. ಗಳಿಸದೆಯೂ ಬೇಷರತ್ತಾಗಿ ಪ್ರೀತಿಸಲ್ಪಡುವ ಹಕ್ಕು
2. ಅನರ್ಹರಾಗಿದ್ದರೂ ರಕ್ಷಿಸಲ್ಪಡುವ ಹಕ್ಕು
3. ಏನನ್ನೂ ಗಳಿಸದೆ ಈ ಜಗತ್ತಿಗೆ ಬಂದಿದ್ದರೂ ನಾನು ಅಮೂಲ್ಯ ಎಂದು ಭಾವಿಸುವ ಹಕ್ಕು
4. ಆಸಕ್ತಿಯಿಲ್ಲದಿದ್ದರೂ ಅವರ ಮಾತುಗಳನ್ನು ಕೇಳಿಸಿಕೊಳ್ಳುವ ಹಕ್ಕು
5. ಪ್ರತಿ ರಾತ್ರಿ ಪ್ರಸಾರವಾಗುವ ವಾರ್ತಾ ವಾಹಿನಿಯ ಜೊತೆ ಸ್ಪರ್ಧಿಸಲ್ಪಡದೆ ಜೋಗುಳ ಹಾಡಿಸಿಕೊಳ್ಳುತ್ತಾ ಕತೆ ಕೇಳಿಸಿಕೊಳ್ಳುವ ಹಕ್ಕು
6. ಶಾಲೆಯಲ್ಲಿ ಮುಚ್ಚಿಡದೆ ಶಿಕ್ಷಣ ಪಡೆಯುವ ಹಕ್ಕು
7. ನಾನು ಪ್ರೀತಿಸಲ್ಪಡುತ್ತಿದ್ದೇನೆ, ಆರಾಧಿಸಲ್ಪಡುತ್ತಿದ್ದೇನೆ ಎಂದು ತಿಳಿದುಕೊಳ್ಳುವ ಹಕ್ಕು





...ಹರೇ, ಮನುಷ್ಯನ ಜ್ಞಾನದ ಅಡಿಪಾಯವೇನು ಗೊತ್ತೆ? ಪ್ರಜ್ಞೆಯು ... ಈ ಪ್ರಜ್ಞೆಯು ಮೂಲವೇನು ಗೊತ್ತೇ? ಪ್ರೀತಿ. ನೀನು ಕಪ್ಪು ...ನ್ನ ಹೊಂದಿದ್ದೀಯೋ ಅಥವಾ ಕೆಂಚು ಕೂದಲೋ ಅಥವಾ ನೀನು ...ಥವಾ ನೀನು ಬಿಳುಪು ಎಂದು ತಿಳಿಯುವ ಮೊದಲೇ, ನೀನು ...ರ್ಮದವನು ಎಂದು ಅರಿಯುವ ಮೊದಲೇ ನೀನು ಪ್ರೀತಿಸಲ್ಪಡುತ್ತಿದ್ದಿ ... ಮೊದಲು ಗೊತ್ತಾಗಬೇಕು.

ಜಗತ್ತಿಗೆ ಬರುವಾಗ ಮತ್ತು ಅದನ್ನು ಬಿಟ್ಟು ತೆರಳುವಾಗ ನಾನು ...ಡುತ್ತಿದ್ದೇನೆ ಎಂಬ ಅರಿವು ಇದ್ದರೆ ನಡುವೆ ಬರುವ ವಿಚಾರಗಳನ್ನು ...ವಾಗಿ ನಿಭಾಯಿಸಬಹುದು. ನಿಮಗೆ ಪ್ರೀತಿಸಲ್ಪಡುತ್ತಿರುವ ನೆನಪೇ ...ದಿಟ್ಟುಕೊಳ್ಳಿ, ಅದಕ್ಕಾಗಿ ಹುಡುಕುವ ನಿಮ್ಮ ಶೂನ್ಯವನ್ನು ತುಂಬುವ ...ಕ್ತಿಗೆ ತಳ್ಳಲ್ಪಡುತ್ತೀರಿ. ನೀವು ಎಷ್ಟೋ ದುಡ್ಡು ಮಾಡಬಹುದು ...ಪ್ರಸಿದ್ಧರಾಗಬಹುದು ಆದರೆ ನೀವು ಆಳದಲ್ಲಿ ಖಾಲಿಖಾಲಿಯಾಗಿರುತ್ತೀರಿ. ...ಯರೇ, ನಿಮಗಾಗಿ ಅಮೆರಿಕದ ಒಂದು ದಿನದ ಬದುಕಿನ ಚಿತ್ರಣ ...ನೆ. ಕನಿಷ್ಠ 20 ವರ್ಷದ ಒಳಗಿನ 6 ಯುವಕರು ಪ್ರತಿದಿನ ... ಮಾಡಿಕೊಳ್ಳುತ್ತಾರೆ. 20 ವರ್ಷದ ಒಳಗಿನ 12 ಮಕ್ಕಳು ...ಯುತ್ತಾರೆ. ಮಾದಕ ವಸ್ತುಗಳ ದುರುಪಯೋಗಕ್ಕಾಗಿ ದಿನವೊಂದಕ್ಕೆ ...ಮಕ್ಕಳನ್ನು ಬಂಧಿಸಲಾಗುತ್ತದೆ. ಎಳೆಯ ಅವಿವಾಹಿತ ತಾಯಂದಿರು 1352 ಮಕ್ಕಳಿಗೆ ಜನ್ಮವೀಯುತ್ತಾರೆ. ಇದೆಲ್ಲಾ ಆಗುತ್ತಿರುವುದು ...ಪಂಚದ ಸುಪ್ರಸಿದ್ಧ ಚಾರಿತ್ರಿಕವಾದ ಶ್ರೀಮಂತಿಕೆ ತುಂಬಿದ ಅಭಿವೃದ್ಧಿ ...ವ ರಾಷ್ಟ್ರವೆಂದು ಕರೆಯಲಾಗುವ ಅಮೇರಿಕಾದಲ್ಲಿ.

...ಮ, ನನ್ನ ದೇಶದಲ್ಲಿ ಹಿಂಸೆಯೆನ್ನುವುದು ಸಾಂಕ್ರಾಮಿಕವಾಗಿ ಹರಡಿದೆ. ...ಸೆಗೆ ಸರಿಸಾಟಿಯಾದ ಮತ್ತೊಂದು ಕೈಗಾರಿಕಾ ದೇಶವಿಲ್ಲ. ಹಾಗಾಗಿಯೇ ... ವಸ್ತುಗಳನ್ನು ತೆಗೆದುಕೊಳ್ಳುತ್ತಾ, ಎಳೆಯ ವಯಸ್ಸಿನಲ್ಲಿಯೇ ಮಕ್ಕಳನ್ನು ... ಅಮೆರಿಕದ ಯುವ ಜನತೆ ತಮ್ಮ ಕೋಪ ಮತ್ತು ಆಕ್ರೋಶವನ್ನು ...ಪಡಿಸುತ್ತಿದ್ದಾರೆ. ನಮಗೀಗ ಸ್ಪಷ್ಟವಾಗಿದೆ. ಈ ಕೋಪ, ಹತಾಶೆ, ...ನೋವು ಎಲ್ಲಿಂದ ಬರುತ್ತದೆ ಎಂಬ ಪ್ರಶ್ನೆಯನ್ನು ಕೇಳಬೇಕಾಗಿಲ್ಲ ...ಟಕ ಸ್ಪಷ್ಟವಾಗಿ ಗೋಚರಿಸುತ್ತಿದೆ. ನಿರ್ಲಕ್ಷ್ಯ ಹಾಗೂ ಉದಾಸೀನದ ...ಮಕ್ಕಳು ದಂಗೆ ಎದ್ದಿದ್ದಾರೆ. ತಮ್ಮನ್ನು ಗಮನಿಸಲಿ ಎಂದು ಭೋರ್ಗರೆದು ...ದ್ದಾರೆ. ನಿಮಗೀಗ ಗೊತ್ತಾಗಿರಬೇಕು. ನಾನೇಕೆ ಮಕ್ಕಳಿಗಾಗಿ ಈ ಪ್ರಮಾಣದ ...ಲವನ್ನೂ ಮತ್ತು ಸಮಯವನ್ನೂ ವ್ಯಯಿಸುತ್ತಿದ್ದೇನೆಂದು.

...ಯೊಬ್ಬರಿಗೂ ಹೇಳಿಕೊಳ್ಳಲು ತಮ್ಮದೇ ಆದ ಕಥೆಯಿರುತ್ತದೆ. ಕೆಲವರು ...ರೆ ಮಕ್ಕಳನ್ನು ಸಾಕುವುದು ಎಂದರೆ ನೃತ್ಯ ಮಾಡುವಂತೆ. ನೀನು ...ಅಡಿ ಇಡು, ಮಗು ಮತ್ತೊಂದು ಅಡಿ ಮುಂದಿಡುತ್ತದೆ. ನಾನು ...ಒಂದು ವಿಚಾರವನ್ನು ಕಂಡುಕೊಂಡಿದ್ದೇನೆ. ಅದೇನೆಂದರೆ, ಅಪ್ಪ - ...ರು ತಮ್ಮ ಮಕ್ಕಳಿಗಾಗಿ ತಮ್ಮನ್ನು ಅರ್ಪಿಸಿಕೊಳ್ಳುವಂತೆ ಮಾಡುವುದು ...ಕಥೆಯಾದರೆ, ಅದಕ್ಕಿಂತ ದೊಡ್ಡ ಕಥೆ ಎಂದರೆ ಮಕ್ಕಳು ತಮ್ಮ ಅಪ್ಪ ...ಂದಿರನ್ನು ಮರು ಒಪ್ಪಿಕೊಳ್ಳುವುದು.

...ನ್ನೂ ನೆನಪಿದೆ. ನಾನು ಚಿಕ್ಕ ಮಗುವಾಗಿದ್ದಾಗ ನಮ್ಮ ಮನೆಯಲ್ಲಿ ...ರ್ಲ್ ಎನ್ನುವ ಪುಟಾಣಿ ನಾಯಿಮರಿಯಿತ್ತು, ನಾನು ನನ್ನ ಸೋದರಿ ...ಟ್ ಅದನ್ನು ಹೊರಗೆ ಕೊಂಡೊಯ್ದಾಗಲೆಲ್ಲಾ ರಸ್ತೆಯನ್ನು ದಾಟಲೂ ...ಯಪಡುತ್ತಿತ್ತು. ಆದರೆ ನಾನು ಮತ್ತು ಜಾನೆಟ್ ಅದಕ್ಕೆ ಎಷ್ಟೊಂದು ...ರೀತಿಯನ್ನು ಧಾರೆ ಎರೆದೆವೆಂದರೆ ಅದು ತನ್ನ ಹಿಂದಿನ ಮಾಲೀಕನಿಂದ ...ಡೆದಿದ್ದ ಗಾಯಗಳನ್ನು ವಾಸಿ ಮಾಡಿದೆವು ಮತ್ತು ಕಳೆದುಕೊಂಡಿದ್ದ ...ಪ್ಪು ಮರಳಿ ತುಂಬಿದೆವು. ನಿಜವಾಗಿಯೂ ಮಕ್ಕಳು ಗಾಯಗೊಂಡ ...ನಾಯಿಮರಿಗಳು. ನಿರಂತರವಾಗಿ ಮೊಣಕಾಲೂರಿ ನಿಮ್ಮ ಪ್ರೀತಿಯನ್ನು ...ಸುತ್ತವೆ.

...ಪ್ಪ ಮಕ್ಕಳು ತಮ್ಮ ಅಪ್ಪ - ಅಮ್ಮಂದಿರನ್ನು ಮೀರಿ ಮುನ್ನಡೆಯುತ್ತಾರೆ. ... ತಮ್ಮ ಸ್ವಾತಂತ್ರ್ಯದ ಹಾದಿಯನ್ನು ಹುಡುಕಿಕೊಳ್ಳುತ್ತಾರೆ. ಆದರೆ ...ಷ್ಟ ಮಕ್ಕಳು ಅಪ್ಪ - ಅಮ್ಮಂದಿರ ಬಗ್ಗೆ ದ್ವೇಷ ಮತ್ತು ಕಹಿಯನ್ನು ...ಳ್ಳುತ್ತಾರೆ. ತಾವು ಅನುಭವಿಸಿದ ಹಿಂಸೆ, ನೋವನ್ನು ಅಪ್ಪ - ...ರಿಗೆ ಹಿಂದಿರುಗಿ ನೀಡುತ್ತಾರೆ. ಈ ಬಗೆಯ ತಪ್ಪನ್ನು ನಾವ್ಯಾರೂ ...ಡದು. ನಾನು ಪ್ರಪಂಚದ ಮಕ್ಕಳೆಲ್ಲರಲ್ಲಿಯೂ ಈ ರಾತ್ರಿ ಒಂದು ಬೇಡಿಕೆ ಇಡುತ್ತಿದ್ದೇನೆ. ನಿಮ್ಮ ಅಪ್ಪ - ಅಮ್ಮಂದಿರು ನಿಮ್ಮನ್ನು ಉದಾಸೀನ ಮಾಡಿದ್ದರೂ ನೀವು ಅವರನ್ನು ಕ್ಷಮಿಸಿಬಿಡಿ ಮತ್ತು ಅವರಿಗೆ ಸಾಧ್ಯವಾದರೆ ಕಲಿಸಿ ಹೇಗೆ ಪ್ರೀತಿಸುವುದೆಂದು.

ಈಗಾಗಲೇ ನಿಮಗೆ ಗೊತ್ತಿರುವಂತೆ ನನ್ನ ಬಾಲ್ಯ ಅಷ್ಟೇನೂ ಆದರ್ಶಪ್ರಾಯವಾಗಿರಲಿಲ್ಲ. ನನ್ನ ಅಪ್ಪ ಮತ್ತು ನನ್ನ ನಡುವೆ ಒಂದು ರೀತಿಯ ಘರ್ಷಣೆ ಇರುತ್ತಿತ್ತು, ನಮ್ಮಪ್ಪ ಗಟ್ಟಿ ಮನುಷ್ಯ. ಚಿಕ್ಕಂದಿನಿಂದಲೇ ನಮ್ಮನ್ನು ಈ ವೃತ್ತಿಗೆ ಬಲವಾಗಿ ತಳ್ಳಿಬಿಟ್ಟ. ಅವನಿಗೆ ಮಮತೆಯನ್ನು ವ್ಯಕ್ತಪಡಿಸುವುದು ಕಷ್ಟಕರವಾಗಿತ್ತು, ಅವನು ಎಂದೂ ನನ್ನನ್ನು ಪ್ರೀತಿಸುತ್ತಿದ್ದೇನೆಂದು ಹೇಳಲಿಲ್ಲ ಅಥವಾ ಒಂದು ಮೆಚ್ಚುಗೆಯ ಮಾತನ್ನೂ ಆಡಲಿಲ್ಲ. ಅವನಿಗೆ ಆಳದಲ್ಲಿ ಪ್ರತಿಯೊಂದನ್ನು ಲಾಭದಾಯಕ ವ್ಯಾಪಾರವನ್ನಾಗಿ ಮಾಡಿ ಯಶಸ್ಸನ್ನು ಕಾಣಬೇಕು ಎಂಬ ಭಾವನೆಯಿತ್ತು. ನಮ್ಮಪ್ಪ ಅದ್ಭುತವಾದ ಮ್ಯಾನೇಜರ್ ಆಗಿದ್ದ. ನಮ್ಮೆಲ್ಲಾ ವೃತ್ತಿಪರ ಯಶಸ್ಸು ಅವನಿಗೇ ಸಲ್ಲುತ್ತದೆ. ನನ್ನನ್ನು ಶೋಮ್ಯಾನ್ ಆಗಿ ರೂಪಿಸಲು ಬಹಳ ಕಷ್ಟಪಟ್ಟ ಹಾಗೂ ಕಷ್ಟಕೊಟ್ಟ.

ಆದರೆ, ನನಗೆ ಪ್ರೀತಿಯನ್ನು ತೋರಿಸುವ ನಿಜವಾದ ಅಪ್ಪನೊಬ್ಬ ಬೇಕಿತ್ತು. ಆದರೆ ನಮ್ಮಪ್ಪ ಅದನ್ನು ಮಾಡಲಿಲ್ಲ. ಒಂದೇ ಒಂದು ಸಾರಿ ಕಣ್ಣಲ್ಲಿ ಕಣ್ಣಿಟ್ಟು ಐ ಲವ್ ಯೂ ಮಗನೇ ಎಂದು ಹೇಳಲಿಲ್ಲ, ನನ್ನ ಜೊತೆ ಒಂದು ಆಟವನ್ನೂ ಆಡಲಿಲ್ಲ, ಕೂಸು ಮರಿ ಹಾಕಲಿಲ್ಲ, ಪೀಪಿ ಕೊಡಿಸಲಿಲ್ಲ. ಆದರೀಗ ನಾನು ನನ್ನ ಮಕ್ಕಳ ಬಗ್ಗೆ ಯೋಚಿಸುತ್ತಿದ್ದೇನೆ. ನನ್ನ ಮಕ್ಕಳು ಬೆಳೆದವರಾದ ಮೇಲೆ ನನ್ನ ಬಗ್ಗೆ ಪ್ರಿನ್ಸ್ ಮತ್ತು ಪ್ಯಾರಿಸ್‌ನನ್ನು ನೆನೆಸಿಕೊಳ್ಳುವಂತೆ ನನ್ನನ್ನು ನೆನೆಸಿಕೊಳ್ಳಬೇಕು. ಪ್ರತಿ ಸಂದರ್ಭದಲ್ಲಿಯೂ ಅವರನ್ನು ಹೇಗೆ ಪ್ರೀತಿಸಿದೆನೆಂದು, ಹೇಗೆ ಬೆಳೆಸಿದೆನೆಂದು ನೆನಪಿಸಿಕೊಳ್ಳಬೇಕು. ಹಾಗೆಯೇ ಅವರ ಬದುಕಿನಲ್ಲಿ ಸವಾಲುಗಳಿರಬೇಕು. ನನ್ನ ಮಕ್ಕಳು ನನ್ನ ಜನಪ್ರಿಯತೆಯ ಬಲೆಗೆ ತುತ್ತಾಗಿದ್ದಾರೆ.



ಅವರು ನಾಳೆ ಬೆಳೆದಾಗ ನನ್ನ ಜನಪ್ರಿಯತೆಯಿಂದ ಅವರ ಮೇಲೆ ಉಂಟಾಗಿರುವ ಪರಿಣಾಮಗಳನ್ನು ಅರ್ಥ ಮಾಡಿಕೊಳ್ಳಬಹುದು. ಜೊತೆಗೆ, ನನ್ನನ್ನು ಕೇಳಿಯೂ ಕೇಳಬಹುದು. ಏಕೆ ಎಲ್ಲರ ರೀತಿಯ ಬಾಲ್ಯವನ್ನು ನಮಗೆ ನೀನು ನೀಡಲಿಲ್ಲ ಎಂದು ಪ್ರಶ್ನಿಸಬಹುದು. ಆಗ ನನ್ನ ಮಕ್ಕಳನ್ನು ಕೇಳಿಕೊಳ್ಳುತ್ತೇನೆ ನನಗೆ ಬೆನಿಫಿಟ್ ಆಫ್ ಡೌಟ್ ಕೊಡಿ ಎಂದು. ಆಗ ಅವರಿಗವರೇ ಹೇಳಿಕೊಳ್ಳಬಹುದು. 'ನಮ್ಮಪ್ಪ ನಮಗೆ ಮಾಡಬಹುದಾದ್ದನ್ನೆಲ್ಲಾ ಮಾಡಿದ್ದಾನೆ. ಆದರೆ ಅವನು ವಿಶಿಷ್ಟ ಪರಿಸ್ಥಿತಿಯಲ್ಲಿರುವ ವ್ಯಕ್ತಿಯಾಗಿದ್ದ, ಅವನು ತುಂಬಾ ಸರಿಯಾಗಿಲ್ಲದಿರಬಹುದು. ಆದರೆ ಬೆಚ್ಚಗಿನ ಪ್ರೀತಿಯ ಒಬ್ಬ ಸಂಭಾವಿತನಾಗಿದ್ದ. ಎಲ್ಲಕ್ಕಿಂತ ಹೆಚ್ಚಾಗಿ ಪ್ರಪಂಚದಲ್ಲಿರುವ ಪ್ರೀತಿಯನ್ನೆಲ್ಲಾ ನಮಗೆ ಧಾರೆ ಎರೆಯಲು ಪ್ರಯತ್ನಿಸಿದ.'

ನನ್ನ ಮಕ್ಕಳು ಸಕಾರಾತ್ಮಕ ಭಾವನೆಗಳನ್ನು ಬೆಳೆಸಿಕೊಳ್ಳುತ್ತಾರೆ ಎಂದು ನಂಬಿಕೊಂಡಿದ್ದೇನೆ. ಅವರಿಗಾಗಿ ನಾನು ಮಾಡಿರುವ ತ್ಯಾಗವನ್ನು ಅರಿತುಕೊಳ್ಳಲು ಹೇಳಿದ್ದೇನೆ. ನಾನು ಮಾಡುತ್ತಿರುವ ತಪ್ಪುಗಳನ್ನು ಟೀಕಿಸದಂತೆ ಮತ್ತು ಇನ್ನು ಮುಂದೆಯೂ ಅವರನ್ನು ರೂಪಿಸುವಾಗ ಆಗಬಹುದಾದ ತಪ್ಪುಗಳನ್ನು ಗಮನಿಸದಂತೆ ಕೇಳಿಕೊಳ್ಳುತ್ತೇನೆ. ಏಕೆಂದರೆ, ನಾವೆಲ್ಲರೂ ಮತ್ತೊಬ್ಬರ ಮಕ್ಕಳೇ ಆಗಿರುತ್ತೇವೆ. ನನ್ನ ಮಕ್ಕಳು ನನ್ನನ್ನು ತಪ್ಪು ತಿಳಿಯುವುದಿಲ್ಲವೆಂದು ಭಾವಿಸುತ್ತೇನೆ ಹಾಗೂ ನನ್ನ ಮಿತಿಗಳನ್ನು ಕ್ಷಮಿಸುತ್ತಾರೆಂದು ಕೊಂಡಿದ್ದೇನೆ.

ನಮ್ಮಪ್ಪ ತನ್ನ ಮಿತಿಯಲ್ಲಿ ಎಷ್ಟು ಸಾಧ್ಯವೋ ಅಷ್ಟನ್ನು ಮಾಡಿದ. ಎಷ್ಟು ಪ್ರೀತಿಯನ್ನು ತೋರಲು ಸಾಧ್ಯವೋ ಅಷ್ಟನ್ನು ತೋರಿದ. ಅವನಿಗೆ ಅವನದೇ ಆದ ಸವಾಲುಗಳಿದ್ದವು. ನಮ್ಮಪ್ಪನ ಕುರಿತು ಕೆಲವು ವಿಚಾರಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳಬೇಕು. ನಮ್ಮಪ್ಪ ದಟ್ಟ ದರಿದ್ರ ಕುಟುಂಬದಲ್ಲಿ ಜನಿಸಿದ. ದಕ್ಷಿಣ ಅಮೆರಿಕದಲ್ಲಿ ಬೆಳೆದ. ಅವರಪ್ಪನ ಜೊತೆ 1930ರ ಆರ್ಥಿಕ ಹಿಂಜರಿತದ ಕಷ್ಟ ಸುಖಗಳನ್ನು ಅನುಭವಿಸಿದ. ನಮ್ಮ ತಾತ ನಮ್ಮಪ್ಪನನ್ನು ಬೆಳೆಸಲು ಬಹಳ ಕಷ್ಟಪಟ್ಟಿದ್ದ. ಕರಿಯ ಮನುಷ್ಯನೊಬ್ಬ ದಕ್ಷಿಣ ಅಮೇರಿಕಾದಲ್ಲಿ ಅಂತಹ ಸಂದರ್ಭದಲ್ಲಿ ಮಕ್ಕಳನ್ನು ಬೆಳೆಸುವುದು ಎಷ್ಟು ಕಷ್ಟ ಎಂಬುದನ್ನು ನೀವು ಕಲ್ಪಿಸಿಕೊಳ್ಳಲೂ ಸಾಧ್ಯವಿಲ್ಲ. ಘನತೆಯಿಂದ ವಂಚಿತವಾದ, ಭರವಸೆಯೇ ಇಲ್ಲದ ಕೇವಲ ಮನುಷ್ಯರಾಗಲು ಹೆಣಗಾಡಬೇಕಾದ ಪರಿಸ್ಥಿತಿ ಇದ್ದ ಜಗತ್ತು ನಮ್ಮಪ್ಪನನ್ನು ಯಾವಾಗಲೂ ಕೀಳಾಗಿಯೇ ಕಂಡಿತ್ತು. ಎಂಟಿವಿಯಲ್ಲಿ ಹಾಡಿದ ಮೊಟ್ಟ ಮೊದಲ ಕರಿಯ ಕಲಾವಿದ ನಾನು. ಅದೆಷ್ಟೊಂದು ದೊಡ್ಡ ವಿಚಾರವಾಗಿತ್ತು ಎಂಬುದು ನನಗಿನ್ನೂ ನೆನಪಿದೆ. ಅದು ಯಾವಾಗ ಗೊತ್ತೇ? 1980ನೇ ಇಸವಿಯಲ್ಲಿ!

ಇತ್ತೀಚೆಗೆ ನಮ್ಮಪ್ಪನ ಕಾಠಿಣ್ಯದಲ್ಲೂ ಆಳವಾದ ಪ್ರೀತಿಯಿದ್ದುದನ್ನು ಗುರುತಿಸಲು ಪ್ರಾರಂಭಿಸಿದ್ದೇನೆ. ಆ ಪ್ರೀತಿ ಅಸ್ಪಷ್ಟವಾದದ್ದಾಗಿರಬಹುದು. ಆದರೆ, ಅದು ಯಾರಿಗೂ ಕಡಿಮೆ ಇರಲಿಲ್ಲ, ನನ್ನನ್ನು ಈ ಲೋಕಕ್ಕೆ ತಳ್ಳಿದ ಏಕೆಂದರೆ ನನ್ನನ್ನು ಪ್ರೀತಿಸಿದ. ತನ್ನ ಮಗನನ್ನು ಯಾರೂ ಕೀಳಾಗಿ ಕಾಣಬಾರದೆಂಬುದೇ ಅವನ ಭಾವನೆಯಾಗಿತ್ತು, ಈಗ ನನ್ನಲ್ಲಿ ಕಹಿ ಭಾವನೆಗಳಿಲ್ಲ. ಕಾಲಕಳೆದಂತೆ ಕೋಪದ ಜಾಗದಲ್ಲಿ ಪರಿಪೂರ್ಣತೆಯನ್ನು, ದ್ವೇಷದ ಜಾಗದಲ್ಲಿ ಹೊಂದಾಣಿಕೆ ಕಂಡುಬರುತ್ತಿದೆ. ನನ್ನ ಬಾಲ್ಯದ ಕೋಪ ನಿಧಾನಕ್ಕೆ ಕ್ಷಮೆಯ ರೂಪ ತಾಳುತ್ತಿದೆ.


ಒಂದು ದಶಕದ ಹಿಂದೆ ನಾನು 'ಹೀಲ್ ದ ವರ್ಲ್ಡ್' ಎಂಬ ದತ್ತಿ ಸಂಸ್ಥೆಯನ್ನು ಸ್ಥಾಪಿಸಿದೆ. ನನಗೆ ಆಳದಲ್ಲಿ ಹಾಗನಿಸಿತ್ತು, ಯುದ್ಧ ಮತ್ತು ಜನಾಂಗೀಯ ಹತ್ಯೆ ಗಾಯಗಳಿಂದ ತುಂಬಿಹೋಗಿರುವ ಈ ಜಗತ್ತನ್ನು ನಾವು ಸಾಂತ್ವನದಿಂದ ತುಂಬಬಹುದೇ? ಅದು ಸ್ವಲ್ಪ ಕಷ್ಟ. ಆದರೆ, ನಮ್ಮ ಮಕ್ಕಳ ಗಾಯಗಳನ್ನು ನಾವು ಗುಣಪಡಿಸಬಹುದು. ಬಂದೂಕಿನೊಂದಿಗೆ ಶಾಲೆ ಪ್ರವೇಶಿಸಿ ತಮ್ಮ ಸ್ನೇಹಿತರನ್ನೇ ಕೊಲ್ಲುವಂತಹ ಮಕ್ಕಳನ್ನು ನಾವು ನಿಜವಾಗಿಯೂ ಗುಣಪಡಿಸಬಹುದು. ಅದಕ್ಕಾಗಿಯೇ ಈ ರಾತ್ರಿ ನಿಮ್ಮ ಬಳಿ ಇಷ್ಟು ಹೊತ್ತು ಮಾತಾಡುತ್ತಿದ್ದೇನೆ.

ಇದೆಲ್ಲವೂ ಸಾಧ್ಯವಾಗುವುದು ಇತರರನ್ನು ಕ್ಷಮಿಸುವುದರಿಂದ ಮಾತ್ರ. ಏಕೆಂದರೆ ಜಗತ್ತನ್ನು ಗುಣಪಡಿಸುವ ಮೊದಲು ನಮ್ಮನ್ನು ನಾವು ಗುಣಪಡಿಸಿಕೊಳ್ಳಬೇಕು. ಮಕ್ಕಳಿಗೆ ಸಾಂತ್ವನ ಹೇಳುವ ಮೊದಲು ನಮ್ಮ ಪ್ರತಿಯೊಬ್ಬರ ಒಳಗಿರುವ ಮಗುವಿಗೆ ಸಾಂತ್ವನ ಹೇಳಬೇಕು. ನನಗೆ ಗೊತ್ತು ನಾನು ಪರಿಪೂರ್ಣ ಮನುಷ್ಯನೇನಲ್ಲ ಅಥವಾ ಬೇಷರತ್ತಾಗಿ ನನ್ನ ಮಕ್ಕಳನ್ನು ಪ್ರೀತಿಸುವ ತಂದೆಯೂ ಅಲ್ಲ, ಆದರೆ ನನ್ನನ್ನು ಕಾಡುತ್ತಿರುವ ನನ್ನ ಬಾಲ್ಯದ ಭೂತಕ್ಕೆ ಮಾತ್ರ ವಿಶ್ರಾಂತಿ ಕೊಡುತ್ತೇನೆ ಮತ್ತು ನಾವೆಲ್ಲರೂ ಹಾಗೆಯೇ ಮಾಡಬೇಕೆಂದು ನಿಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಗೆಳೆಯರೇ, ನಾವೆಲ್ಲರೂ ಸೇರಿ ಹೃದಯಗಳ ಮಿಲನದ ಸ್ವರಮೇಳವೊಂದನ್ನು ನುಡಿಸುವ. ಜಗತ್ತಿನ ಎಲ್ಲಾ ಮಕ್ಕಳು ಪ್ರೀತಿಯಲ್ಲಿ ಮಿಂದೇಳುವ ಪವಾಡವನ್ನು ಕಾಣುವ. ಗಾಯಗೊಂಡ ಜಗತ್ತನ್ನು ಗುಣಪಡಿಸುತ್ತಾ ಅದರ ನೋವನ್ನು ಮಾಯ ಮಾಡುವ. ಇಂತಹ ಒಂದು ಸಂಗೀತವನ್ನು ಎಲ್ಲರೂ ಒಟ್ಟಾಗಿ ನುಡಿಸುವ. ಗಾಡ್ ಬ್ಲೆಸ್ ಯೂ ಅಂಡ್ ಐ ಲವ್ ಯೂ."

ಜಾಕ್ಸನ್ನನ ಈ ಸುದೀರ್ಘ ಭಾಷಣದಿಂದ ಇಡೀ ಆಕ್ಸ್‌ಫರ್ಡ್‌ನ ಸಭಾಂಗಣ ಸಂತೋಷ, ಹೆಮ್ಮೆ, ನೋವು, ಸಾಂತ್ವನದಿಂದ ತುಂಬಿಹೋಯಿತು. ಕೆಲವರ ಕಣ್ಣಾಲಿಗಳು ತುಂಬಿಬಂದಿದ್ದವು. ಜಾಕ್ಸನ್ನನನ್ನು ಕೇವಲ ಒಬ್ಬ ಡ್ಯಾನ್ಸರ್ ಎಂದೇ ಭಾವಿಸಿದ್ದ ಅನೇಕರಿಗೆ ಆತನೊಳಗಿನ ಘನತೆವೆತ್ತ ಮನುಷ್ಯ, ಅನುಭವ ತುಂಬಿದ ಮಾಗಿದ ಮನಸ್ಸು, ತೋರಿಕೆಯಿಲ್ಲದ ಆಳದ ಧಾರ್ಮಿಕತೆ, ಮಕ್ಕಳ ಬಗೆಗಿನ ಕಕ್ಕುಲತೆ ಒಂದು ಬಗೆಯ ಆರ್ದ್ರ ಭಾವನೆಯನ್ನು ಉಂಟುಮಾಡಿದವು. ಜಾಕ್ಸನ್ ತನ್ನ ಬಾಲ್ಯದಲ್ಲಿ ಅಪಾರ ಯಾತನೆ ಮತ್ತು ನೋವನ್ನು ಅನುಭವಿಸಿದ. ಆ ನೋವಿಗೆ ಕಾರಣನಾದ ಅಪ್ಪನನ್ನು ಕ್ಷಮಿಸಿದ. ತನ್ನ ನೃತ್ಯ ಮತ್ತು ಹಾಡಿನಿಂದ ಇಡೀ ಜಗತ್ತಿನ ಸಂಗೀತಪ್ರಿಯರ ದೊರೆಯಾಗಿ ಮೆರೆದ.

ಅವನು ಅವನಪ್ಪನ ಬಗ್ಗೆ ತೀರ್ಪು ಮಾಡಲು ಇಷ್ಟಪಡಲಿಲ್ಲ. ಅವರಪ್ಪನಲ್ಲಿನ ಸಕಾರಾತ್ಮಕ ಅಂಶಗಳನ್ನು ಮಾತ್ರ ತೆಗೆದುಕೊಳ್ಳಲು ಬಯಸಿದ. ಹಾಗೆಯೇ ನಾವು ಕೂಡ ಜಾಕ್ಸನ್ನನ ಬಗ್ಗೆ ತೀರ್ಪು ನೀಡಲು ಹೋಗಬಾರದು. ಇಡೀ ಜಗತ್ತಿನ ಜನರ ಗಾಯಗಳು ವಾಸಿಯಾಗಲಿ, ಮಕ್ಕಳಿಗೆ ಸಾಂತ್ವನ ದೊರೆಯಲಿ ಎಂದು ಆಶಿಸಿದ, ಕೋಟ್ಯಾಂತರ ಸಾವಿರ ಡಾಲರ್‌ಗಳನ್ನು ಮಕ್ಕಳ ದೇಣಿಗೆ ಸಂಸ್ಥೆಗಳಿಗೆ ನೀಡಿದ ಜಾಕ್ಸನ್ ಇನ್ನಿಲ್ಲ. ■




ಹುಬ್ಬಳ್ಳಿ: ಮದ್ವೆ ಒಲ್ಲೆ ಅಂದವಳಿಗೆ ಮಚ್ಚಿನೇಟು ಕೊಟ್ಟ!



'ನಾನು ನಿನ್ನೊಂದಿಗೆ ಮದುವೆಯಾಗಲಾರೆ' ಎಂದಿದ್ದಕ್ಕೆ ಮಚ್ಚಿನೇಟು ತಿನ್ನಬೇಕಾದ ದೌರ್ಭಾಗ್ಯ ಮಾಧವಿಯದ್ದು. ಆಕೆಯ ಮೇಲೆ ನಿರ್ದಾಕ್ಷಿಣ್ಯವಾಗಿ ಮಚ್ಚು ಬೀಸಿದ್ದು ಬೇರೆ ಯಾರೂ ಅಲ್ಲ, ಆಕೆಯ ಪ್ರಿಯತಮ ರಾಘವೇಂದ್ರ. ಸದ್ಯ ಪ್ರಾಣಾಪಾಯದಿಂದ ಪಾರಾಗಿ ಮಾಧವಿ ತೀವ್ರವಾಗಿ ಗಾಯಗೊಂಡು ಆಸ್ಪತ್ರೆ ಸೇರಿದರೆ, ರಾಘವೇಂದ್ರ ಕಿಂಚಿತ್ತೂ ಪಶ್ಚಾತ್ತಾಪ ಪಡದೇ ಪೊಲೀಸ್ ಸ್ಟೇಶನ್‌ಗೆ ಹೋಗಿ ಶರಣಾಗಿ ಜೈಲು ಸೇರಿದ್ದಾನೆ.

ಇದು ಮೊನ್ನೆ ಹುಬ್ಬಳ್ಳಿ ಸಮೀಪ ನೂಲ್ವಿ ಗ್ರಾಮದಲ್ಲಿ ನಡೆದ ಘಟನೆಯ ಸಾರಾಂಶ. ಮರಾಠ ಜಾತಿಗೆ ಸೇರಿದ ರಾಘವೇಂದ್ರ ಹಾಗೂ ಬ್ರಾಹ್ಮಣ ಜಾತಿಗೆ ಸೇರಿದ ಮಾಧವಿ ಕುಲಕರ್ಣಿ ಇಬ್ಬರೂ ಅಕ್ಕಪಕ್ಕದ ಮನೆಯವರು. ಬಾಲ್ಯದಿಂದಲೂ ಒಬ್ಬರನ್ನೊಬ್ಬರು ಚೆನ್ನಾಗಿ ಬಲ್ಲವರು. ಹತ್ತನೇ ಇಯತ್ತೆ ವರೆಗೆ ಜೊತೆಗೂಡಿ ಓದಿದವರು. ರಾಘವೇಂದ್ರ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಡುಮ್ಕಿ ಹೊಡೆದು ಬೀದಿ ಅಲೆಯುತ್ತಾ ಕಂಪ್ಯೂಟರ್ ರಿಪೇರಿ ಕೆಲಸ ಶುರು ಮಾಡಿಕೊಂಡರೆ ಶ್ಯಾಣೆಯಾಗಿದ್ದ ಮಾಧವಿ ಎಸ್ಸೆಸ್ಸೆಲ್ಸಿ ಪಾಸಾಗಿ ಪಿಯುಸಿ, ಬಿ.ಎ., ಎಂಎ, ಎಂಎಡ್ ತನಕ ಓದಿಕೊಂಡಳು. ಕಾಲೇಜಿನಲ್ಲಿ ದೂರವಾದರೇನಂತೆ? ಮನೆ ಅಕ್ಕಪಕ್ಕ ಅಲ್ಲವೇ? ಹಾಗಾಗಿ ಮಾಧವಿ ಮತ್ತು ರಾಘವೇಂದ್ರ ನಡುವಿನ ಸಂಪರ್ಕ ಕಳಚಲಿಲ್ಲ. ಈ ಸುದೀರ್ಘ ಅವಧಿಯಲ್ಲಿ ಅವರಿಬ್ಬರ ನಡುವಿನ ಪರಿಚಯ ಸ್ನೇಹಕ್ಕೂ, ಸ್ನೇಹ ಸಲುಗೆಗೂ, ಕೊನೆಗೆ ಸಲುಗೆ ಪ್ರೇಮಕ್ಕೂ ತಿರುಗಿದ್ದು ನಿಜ.



ರಾಘವೇಂದ್ರ

ಸಮಸ್ಯೆ ಶುರುವಾಗಿದ್ದೇ ಇಲ್ಲಿ. ಇಬ್ಬರೂ ಜೊತೆಗೂಡಿ ಸಿನೆಮಾಕ್ಕೆ ಹೋಗೋದು, ಪಿಕ್‌ನಿಕ್ ಹೋಗೋದು, ಪಾರ್ಕುಗಳನ್ನು ಸುತ್ತೋದು ನಡೆಸೇ ಇದ್ದರು. ಈ ವಿಚಾರ ಮಾಧವಿಯ ಅಜ್ಜ-ಅಜ್ಜಿಗೆ ಗೊತ್ತಾಯಿತು. ಒಂದು ದಿನ ಅಜ್ಜ ಮಾಧವಿಯನ್ನು ಕೂರಿಸಿಕೊಂಡು "ನಾವು ಬ್ರಾಹ್ಮಣರು, ಅಂವಾ ನೋಡಿದ್ರ ಮರಾಠಿ. ನೀ ಹಿಂಗ್ ಅವ್ನಕೂಡ ಅಡ್ಡಾಡೋದು ಚೆಂದ್ ಕಾಣಲ್ಲ, ನಮ್ ಜಾತಿ ಕೆಡಿಸ್‌ಬ್ಯಾಡ. ಒಳ್ಳೇ ವರಾ ನೋಡಿ ನಿಂಗ್ ಮದ್ವಿ ಮಾಡ್ತೀವಿ" ಅಂತ ಬುದ್ಧಿ ಹೇಳಿದರು. ಆದರೆ, ಪ್ರೇಮದ ಗುಂಗಿನಲ್ಲಿದ್ದ ಮಾಧವಿಗೆ ಅಜ್ಜನ ಮಾತು ಒಂದು ಕಿವಿಯೊಳಗಿನಿಂದ ಹೋಗಿ ಮತ್ತೊಂದು ಕಿವಿಯೊಳಗಿನಿಂದ ಹೊರಬಂದಿತ್ತಷ್ಟೆ. ಹಾಗಾಗಿ, ಮಾಧವಿ-ರಾಘವೇಂದ್ರರ ಪ್ರೇಮ ಪಯಣ ಮುಂದುವರೆದಿತ್ತು.

ಕೊನೆಗೆ ಆಕೆಯ ತಾಯಿ ಬುದ್ಧಿ ಹೇಳಲು ಪ್ರಯತ್ನ ಮಾಡಿದಳು. ಮಾಧವಿಗೆ ಅಪ್ಪ ಇಲ್ಲ, ಆದ್ದರಿಂದ ಶಿಕ್ಷಕಿಯಾಗಿ ಕೆಲಸ ಮಾಡುತ್ತಿರುವ ಆಕೆಯ ಅಮ್ಮನೇ ಮನೆಯ ಜವಾಬ್ದಾರಿ ಹೊತ್ತುಕೊಂಡಿದ್ದಳು. "ಹಿಂಗ್ ನೋಡಿದ್ರ ಎಮ್ಎ, ಎಂಎಡ್ ಮಾಡಿಯಾ. ಅಂವಾ ನೋಡಿದ್ರೆ ಎಸ್ಸೆಲ್ಸಿ ಫೇಲು. ಅವ್ನ ಜೊತಿ ಮದಿವ್ಯಾದ್ರ ನಿನ್‌ಬಾಳ್ ನೆಟ್ಟಗಾಗಂಗಿಲ್ಲ" ಎಂತ ತಾಯಿ ಕೂಡ ಮಾಧವಿಗೆ ಮನವರಿಕೆ ಮಾಡಲು ಪ್ರಯತ್ನ ಮಾಡಿದಳು. ಅದೂ ಆಕೆಯ ತಲೆಗೆ ಹೋಗಲಿಲ್ಲ. ಆದರೂ ಹೆತ್ತವರ, ಅಜ್ಜಅಜ್ಜಿಯ ಮಾತು ಕೇಳಬೇಕೋ, ರಾಘವೇಂದ್ರನ ಜೊತೆ ಹೋಗಬೇಕೋ ಎಂಬ ಗೊಂದಲ ಮಾತ್ರ ಆಕೆಯಲ್ಲಿ ಶುರುವಾಗಿತ್ತು. ಕೊನೆಗೊಂದು ನಿರ್ಧಾರ ಮಾಡಿಯೇ ಬಿಟ್ಟಳು. ಒಂದು ದಿನ ರಾಘವೇಂದ್ರನನ್ನು ಭೇಟಿ ಮಾಡಿ, "ನಮ್ ಮನ್ಯಾಗ ಎಲ್ರೂ ಬ್ಯಾಡ ಅಂತಾರ. ನಾವು ಮದ್ವೆ ಆಗೋದು ನಮ್ ಹಣೆಬರದಲ್ಲಿ ಬರ್ದಿಲ್ಲ, ನಾವಿಬ್ರೂ ಬ್ಯಾರೆ ಬ್ಯಾರೆ ಆಗ್ಬಿಡೋಣ" ಎಂದು ಹೇಳೇ ಬಿಟ್ಟಳು. ಅದಕ್ಕೆ ರಾಘವೇಂದ್ರ ಸಿದ್ಧವಿರಲಿಲ್ಲ. "ಆದ್ಹ್ಯಾಂಗ್ ಆಕತಿ? ಇಬ್ರೂ ಕೂಡಿ ಸಿನೆಮಾ ನೋಡೇವಿ. ಪಾರ್ಕ್ ತಿರುಗೇವಿ. ಊರು-ಕೇರಿ ಅಂತ ಪಿಕ್‌ನಿಕ್ ಮಾಡೇವಿ. ನಾನ್ ನಿನ್ ಬಿಟ್ ಇರಾಂಗಿಲ್ಲ. ನೀನೇನಾರ ಬೇರೆಯವ್ನ ಜೊತೆ ಮದ್ವಿಯಾದ್ರ ನಿನ್ ಮುಖಕ್ಕೆ ಆಸಿಡ್ ಹಾಕ್ಬಿಡ್ತೇನಿ" ಎಂದು ಗದರಿಸಿದ್ದ. ಇದು ಎರಡು ವರ್ಷದ ಹಿಂದಿನ ಮಾತು.

ಮಗಳು ತನ್ನ ಮಾತಿಗೆ ಒಪ್ಪಿದ್ದೇ ದೊಡ್ಡ ವಿಚಾರವಾಗಿತ್ತು. ಆದರೂ ರಾಘವೇಂದ್ರ ಆಕೆಯನ್ನು ಹಿಂಬಾಲಿಸುವುದನ್ನು ಬಿಟ್ಟಿರಲಿಲ್ಲ. ಅವನ ಕಾಟ ತಪ್ಪಿಸಿಕೊಳ್ಳುವುದಕ್ಕೆ ಮಾಧವಿಯ ತಾಯಿ ಮನೆ ಬದಲಿಸಿ ಹುಬ್ಬಳ್ಳಿಗೆ ಬಂದು ಬಾಡಿಗೆ ಮನೆಯಲ್ಲಿದ್ದಳು. ಮಗಳ ಭವಿಷ್ಯವನ್ನು ಗಮನದಲ್ಲಿಟ್ಟುಕೊಂಡು ಈ ಕೆಲಸ ಮಾಡಿದ್ದಳು. ಆದರೆ, ರಾಘವೇಂದ್ರನಿಗೆ ಮಾಧವಿಯ ಹುಚ್ಚು ಬಿಟ್ಟಿರಲಿಲ್ಲ, ಅದ್ಹೇಗೋ ಹುಬ್ಬಳ್ಳಿಯಲ್ಲಿ ಆಕೆ ಇರೋ ಮನೆಯನ್ನು ಪತ್ತೆ ಮಾಡಿದ. ಮಾಧವಿಯ ತಾಯಿ ಶಾಲೆಗೆ ಹೋಗಿರುವ ಸಂದರ್ಭ ನೋಡಿ, ಅಕ್ಕ ಪಕ್ಕದ ಮನೆಯವರೂ ಇಲ್ಲದ ಸಮಯ ನೋಡಿ ಉದ್ದವಾದ ಮಚ್ಚು ಹಿಡಿದುಕೊಂಡು ಮನೆಗೆ ದಾಳಿಯಿಟ್ಟ. ಈತ ಬರುವುದನ್ನು ನೋಡಿದ ತಕ್ಷಣವೇ ಮಾಧವಿ ಕೋಣೆಯೊಳಗೆ ಹೋಗಿ ಬಾಗಿಲು ಹಾಕಿಕೊಂಡಳು. ಆದರೆ, ರಾಘವೇಂದ್ರ ಒಂದು ರೀತಿಯಲ್ಲಿ ಅರೆಹುಚ್ಚನಂತಾಗಿದ್ದ. ಹೊರಗಡೆ ಕುಳಿತಿದ್ದ ಅಜ್ಜನ ಕುತ್ತಿಗೆಗೆ ಮಚ್ಚು ಇಟ್ಟು "ನೀ ಹೊರಗ್ ಬರ್ಲಿಲ್ಲಾಂದ್ರೆ ನಿನ್ ಅಜ್ಜನ್ ಹೆಣಾ ತೆಗಿತೀನಿ" ಅಂತ ಮಾಧವಿಗೆ ಹೆದರಿಸಿದ. ಹೇಗೂ ತನ್ನನ್ನು ಪ್ರೀತಿಸಿದವನಲ್ಲವೆ? ಏನೂ ಮಾಡೋದಿಲ್ಲ ಎಂದು ತಪ್ಪಾಗಿ ಭಾವಿಸಿ ಮಾಧವಿ ಹೊರಗೆ ಬಂದಳು. ಹಿಂದುಮುಂದು ನೋಡದೆ ಆಕೆಯ ಕುತ್ತಿಗೆಗೆ, ತಲೆಗೆ ಮಚ್ಚು ಬೀಸಿಬಿಟ್ಟ. ಮಾಧವಿ ರಕ್ತದ ಮಡುವಿನಲ್ಲಿ ನಿಸ್ತೇಜವಾಗಿ ಬಿದ್ದಳು. ಆಕೆ ಸತ್ತೇ ಹೋದಳೆಂದು ಭಾವಿಸಿ ಸೀದಾ ಪೊಲೀಸ್ ಸ್ಟೇಶನ್‌ಗೆ ಹೋದ ರಾಘವೇಂದ್ರ ತನ್ನ ಮಚ್ಚಿನೊಂದಿಗೆ ಶರಣಾಗಿ ತಾನು ಮಾಧವಿಯನ್ನು ಕೊಲೆ ಮಾಡಿರುವುದಾಗಿ ಹೇಳಿದ. ತಕ್ಷಣವೇ ಕಾರ್ಯ ಪ್ರವೃತ್ತರಾದ ವಿದ್ಯಾನಗರ ಪೊಲೀಸರು ಮಾಧವಿಯಿನ್ನೂ ಬದುಕಿರುವುದನ್ನು ನೋಡಿ ಆಸ್ಪತ್ರೆಗೆ ಸೇರಿಸಿದ್ದಾರೆ. ಅಂತೆಯೇ ರಾಘವೇಂದ್ರನ ಮೇಲೆ ಕೊಲೆಯತ್ನದ ಕೇಸು ದಾಖಲಿಸಿ ಜೈಲಿಗಟ್ಟಿದ್ದಾರೆ.

ಅಯ್ಯೋ ಪ್ರೇಮವೇ...

● ಹುಬ್ಬಳ್ಳಿಯಾಂವ

ಕೊಲೆಗಾರ ಸ್ವಾಮೀಜಿ?

ಈ ಮನೆಹಾಳ ಮಹದೇವಸ್ವಾಮಿಯು ಕೊಲೆಯ ಆರೋಪವೊಂದನ್ನು ಹೊತ್ತುಕೊಂಡಿದ್ದಾನೆ. ಆ ಕ... ಈತ ಆಗಾಗ್ಗೆ ಕೋರ್ಟು, ಕಚೇರಿ ಅಲೆಯುತ್ತಲೇ ಇರುತ್ತಾನೆ. ರೇಚಂಬಳ್ಳಿ ಗ್ರಾಮಪಂಚಾಯತಿಯ ಸದಸ್ಯ... ಬಾಬು ಎಂಬಾತ ಈ ಸ್ವಾಮಿಯ ಕಾರ್‌ಡ್ರೈವರ್ ಆಗಿದ್ದ, ಸ್ಕ್ಯಾಂಡಲ್ ಸ್ವಾಮಿ ತನ್ನ ಅಕ್ರಮಾಂತರ ... ಈ ಬಾಬುವಿನ ಬಳಿ ಜೋಪಾನವಾಗಿ ಡಿಪಾಸಿಟ್ ಮಾಡುತ್ತಾ ಬಂದಿದ್ದ, ಸ್ವಾಮೀಜಿಯ ಹಲ್ಕಟ್ ಕೆಲಸ... ಅವ್ಯವಹಾರಗಳೆಲ್ಲ ಬಾಬುಗೆ ಗೊತ್ತಿತ್ತು, ಅದೊಂದು ದಿನ ತಮಿಳ್ನಾಡಿಗೆ ಹೋದ ಬಾಬು ಲಾಡ್ಜ್ ಒಂದ... ಹೆಣವಾಗಿ ನೇತಾಡುತ್ತಿದ್ದ. ಈ ಸಾವಿನ ಹಿಂದೆ ಮಹದೇವಸ್ವಾಮಿಯ ಕೈವಾಡವಿದೆ ಎಂದು ಗ್ರಾಮಸ್ಥರು ಕಂಪ್ಲೇ... ಮಾಡಿದರು. ಸ್ವಾಮಿಗಳ, ರಾಜಕಾರಣಿಗಳ ಬೆಂಬಲವಿರುವ ದುಪಾಲಿ ಮಹಾದೇವಸ್ವಾಮಿ ಮಾತ್ರ ತ... ಹಳ್ಳಹಿಡಿಸುತ್ತಾ ಪಾರಾಗುತ್ತಲೇ ಬರುತ್ತಿದ್ದಾನೆ.

ಚಾಮರಾಜನಗರ ಮಹದೇವ ಸ್ವಾಮೀಜಿ ಮಠದಲ್ಲೇ ಎಲ್ಲ ಚಟ

ಮಠದಿಂದ ಮಠಕ್ಕೆ, ಊರಿಂದ ಊರಿಗೆ ಸುತ್ತುತ್ತಾ ಸಾಗಿದ ಈ ಸ್ಯಾಡಿಸ್ಟ್ ಮಹದೇವಸ್ವಾಮಿ ಸ್ವಾಮಿಗೆ ಸುತ್ತೂರು ಶ್ರೀಗಳು ಅದೇಕೆ ಅನುಕಂಪ ತೋರಿಸುತ್ತ ಬಂದರೋ ಗೊತ್ತಿಲ್ಲ. ದೇವನೂರಲ್ಲಿ ಒದೆಬಿದ್ದ ಮೇಲೆ ಸ್ವಾಮಿಯ ಲೊಕೇಷನ್ ಶಿಫ್ಟ್ ಆಯ್ತು. ಆಗಲೇ ರೇಚಂಬಳ್ಳಿ ಮಠಕ್ಕೆ ವಕ್ಕರಿಸಿದ್ದ... ಕೊನೆಗೆ ಇಲ್ಲೂ ಒದೆತಿಂದು ರೈಟ್ ಹೇಳಿದ್ದಾನೆ. ಈಗವನ ನೆರವಿಗೆ ಸೋಮನಹಳ್ಳಿ ಮಠದ ಸ್ವಾಮೀಜಿ ನಿಂತಿದ್ದಾರೆ!

ಇದು ಚಾಮರಾಜನಗರ ತಾಲ್ಲೂಕಿನ ರೇಚಂಬಳ್ಳಿ ಗ್ರಾಮ. ಶ್ರೀ ಸಿದ್ದ ಮಲ್ಲೇಶ್ವರ ಪಟ್ಟದ ಮಠದ ಮುಂದಿನ ಗೇಟಿನ ಬಳಿ ಕಾರೊಂದು ನಿಂತಿದೆ. ಕಾರಲ್ಲಿ ವೀರಪುರದ ಅಮಾಯಕ ಹುಡುಗಿಯೊಬ್ಬಳಿದ್ದಾಳೆ. ಬಲಾತ್ಕಾರದಿಂದ ಅವಳೊಂದಿಗೆ ಲೈಂಗಿಕ ಕ್ರಿಯೆಯಲ್ಲಿ ತೊಡಗಿದ್ದಾನೆ ಮಹದೇವಸ್ವಾಮಿ. ಊರಿನ ಜನಕ್ಕೆ ಇದು ಗೊತ್ತಾಗಿ ಅಟಕಾಯಿಸಿಕೊಂಡಿದ್ದಾರೆ. ಸಿಪಿಐ ಪ್ರತಾಪ್‌ರೆಡ್ಡಿಯ ನೆರವಿನಿಂದ ಒದೆಗಳನ್ನು ತಪ್ಪಿಸಿಕೊಳ್ಳುತ್ತಾನೆ ಮಹದೇವಸ್ವಾಮಿ. ಆದರೆ ಕೊನೆಗೆ ಗ್ರಾಮಸ್ಥರ ಆಕ್ರೋಶದ ಕಾರಣದಿಂದ ಈತ ಮಠಬಿಟ್ಟು ಓಡಬೇಕಾಗುತ್ತದೆ!

ಈ ಮಹದೇವಸ್ವಾಮಿ ರೇಚಂಬಳ್ಳಿ ಮಠದ ಸ್ವಾಮೀಜಿ! ಈ ಕಚ್ಚೆ ಹರುಕ ಮಹಾತ್ಮನನ್ನು ಈ ಮಠಕ್ಕೆ ತಂದು ಹಾಕಿದ 'ಶ್ರೇಯಸ್ಸು' ಸುತ್ತೂರು ದೇಶಿಕೇಂದ್ರ ಸ್ವಾಮಿಗಳಿಗೆ ಸಲ್ಲುತ್ತದೆ! ಚಾಮರಾಜನಗರ ಜಿಲ್ಲೆಯಲ್ಲಿರುವ ನೂರಾಅರವತ್ತಕ್ಕೂ ಹೆಚ್ಚಿನ ಲಿಂಗಾಯತ ಮಠಗಳ ಅಧಿಪತ್ಯ ಹೊಂದಿರುವ ಸುತ್ತೂರು ಕೇಂದ್ರ ರೇಚಂಬಳ್ಳಿ ಮಠಕ್ಕೆ ಮಹದೇವಸ್ವಾಮಿ ಎಂಬ ಕ್ರಿಮಿನಲ್ ಸ್ವಾಮಿಯನ್ನು ಪಟ್ಟಕ್ಕೇರಿಸಿದಾಗಿನಿಂದ ಇಲ್ಲಿ ಬಡ್ಡಿ ವ್ಯವಹಾರ, ಲೈಂಗಿಕ ತಮಾಷಗಳು ನಡೆಯುತ್ತಲೇ ಬಂದವು. ಮೊದಮೊದಲಿಗೆ ಭಕ್ತಾದಿಗಳಿಂದ ಗೌರವ ಸಂಪಾದಿಸಿದ ಮಹದೇವಸ್ವಾಮಿ ಮುಂದಿನ ದಿನಗಳಲ್ಲಿ ಭಕ್ತಾದಿಗಳಿಂದ ಅಪಾರ ಪ್ರಮಾಣದ ದಾನ ಪಡೆದು, ಆ ಹಣವನ್ನು ಬಡ್ಡಿಗೆ ಬಿಡಲು ಶುರುಮಾಡಿದ. ಬಡ್ಡಿಯಿಂದ ಬಂದ ಹಡಬೆ ಹಣ ಹೆಚ್ಚಿದಂತೆಲ್ಲ ಈತನ ಲೈಂಗಿಕ ಕುಚೇಷ್ಟೆಗಳೂ ಶುರುವಾದವು.

ಮಹದೇವಸ್ವಾಮಿಯ ಈ ಎಲ್ಲ ಹಲ್ಕಟ್ ಕೆಲಸಗಳಿಗೆ ಸಾಥ್ ಕೊಟ್ಟವನು ಇದೇ ಗ್ರಾಮದ ಕುಮಾರ ಎನ್ನುವ ತಲೆಹಿಡುಕ. ಸ್ವಾಮೀಜಿಗೆ ತಲೆಹಿಡಿಯುತ್ತಲೇ ಭಕ್ತಾದಿಗಳ ದುಡ್ಡು ಎತ್ತಿಕೊಂಡ ಈ ಕುಮಾರ ಮಠದ ಎದುರಿಗೆ ಒಂದು ಬಡ್ಡಿ ವ್ಯಾಪಾರದ ಅಂಗಡಿಯನ್ನೇ ತೆರೆದುಬಿಟ್ಟ. ಈಗ ಸ್ವಾಮೀಜಿ ಊರು ಬಿಟ್ಟಾಗಿದೆ. ಆದರೆ ಆತನ ಶನಿಸಂತತಿಯಂತಿರುವ ಕುಮಾರಗಳಿಗೆ ಬುದ್ಧಿ ಕಲಿಸುವುದು ಬಾಕಿ ಇದೆ.

ಲವ್ ಗುರು.... ಸೆಕ್ಸ್ ಗುರು....

ಈ ಮಹದೇವಸ್ವಾಮಿಯ ಫ್ಲ್ಯಾಷ್‌ಬ್ಯಾಕ್ ಸ್ಟೋರಿ ಕೇಳಿಬಿಟ್ಟರೆ ನೀವು 'ಲವ್ ಗುರು', 'ಸೆ... ಗುರು' ಅಂತೆಲ್ಲ ಬಯ್ಯುತ್ತೀರಿ. ರೇಚಂಬಳ್ಳಿಯ ಮಠಕ್ಕೆ ಬರುವ ಮೊದಲು ಗುಂಡ್ಲುಪೇಟೆ ತಾಲ್ಲೂಕಿನ ಬೊಮ್ಮನಹಳ್ಳಿ ಮಠದಲ್ಲೂ ಖಾವಿ ತೊಟ್ಟೇ ಕಾಮಕೇಳಿ ನಡೆಸಿ ಅಲ್ಲಿಂದ ಒದ್ದೋಡಿಸಲ್ಪಟ್ಟಿದ್ದ. ನಂತರ ಈ ಕಾಮುಕ ಸ್ವಾ... ನಂಜನಗೂಡು ತಾಲ್ಲೂಕಿನ ಬೆಳಗೆರೆ ಮಠಕ್ಕೆ ಜಂ... ಮಾಡಿದ. ಅಲ್ಲೂ ಗೋಲ್‌ಮಾಲ್ ಮಾಡಿ, ಮಾಲ್‌ಮಾಲ್ ಎಂದು ಮಜಾ ಮಾಡಿ ಗಂಡಾಂತರಕ್ಕೆ ಸಿಕ್ಕಿಕೊಂಡ.

ಆಗ ಸಚಿವನಾಗಿದ್ದ 'ಬೆಂಕಿ' ಮಹಾದೇವನ ರಕ್ಷಣೆ ಪಡೆದು ಹೇಗೋ ಪಾರಾದ. ಮುಂದೆ ಇಂತಹುದೇ ಹಲ್ಕಟ್ ಕೆಲಸಗಳಿಂದಾಗಿ ಬೆಳಗೆರೆ ಜನರಿಂದ ಸಖತ್ ಒದೆ ತಿಂದ. ಬೆಳಗೆರೆ ಮಠದಲ್ಲೇ ಅಮಾಯಕ ಹುಡುಗಿಯೊಬ್ಬಳಿಗೆ ಹೊಟ್ಟೆ ಬರಿಸಿಬಿಟ್ಟಿದ್ದ. ಜನರೆಲ್ಲ ಸೇರಿ ಆ ಹುಡುಗಿಯನ್ನು ಮದುವೆ ಆಗುವಂತೆ ಈ ಸೆಕ್ಸ್‌ಸ್ವಾಮಿಗೆ ಮುಗಿಬಿದ್ದರು. ಆಗ ಬೆಂಕಿ ಮಹಾದೇವನ ನೆರವಿನಿಂದ ಇಡೀ ಕೇಸನ್ನೇ ಮುಚ್ಚಿಹಾಕಿಸಲಾಯ್ತು.

ಲೊಕೇಷನ್ ಶಿಫ್ಟ್!

ಇಷ್ಟೆಲ್ಲ ಒದೆ ಬಿದ್ದರೂ, ಅವಮಾನವಾದರೂ ಮಹದೇವಸ್ವಾಮಿ ಮಾತ್ರ ಮಠಗಳನ್ನು ಬಿಡಲಿಲ್ಲ. 'ಮಠದಲ್ಲೇ ಚಟ' ಎಂಬ ನೀತಿಯ ಈ ಸ್ವಾಮಿ ಮುಂದೆ ದೇವನೂರು ಮಠಕ್ಕೆ ಅಟಕಾಯಿಸಿಕೊಂ... ಅಲ್ಲೂ ತನ್ನ ಹುಟ್ಟುಗುಣವನ್ನು ಪ್ರದರ್ಶಿಸಿ ಒದೆಸಿಕೊಂಡು ಊರುಬಿಟ್ಟ.

ಹೀಗೆ ಮಠದಿಂದ ಮಠಕ್ಕೆ, ಊರಿಂದ ಊ... ಸುತ್ತುತ್ತಾ ಸಾಗಿದ ಈ ಸ್ಯಾಡಿಸ್ಟ್ ಸ್ವಾಮಿಗೆ ಸುತ್ತೂರು ಶ್ರೀಗಳು ಅದೇಕೆ ಅನುಕಂಪ ತೋರಿಸುತ್ತ ಬಂದರೋ ಗೊತ್ತಿಲ್ಲ. ದೇವನೂರಲ್ಲಿ ಒದೆಬಿದ್ದ ಮೇಲೆ ಸ್ವಾಮಿಯ ಲೊಕೇಷನ್ ಶಿಫ್ಟ್ ಆಯ್ತು. ಆಗಲೇ ರೇಚಂಬಳ್ಳಿ ಮಠಕ್ಕೆ ವಕ್ಕರಿಸಿದ... ಕೊನೆಗೆ ಇಲ್ಲೂ ಒದೆತಿಂದು ರೈಟ್ ಹೇಳಿದ್ದಾನೆ. ಈಗವನ ನೆರವಿಗೆ ಸೋಮನಹಳ್ಳಿ ಮಠದ ಸ್ವಾಮೀಜಿ ನಿಂತಿದ್ದಾರೆ!

ಈತನ ಹಾವಳಿಗೆ ಸಿಗಲಿರುವ ಮುಂದಿನ 'ಪಾಪಿ' ಮಠ ಯಾವುದೋ? ಅದಾಗುವ ಮು... ಈ ಖಾವಿ ಸ್ವಾಮಿಯನ್ನು ಖಾಕಿಗಳು ವಿಚಾರಣೆಗೊಳಪಡಿಸಬೇಕಾಗಿದೆ.

● ಚಿಕ್ಕಮಾ...

...ಲೋವೀರಾ ಕೃಷಿಯ ಹೆಸರಿನಲ್ಲಿ ...ರೈತರಿಗೆ ಬಹುಕೋಟಿ ವಂಚನೆ

...ಷಧೀಯ ಗುಣಗಳಿರುವ ಅಲೋವೀರಾ ...ಕೃಷಿಯ ಹೆಸರಲ್ಲಿ ರಾಜ್ಯದ ಏಳೆಂಟು ಜಿಲ್ಲೆಗಳ ... ರೈತರ ಕಣ್ಣಿಗೆ ಮಂಕುಬೂದಿ ಎರಚಿ, ನಾಲ್ಕೇ ...ತ್ತಾರು ಕೋಟಿ ರೂ.ಗಳ ಪಂಗನಾಮ ಹಾಕಿ ...ಣದಂತೆ ಪರಾರಿಯಾಗಿರುವ ಗೋಲ್‌ಮಾಲ್ ...ಂವರ ಭಾರೀ ವಂಚನೆ ಪ್ರಕರಣ ಇದೀಗ ...ಗಿದೆ. ಕೈಗೆ ಬಂದ ಬೆಳೆಯ ಬೆಲೆಗಿಂತ, ಮಾಡಿದ ...ಕ್ಕಾಗಿ ಆಕಾಶ ನೋಡುತ್ತಿರುವ ರೈತಾಪಿ, ರೈತರ ...ಪ್ರಮಾಣವಚನ ಸ್ವೀಕರಿಸಿದ್ದೂ ರೈತರಿಗೇನಾಗುತ್ತಿದೆ ...ಣೋಡದ ಮುಖ್ಯಮಂತ್ರಿ, ಕೃಷಿಕರಿಗೂ ತಮಗೂ ...ಇಲ್ಲದಂತೆ ನಿರ್ಲಿಪ್ತವಾಗಿ ಕೂತಿರುವ ಕೃಷಿ ...ಕೃಷಿ ವಿಶ್ವವಿದ್ಯಾಲಯಗಳಿದ್ದಲ್ಲಿ, ಎಲ್ಲಾ ಆಧುನಿಕ ...ು, ರೈತರ ಪರಿಸ್ಥಿತಿಗಳನ್ನೂ ತಿಳಿದ ಕೃಷಿ ...ರೇಟ್ ಜಗತ್ತಿನ ಖದೀಮರು ಏನು ಮಾಡಲು ...ಎಂಬುದಕ್ಕೆ, ಇದೊಂದು ಸಣ್ಣ ...ಸಣೆಯಾಗಬಹುದಷ್ಟೇ.


...ಮೆ ಅವಧಿ, ಅಧಿಕ ಇಳುವರಿ"

...ದೆ ಆ ಕಂಪನಿಯ ಲೋಗೋ ಮೇಲಿನ ...ು. ಅದು ನಿಜ ಕೂಡ. ಜುವಾರಿ ...ಪ್ಲಾನ್‌ಟೆಕ್ ಪ್ರೈವೇಟ್ ಲಿ. ಹೆಸರಿನ ಆ ...ಮಾಲ್ ಕಂಪನಿ ನಿಜಕ್ಕೂ ನಾಲ್ಕೇ ತಿಂಗಳ ...ಅವಧಿಯಲ್ಲಿ ಅತ್ಯಧಿಕ ಇಳುವರಿ ಪಡೆದು, ...ಆಸೆಗೆ ಬಿದ್ದ ರೈತರಿಗೆ ಟೋಪಿ ಹಾಕಿ ...ದೆ. ಇಲ್ಲಿ ಬಲೆಗೆ ಬಿದ್ದವರಾರೂ ಅಮಾಯಕ ...ು ಅಲ್ಲ. ಹಲವಾರು ಮಂದಿ ಹತ್ತಿಪ್ಪತ್ತು ...ಮೀನಿದ್ದೂ ರಾಜಕೀಯವಾಗಿಯೂ ಪ್ರಭಾವ ...ರುವವರೂ ಇದ್ದಾರೆ. ಅಂತಹವರಿಗೂ ...ರಿಸಿರುವ ಖದೀಮರು ಪಕ್ಕದ ಆಂಧ್ರ ...ವರೇ ಎಂದು ಹೇಳಲಾಗುತ್ತಿದೆ.

...ಮ್ಮಾ ನಡೆದದ್ದು ಹೇಗೆಂದರೆ....


...8 ರ ಅಕ್ಟೋಬರ್‌ನಲ್ಲಿ ರೈತರ ನಡುವೆ ಚಾಲ್ತಿ ...'ಜುವಾರಿ' ಹೆಸರಿನಲ್ಲೇ ಹೀಗೊಂದು ...ಮಾಲ್ ಕಂಪನಿ ಹುಟ್ಟುಹಾಕಿದ ಖದೀಮರು ...ು ಕೆ.ಸಿ. ರಸ್ತೆಯ ರಾಘವಕೃಷ್ಣ ಕಾಂಪ್ಲೆಕ್ಸ್‌ನಲ್ಲಿ ...ಂದನ್ನು ಬಾಡಿಗೆಗೆ ಪಡೆದುಕೊಂಡು ಕಂಪನಿಯ ...ತಗುಲಿ ಹಾಕಿದ್ದಾರೆ. ರಾಜ್ಯದ ವಿವಿಧ ಕೃಷಿ ...ಕಾರ್ಪೊರೇಟ್ ಕಂಪನಿಗಳಲ್ಲಿ ನೌಕರರಾಗಿದ್ದ ...ಕೊಂಡುಕೊಂಡಿದ್ದಾರೆ. ಅವರಲ್ಲಿ ದಾವಣಗೆರೆ ...ಹನುಮಂತರಾವ್ ಒಬ್ಬರು. ಬಳ್ಳಾರಿಯ ಕೇಂದ್ರ ...ದಲ್ಲಿ ನಾಲ್ಕಾರು ಕಂಪ್ಯೂಟರ್‌ಗಳನ್ನಿಟ್ಟು ...ಗೊಳಿಸಿದ್ದಾರೆ. ಈಗಾಗಲೇ ರೈತರ ನಡುವೆ ಬೀಜ-ಗೊಬ್ಬರ ಕೀಟನಾಶಕಗಳನ್ನು ಹಲವು ಕಂಪನಿಗಳ ಕೊಂಡೊಯ್ದು ಪರಿಚಯ ಇರುವ ಬಳ್ಳಾರಿ, ದಾವಣಗೆರೆ, ಹುಬ್ಬಳ್ಳಿ, ಹಾವೇರಿ, ಶಿವಮೊಗ್ಗ, ಚಿತ್ರದುರ್ಗ, ಕೊಪ್ಪಳ, ತುಮಕೂರು, ಹಾಸನಗಳಲ್ಲಿ ಹಲವಾರು ಕ್ಷೇತ್ರಾಧಿಕಾರಿಗಳನ್ನು ನೇಮಿಸಿಕೊಂಡಿದ್ದಾರೆ. ಇವರ ಕೆಳಗೆ ಹಲವು ಗ್ರೂಪ್ ಲೀಡರ್‌ಗಳನ್ನೂ ಮಾಡಿಕೊಂಡು ಬಳ್ಳಾರಿ ಕಚೇರಿಯಲ್ಲೇ ಸಭೆ ನಡೆಸಿ, ರೈತರ ಬಳಿ ಹೇಗೆ ಹೋಗಬೇಕೆಂದು ತರಬೇತಿ ನೀಡಿ ಕಳಿಸಿಕೊಟ್ಟಿದ್ದಾರೆ. ತಾವು ಮಾತ್ರ ಬಳ್ಳಾರಿಯ ಹೈಟೆಕ್ ಲಾಡ್ಜ್‌ಗಳಲ್ಲಿ ಉಳಿದುಕೊಂಡು ಎಲ್ಲರಿಗೂ ತಾವೇ ಒದಗಿಸಿದ್ದ ಮೊಬೈಲು ಫೋನ್‌ಗಳ ಮೂಲಕ ಎಲ್ಲವನ್ನೂ ಸಂಯೋಜಿಸುತ್ತಿದ್ದಾರೆ.

ಈ ಕಂಪನಿಯ ಕಾರ್ಯಕರ್ತರು ನಡೆಸಿದ ಟೋಪಿ ಕಾರ್ಯಾಚರಣೆಯ ಪ್ರಕಾರ, ರೈತರನ್ನು ಸಂಧಿಸಿದ ಕಾರ್ಯಕರ್ತರು ಕ್ಷಿಪ್ರಲಾಭದ ಯೋಜನೆಯನ್ನು ರೈತರ ಕಣ್ಣಮುಂದಿರಿಸಿದ್ದಾರೆ. ಅದರ ಪ್ರಕಾರ ಕಂಪನಿಯು 2009 ರ ಜನವರಿಯಲ್ಲಿ ರೈತರಿಗೆ ಅಲೋವೀರಾ ಸಸಿಗಳನ್ನೂ, ಗೊಬ್ಬರವನ್ನೂ ತನ್ನ ಖರ್ಚಿನಲ್ಲಿಯೇ ವಿತರಿಸುವುದೆಂದೂ,


Acknowledgement Receipt
Name of the customer M. N... No. 103258
Payment received on account of Rs. ... Amount in words ...
Branch ...
Note: Cash Payments are not accepted. In such cases company is not responsible for the cash payments ...
Receiver's Signature Customer's Signature

ಮತ್ತೆ ಬೆಳೆ ಬೆಳೆದ ತರುವಾಯ ಕಂಪನಿಯೇ ಬೆಳೆಯನ್ನು ಕೊಂಡುಕೊಳ್ಳುವ 'ಬೈಬ್ಯಾಕ್' ಯೋಜನೆ ಇದೆಂದೂ ನಂಬಿಸಿದ್ದಾರೆ.

ಈಚೆಗೆ ಎಕರೆಗೆ ಕೇವಲ 15 ರಿಂದ 20 ಸಾವಿರ ಖರ್ಚಾಗುತ್ತದೆಯೆಂದೂ, ರೈತರು ಸಸಿ ನೆಟ್ಟ ಮೂರೇ ತಿಂಗಳಲ್ಲಿ ಅವರ ಕೈಗೆ ಕಂಪನಿ 30 ಸಾವಿರ ರೂಪಾಯಿ ಕೊಡುತ್ತದಲ್ಲದೆ ಒಂದು ವರ್ಷದಲ್ಲಿ ಒಂದು ಲಕ್ಷ ರೂಪಾಯಿ ನೀಡುತ್ತದೆಯೆಂದೂ, 18 ತಿಂಗಳಾದ ಮೇಲೆ ಪೂರ್ತಿ ಹಣ ನೀಡುತ್ತದೆಯೆಂದೂ ತಿಳಿಸಿದ್ದಾರೆ. ಇದಕ್ಕಾಗಿ ರೈತರು ಜನರಿಗೆ ಮೊದಲು ಎಕರೆಗೆ ತಲಾ 1800 ರೂ.ಗಳನ್ನು ಕಂಪನಿಯ ಬ್ಯಾಂಕ್ ಖಾತೆಗೆ ಡಿಡಿ ಮೂಲಕ ಸಂದಾಯ ಮಾಡಲು ತಿಳಿಸಿದ್ದಾರೆ. ಹಾಗೂ ಕೆಲ ರೈತರು ಸಂಶಯ ವ್ಯಕ್ತಪಡಿಸಿದಾಗ "ಬೇಕಾದ್ರೆ, ನಿಮ್ಮ ಕೃಷಿ ಮಂತ್ರಿ, ರವೀಂದ್ರನಾಥ್‌ರ ಅಳಿಯನನ್ನೇ ಕೇಳಿ, ಅವರೂ ತೊಗೊಂಡಿದ್ದಾರೆ" ಎಂದು ಹೇಳಿದ್ದಾರೆ. ಮೊದಲಿಗೆ ಭದ್ರಾವತಿ ಶಾಸಕ ಸಂಗಮೇಶ್, ಮಾಜಿ ಶಾಸಕ ಅಪ್ಪಾಜಿಗೌಡ ಇಂಥವರಿಂದಲೂ ನಾಲ್ಕು-ಐದು ಎಕರೆಗಳಿಗೆಂದು ಡಿ.ಡಿ. ಕಟ್ಟಿಸಿಕೊಂಡು, ಇಂಥವರನ್ನು ತೋರಿಸಿ ಸಾಮಾನ್ಯ ರೈತರನ್ನು ಯಾಮಾರಿಸಿದ್ದಾರೆ. ದೊಡ್ಡ ಕುಳಗಳೇ ಗುಂಡಿಗೆ ಬಿದ್ದಾದ ಮೇಲೆ ಸಾಮಾನ್ಯರು ಬೀಳುವುದು ಎಷ್ಟು ಹೊತ್ತು? ತಮ್ಮ ಸಾಲಸೋಲಗಳೆಲ್ಲ ತೀರಿಬಿಡುವ ಧಾವಂತದಲ್ಲಿ ಹಲವು ರೈತರು 20-25 ಎಕರೆಗಳಿಗೂ ಒಂದೆಕರೆಗೆ 1800ರೂ. ನಂತೆ ಡಿ.ಡಿ. ಕಟ್ಟಿದ್ದಾರೆ. ದಾವಣಗೆರೆಯ ಆಸಾಮಿಯೊಬ್ಬ ಏಕ್‌ದಂ ನೂರು ಎಕರೆಗೆ, ಲಕ್ಷದ ಎಂಭತ್ತು ಸಾವಿರ ಕಟ್ಟಿ ಕೂತಿದ್ದಾನೆ. ಶಿವಮೊಗ್ಗ ಸಮೀಪದ ಅರೆಬಿಳಚಿ ಗ್ರಾಮದಲ್ಲಿ 20 ರಿಂದ 30 ರೈತರು ಒಂದು ಲಕ್ಷ ರೂಪಾಯಿ ಕಳಿಸಿದ್ದಾರೆ.


ರೈತನಾಯಕ ಕೆ.ಟಿ.ಗಂಗಾಧರ್

ಎಲ್ಲಾ ಮಾಯ ಇಲ್ಲಿ ಎಲ್ಲಾ ಮಾಯ.....

ಝಣಝಣ ಕಾಂಚಾಣ, ಊರುಗಳಿಂದಲೂ ಹಣ ಹರಿದು ಬಂದು ಬಳ್ಳಾರಿಯಲ್ಲಿದ್ದ ಕಂಪನಿಯ ಖದೀಮರ ಕೈ ಸೇರತೊಡಗಿದ್ದರೆ ಮೊದಮೊದಲು ರೈತರ ಬಳಿ ಮಾಸಲು ಬಟ್ಟೆಯಲ್ಲಿ, ಬಸ್‌ಗಳಲ್ಲಿ ಹೋದ ನೌಕರರೂ ಎರಡು ತಿಂಗಳ ನಂತರ ಕಂಪನಿ ಕೊಡಿಸಿದ ಬೈಕ್‌ಗಳ ಮೇಲೆ, ಕಂಪನಿಯ ಮುದ್ರೆ ಇರುವ ಚಿನ್ನದುಂಗುರ ಧರಿಸಿ ಹೋಗತೊಡಗಿದ್ದರೆಂದರೆ ಕಂಪನಿಯ ಹಕೀಕತ್ತನ್ನು ಊಹಿಸಬಹುದು. ಹೀಗೆ ಹೋದವರಲ್ಲಿ ಹುಬ್ಬಳ್ಳಿಯ ಧರ್ಮಲಿಂಗಪ್ಪ, ಚಳ್ಳಕೆರೆಯ ಸಂಪತ್‌ಕುಮಾರ್, ರವಿಚಂದ್ರ ಮುಂತಾದ ಹೆಸರುಗಳನ್ನು, ಅವರ ಮೊಬೈಲ್ ನಂಬರ್‌ಗಳನ್ನು ರೈತರು ಹೇಳುತ್ತಾರೆ. ಕಂಪನಿಯ ನಿಜಾಯಿತಿಯನ್ನು ಪರೀಕ್ಷಿಸಲು ಬಳ್ಳಾರಿಗೇ ಹೋಗಿದ್ದ ದಾವಣಗೆರೆಯ ರೈತರಿಗೆ, ಕಚೇರಿಯನ್ನು ತೋರಿಸಿ, ಆಂಧ್ರದ ಗಡಿಭಾಗದಲ್ಲಿ ಸಸಿಗಳಿದ್ದಾವೆಂದೂ, ಕಂಪನಿಯೇ ಪ್ರತಿ ಜಿಲ್ಲೆಯಿಂದಲೂ ಬಸ್‌ಗಳನ್ನು ಮಾಡಿ, ತೋರಿಸಿಕೊಂಡು ಬರುತ್ತದೆಂದೂ ಹೇಳಲಾಗಿದೆ. ರೈತರು ಹೌದೆಂದೇ ನಂಬಿ ಬಂದಿದ್ದಾರೆ. ಹೀಗೆ ಹಣ ಕಟ್ಟಿ, ತಮ್ಮ ಹೊಲಗಳನ್ನು ಲೋಳೆಸರ ಕೃಷಿಗೆಂದು ಪಾಳು ಬಿಟ್ಟುಕೊಂಡಿದ್ದ ರೈತರು ಜನವರಿ ಕಳೆದರೂ ಕಂಪನಿ ನೌಕರರ ಸುಳಿವಿಲ್ಲದ್ದು ಕಂಡು ತಮ್ಮ ಬಳಿಯಿದ್ದ ನಂಬರುಗಳಿಗೆ ಫೋನಾಯಿಸಿದರೆ ಅವು ಯಾರ್ಯಾರಿಗೋ ಹೋಗುತ್ತಿವೆ. ಆಗಿದ್ದಿಷ್ಟೆ. ಜನವರಿಯಲ್ಲಿ ಸಂಕ್ರಾಂತಿ ಹಬ್ಬಕ್ಕೆ ಕೆಲದಿನಗಳಿರುವಂತೆಯೇ ನೌಕರರನ್ನೆಲ್ಲಾ ಬಳ್ಳಾರಿ ಕಚೇರಿಗೆ ಕರೆಸಿಕೊಂಡು "ನಿಮಗೆಲ್ಲಾ ಫೆಬ್ರವರಿಯಿಂದ ತುಂಬಾ ಕೆಲಸವಿರುತ್ತಾದ್ದರಿಂದ 15 ದಿನ ರಜೆ ನೀಡ್ತಿದೇವೆ. ನಿಮ್ಮ ಮೊಬೈಲ್‌ಗಳನ್ನೆಲ್ಲಾ ಕೊಟ್ಟು 15 ದಿನ ... ಕಳಿಸಲಾಗಿದೆ ... 15 ... ಸುಳಿವೂ ಸಿಗದಂತೆ ಮಾಡಿ ಜಾಗ ಖಾಲಿ ಮಾಡಿದ್ದಾರೆ ವಂಚಕರು. ಹೀಗೆ ರೈತರಿಗೂ ನೌಕರರಿಗೂ ಒಟ್ಟೊಟ್ಟಿಗೆ ನಾಮ ಎಳೆಯಲಾಗಿತ್ತು, ಒಂದು ಜಿಲ್ಲೆಯಲ್ಲಿ ಕನಿಷ್ಠ 10 ಕೋಟಿಯಷ್ಟನ್ನು ಬಾಚಿಕೊಳ್ಳಲಾಗಿದೆ ಎಂದರೆ ನೀವು ನಂಬಲೇಬೇಕು.

ಹೀಗೆ ಗೋಲ್‌ಮಾಲ್ ಕಂಪನಿಯಿಂದ ರೈತರು ವಂಚನೆಗೊಳಗಾದ ಸುಳಿವರಿತ ರೈತ ಮುಖಂಡ ಕೆ.ಟಿ. ಗಂಗಾಧರ್ ಭದ್ರಾವತಿಯಲ್ಲೊಂದು ಸಭೆ ನಡೆಸಿದಾಗಲಷ್ಟೇ ಈ ವಂಚನೆಯ ಗಂಭೀರತೆ ಅರಿವಿಗೆ ಬಂದದ್ದು. ... ಮೋಸ ಹೋದ ರೈತರು ಏನೂ ಮಾಡಲಾಗದ ಸ್ಥಿತಿಯಲ್ಲಿದ್ದರೆ, ಕಂಪನಿಯ ಕೆಲಸಗಾರರೂ ರೈತರಿಗೆ ಹೆದರಿಕೊಂಡು ತಲೆ ಮರೆಸಿಕೊಂಡಿದ್ದಾರೆ.

"ದಗಾಕೋರ ಕಂಪನಿಯೊಂದು ಇಷ್ಟು ದೊಡ್ಡ ಪ್ರಮಾಣದಲ್ಲಿ ಕರ್ನಾಟಕದಲ್ಲಿ ರೈತರಿಗೆ ವಂಚಿಸಿರೋದು ಇದೇ ಮೊದಲು. ಈ ಪರಿಸ್ಥಿತಿಗೆ ನಮ್ಮ ಸರ್ಕಾರಗಳೂ ನೇರ ಹೊಣೆ. ಯಾಕಂದ್ರೆ ಒಂದು ಕಡೆ ಇಡೀ ಕೃಷಿ ಕ್ಷೇತ್ರವನ್ನು ಸಂಪೂರ್ಣ ಅಲಕ್ಷಿಸಿ, ಐಟಿ, ಬಿಟಿ ಎಂದು ಸರ್ಕಾರಗಳ ಆದ್ಯತೆಯೇ ಬದಲಾದ ಬಳಿಕ ಕೃಷಿ ಸಂಬಂಧಿ ಇಲಾಖೆಗಳಾಗಲೀ, ಕೃಷಿ ವಿ.ವಿ.ಗಳಾಗಲೀ ಕೃಷಿ ಕ್ಷೇತ್ರದ ಮೇಲಿನ ನಿಯಂತ್ರಣವನ್ನೇ ಕಳಕೊಂಡಿವೆ. ಇನ್ನೊಂದೆಡೆ ಭಾರತದಲ್ಲಿ ಕೃಷಿಯನ್ನು WTO ಅಡಿ ತಂದಾದ ಮೇಲೆ ಕೃಷಿ ಕ್ಷೇತ್ರದ ಕಾರ್ಪೊರೇಟ್ ಗೂಳಿಗಳು ರೈತರ ಹೊಲಗಳಿಗೆ ಬೇಕಾಬಿಟ್ಟಿ ನುಗ್ಗಿ ಲೂಟಿ ಹೊಡೆಯಲು ಅನುವು ಮಾಡಿಕೊಟ್ಟಿರುವುದರ ದುರ್ಲಾಭ ಪಡೆದೇ ಇಂತಹ ನೆರೆ ರಾಜ್ಯದ ಖದೀಮರು ನಮ್ಮ ರೈತರನ್ನು ವಂಚಿಸಿದ್ದಾರೆ" ಎನ್ನುತ್ತಾರೆ ಕೆ.ಟಿ. ಗಂಗಾಧರ್.

ಈ ಬಹುಕೋಟಿ ವಂಚನೆ ಪ್ರಕರಣದ ಸಿಒಡಿ ತನಿಖೆಯಾಗುವಂತೆ ಒತ್ತಾಯಿಸಿ ರೈತ ಸಂಘವು ಈಗಾಗಲೇ ದನಿ ಎತ್ತಿದೆ. ಮೇಲ್ನೋಟಕ್ಕೆ ತಿಳಿಸಲಾಗಿ ಗೊತ್ತಾಗುವಂತೆ, ಇದು ಯಾರೋ ಸಾಮಾನ್ಯರು ನಡೆಸಿರುವ ವಂಚನೆ ಖಂಡಿತಾ ಅಲ್ಲ. ಎಲ್ಲಾ ರೀತಿಯ ಶಕ್ತಿ-ಸಾಮರ್ಥ್ಯ-ಪ್ರಭಾವಗಳನ್ನು ಹೊಂದಿರುವವರೇ ಇಷ್ಟೊಂದು ದೊಡ್ಡ ವಂಚನೆಯ ಧೈರ್ಯ ತೋರಲು ಸಾಧ್ಯ. ಈ ವಂಚನೆ ಜಾಲವನ್ನು ಭೇದಿಸಿ ಇದರ ರೂವಾರಿಗಳನ್ನು ಬಯಲಿಗೆಳೆಯದಿದ್ದಲ್ಲಿ ಇದನ್ನು ಮೀರಿಸುವ ವಂಚನೆಗಳಿಗೆ ನಮ್ಮ ರೈತರು ಬಲಿಯಾಗುವುದರಲ್ಲಿ ಸಂಶಯವಿಲ್ಲ. ತನ್ನ ಸ್ಥಾನವನ್ನು ಭದ್ರಪಡಿಸುವುದರಲ್ಲೇ ಮಗ್ನನಾಗಿರುವ ಮುಖ್ಯಮಂತ್ರಿಯಾಗಲೀ, ರೈತರ ಬಗ್ಗೆ ಮೊಸಳೆ ಕಣ್ಣೀರಿಡುವ ಮನಮೋಹನನಾಗಲಿ ಎಚ್ಚೆತ್ತುಕೊಂಡು ರೈತರನ್ನು ಉಳಿಸುತ್ತಾರೋ ಅಥವಾ ರೈತರೇ ಎಚ್ಚೆತ್ತುಕೊಂಡು ವಂಚಕರನ್ನು, ವಂಚಕರ ಬೆನ್ನಿಗಿರುವ ರಾಜಕಾರಣಿಗಳನ್ನು ಉರುಳಿಸುತ್ತಾರೋ ಕಾಲವೇ ಹೇಳುತ್ತದೆ.

–ಹರ್ಷಕುಮಾರ್ ಕುಗ್ವೆ

...ಂಡ್ಯ: ಅಂದು ಆಪರೇಷನ್ ಕಮಲ ...ಂದು ಆಪರೇಷನ್ 'ಮಲ'!

...ಸುಟ್ಟದಲ್ಲಿ 'ಆಪರೇಷನ್ ಕಮಲ' ನಡೆಸಿ ...ಾದ ಚಿಡ್ಡಿಗಳು ಈಗ ಕೆಎಂಎಫ್‌ಗೂ ಅದನ್ನು ...ದ್ದಾರೆ. ಈ ಮಧ್ಯೆ ಪಂಚಾಯ್ತಿ ಲೆವೆಲ್‌ನಲ್ಲಿ ...ದ ಕಾರ್ಯಾಚರಣೆ ನಡೆಯಿತು. ಅಂತಹ ...ಆಪರೇಷನ್ ಈಗ ತಿರುಗುಬಾಣವಾಗಿ ... ವಶ ಮಾಡಿದ್ದರು. ರಿಯಲ್ ಎಸ್ಟೇಟ್ ದಂಧೆಕೋರ ಕೌನ್ಸಿಲರ್ ರೈಲು ರಮೇಶ್, ಕಲ್ಲಹಳ್ಳಿ ನಾಗೇಂದ್ರ ಈ ಅಡ್ನಾಡಿ ಕೆಲಸದಲ್ಲಿ ಸಾರಥ್ಯ ವಹಿಸಿ, ಸಖತ್ ಕಮಾಯಿ ಮಾಡಿಕೊಂಡಿದ್ದರು. ರೆಸಾರ್ಟೊಂದರಲ್ಲಿ ಗಣೆಕಳ್ಳರ ಪಾದಕ್ಕೆ ಬಿದ್ದು ತಲಾ 10 ಲಕ್ಷ ಹೊಡೆದ ಈ ಇಬ್ಬರು, ತಮ್ಮಂತೇ


...ದ, ನಾಗಪ್ಪ, ನಾಗವೇಣಿ, ಶಿವಪ್ರಕಾಶ್ ಬಾಬು, ಗೀತಾ, ರಮೇಶ್

...ಚಿಡ್ಡಿಗಳನ್ನು ... ಚಿಡ್ಡಿಗಳ ಎಂಜಲು ... [illegible] ... 13 ... [illegible] ...

ಇರುವ ಇನ್ನು ಹನ್ನೊಂದು ಜೆಡಿಎಸ್ ಸದಸ್ಯರ ಬಾಯಿಗಳಿಗೂ ಎಂಜಲು ಮುಟ್ಟಿಸಿದ್ದರಲ್ಲದೇ ಕೆಲ ಕಾಂಗ್ರೆಸ್, ಪಕ್ಷೇತರರನ್ನು ಸೆಳೆದುಕೊಂಡಿದ್ದರು. ಶ್ರೀನಿವಾಸ್, ಮೂಗರಮೇಶ್, ಹೊಸಹಳ್ಳಿ ಬೋರೇಗೌಡ, ಈಗಿನ ಅಧ್ಯಕ್ಷೆ ನಾಗಮಣಿ, ಲೋಕೇಶ್, ಶಂಕರೇಗೌಡ, ಪುಷ್ಪಲತಾ, ಭೈರವಾ, ಭಾಗ್ಯಮ್ಮ, ಶಿವಪ್ರಕಾಶ್ ಬಾಬು, ಗೀತಾ, ಡಿಪೋ ಬಾಬು, ಭಾಗ್ಯಲಕ್ಷ್ಮಿ, ಕಮಲ, ಮಹಾಲಿಂಗಾಚಾರಿ, ಹೊನ್ನಪ್ಪ ಚಲುವರಾಜ್, ... ಈ ಎಲ್ಲ ನಗರಸಭಾ ಸದಸ್ಯರನ್ನು ಬಳ್ಳಾರಿ, ತಿರುಪತಿ, ಮುಂಬೈ ಅಂತಾ ತಿರುಗಿಸಿ ಹೆಂಡಿ ಹೆಂಡಿ ಕಾಸು ನೀಡಿ ಬಲೆಗೆ ತಂದಿದ್ದರು.

ಅಧ್ಯಕ್ಷೆಯಾಗಿದ್ದ ನಾಗಮ್ಮಳನ್ನು ಕೆಳಗಿಳಿಸಿ ಇದ್ದಿ ರಾಜು ಹೆಂಡತಿ ನಾಗಮಣಿಯನ್ನು ಅಧ್ಯಕ್ಷೆಯನ್ನಾಗಿ ಮಾಡಲಾಯ್ತು, ಈಕೆ ನಾಮಕಾವಸ್ತೆ ಅಧ್ಯಕ್ಷೆ ಮಾತ್ರ. ತೆರೆಮರೆಯಲ್ಲಿ ಆಟ ಆಡಿಸಿದ್ದು ರಮೇಶನೇ. ಎಲ್ಲದಕ್ಕೂ ಬೆನ್ನೆಲುಬಾಗಿ ನಿಂತವನು ಶಾಸಕ ಎಂ.ಶ್ರೀನಿವಾಸ್.

ಬಿತ್ತು ನೋಡಿ ಕೇಸು


'ಆಪರೇಷನ್ ಕಮಲ'ದಿಂದ ಏನೋ ಗಳಿಸಿಬಿಟ್ಟೆವು ಎಂದು ಮೆರೆದಾಡುತ್ತಿದ್ದ ಜೆಡಿಎಸ್‌ನ ಹದಿಮೂರು ಸದಸ್ಯರಿಗೆ ಶನಿ ಕಾದಿತ್ತು. ಜೆಡಿಎಸ್ ಜಿಲ್ಲಾಧ್ಯಕ್ಷ ಡಿ.ರಮೇಶ್ ಮತ್ತು ಬಾಲರಾಜು ನೇತೃತ್ವದಲ್ಲಿ ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಪಕ್ಷದ ವಿಪ್ ಉಲ್ಲಂಘನೆ ಮತ್ತು ಪಕ್ಷಾಂತರ ನಿಷೇಧ ಕಾಯ್ದೆ ಅನ್ವಯ ಹದಿಮೂರು ಸದಸ್ಯರ ಮೇಲೆ ಕೇಸು ಎಟ್ಟಲಾಯ್ತು. ಇದಕ್ಕೆ ಈಗಿನ ಎಂ.ಪಿ. ಚಲುವರ ಬೆಂಬಲವಿತ್ತು. 'ಏನೂ ಆಗಲ್ಲ' ಎಂದು ಆರಾಮಾಗಿ ತಿರುಗುತ್ತಿದ್ದ ಸದಸ್ಯರಿಗೆ ಮೊನ್ನೆ ಜಿಲ್ಲಾಧಿಕಾರಿ ನೀಡಿದ ತೀರ್ಪು ಮರ್ಮಕ್ಕೆ ತಾಗಿಬಿಟ್ಟಿದೆ. ಈ ಹದಿಮೂರು ಸದಸ್ಯರ ಸದಸ್ಯತ್ವವನ್ನೇ ರದ್ದು ಮಾಡಿ, 'ಆಪರೇಷನ್ ಕಮಲ' ಎಂಬ ಹೇಯ ಕೃತ್ಯಕ್ಕೆ ಸರಿಯಾದ ಮಾರುತ್ತರ ನೀಡಿದಂತಾಗಿದೆ.

ಅಭಿವೃದ್ಧಿ ರಂಗವಂತೆ!

ಕಾಸಿಗಾಗಿ ಸೇಲ್ ಆದ ಈ ಮಹಾಶಯರು ತೋರಿಕೆಗೆ 'ಅಭಿವೃದ್ಧಿ ರಂಗ' ಎಂಬ ವೇದಿಕೆಯೊಂದನ್ನು ಮಾರಿಕೊಂಡು ತಮ್ಮ ನಾಟಕ ಶುರುಮಾಡಿದ್ದರು. ರಾಜ್ಯದಲ್ಲಿ ಆಡಳಿತದಲ್ಲಿರುವ ಪಕ್ಷದ ಜೊತೆ ಸೇರಿದರೆ ಅಭಿವೃದ್ಧಿ ಸಾಧ್ಯ ಎಂಬ ಥಿಯರಿಯನ್ನು ತೇಲಿಬಿಟ್ಟಿದ್ದರು. ಇದೆಲ್ಲ ಕಾಸು ಕಬಳಿಸಲು ರೈಲು ರಮೇಶ್, ಕಲ್ಲಹಳ್ಳಿ ನಾಗೇಂದ್ರರು ಆಡಿದ ಆಟವಾಗಿತ್ತಷ್ಟೇ. ಆಯ್ತು 'ಆಪರೇಷನ್ ಕಮಲ' ಸಕ್ಸಸ್ ಆಗಿತ್ತಲ್ಲ? ಮುಂದೆ ಈ ಬೃಹಸ್ಪತಿಗಳು ಮಾಡಿದ ಅಭಿವೃದ್ಧಿಯಾದರೂ ಏನು ಅಂತಾ ನೋಡಿದರೆ ಕಾಣುವುದು ಶೂನ್ಯ. ಇವರ ತಿಜೋರಿಗಳು ಮಾತ್ರ ಭರ್ತಿ ಭರ್ತಿ. ಅಮಾನತುಗೊಂಡು ಜನಕ್ಕೆ ಮುಖ ತೋರಿಸಲಾಗದೆ ಬೆಂಗಳೂರು ಪಾಲಾಗಿರುವ ಈ ಪಡಪೋಶಿಗಳು ಹೈಕೋರ್ಟಿನಲ್ಲಿ ನ್ಯಾಯ ಪಡೆಯುತ್ತಾರಂತೆ! ಈಗ ಈ ಪಕ್ಷಾಂತರಿಗಳಲ್ಲೇ ಬಿರುಕುಂಟಾಗಿ ಕಾವ್‌ಕಾವ್ ಎನ್ನುತ್ತಿವೆ. ಇನ್ನೊಂದು ಕಡೆ ಬಿಜೆಪಿಯೂ ಇವರಿಗೆ ಎಲ್ಲಿಡಬೇಕೋ ಅಲ್ಲಿಟ್ಟಿದೆ. ಒಟ್ಟಿನಲ್ಲಿ 'ಆಪರೇಷನ್ ಮಲ' ಎಂದು ಜನ ನಗಾಡುವಂತಾಗಿದೆ.


● ಲಕ್ಷ್ಮಣ್ ಚೀರನಹಳ್ಳಿ

ಇನ್ನೂ ಬಿಟ್ಟಿಲ್ಲ ಗ್ರಹಚಾರ!



ಪೌರಕಾರ್ಮಿಕರಿಂದಲೂ ಹಣ ಕೀಳುವ ನಗರಸಭಾ ಸದಸ್ಯರು ಭ್ರಷ್ಟ ಆಯುಕ್ತ ರಾಮಸ್ವಾಮಿಗೆ ಬೆಂಬಲವಾಗಿ ನಿಲ್ಲುತ್ತಲೇ ಬಂದರು. ಈಗ ಆಯುಕ್ತ ರಾಮಸ್ವಾಮಿ ಶಾಸಕ ಶ್ರೀನಿವಾಸರದ್ದೇ ಆಟ. ಕಳ್ಳ ಸದಸ್ಯರೇನೋ ವಜಾ ಆದರು. ಆದರೀ ಭ್ರಷ್ಟ ಆಯುಕ್ತರನ್ನು ತೆಗೆಯುವವರಾರು? ಜಿಲ್ಲಾಧಿಕಾರಿಗಳು ಇತ್ತ ಗಮನಹರಿಸಲಿ

ಇನ್ನೊಂದು ಮೂಲದ ಪ್ರಕಾರ, ಹದಿಮೂರು ಸದಸ್ಯರ ಸದಸ್ಯತ್ವ ರದ್ದಾಗಿರುವುದರಿಂದ ನಗರಸಭೆಯೇ ಸೂಪರ್‌ಸೀಡ್ ಆಗುವ ಸಾಧ್ಯತೆ ಇದೆ. ಹಾಗೇನಾದರೂ ಆಗಿ ಮತ್ತೆ ಚುನಾವಣೆ ... ಮಂಡ್ಯದ ಜನ ಬಹು ಎಚ್ಚರದಿಂದ ಮತ ಹಾಕುವುದು ಒಳ್ಳೆಯದು. ಇಲ್ಲದಿದ್ದರೆ ಮತ್ತೆ ತಪ್ಪುದಲ ...


ಜೋಶಿ ಶ್ರೀನಾಥ್

ಹುಬ್ಬಳ್ಳಿ – ಧಾರವಾಡ

ಖಾಕಿ ಹುದ್ದೆಗಳು ಹರಾಜಿಗಿವೆ!

ರಾಜ್ಯದ ಕ್ರೈಮ್ ಪ್ರಪಂಚದಲ್ಲಿ ಹುಬ್ಬಳ್ಳಿ-ಧಾರವಾಡಕ್ಕೆ 'ಪ್ರಮುಖ' ಸ್ಥಾನವಿದೆ. ಹಾಗೆಯೇ ಕ್ರೈಮ್‌ಅನ್ನು ನಿಯಂತ್ರಿಸಲೆಂದೇ ಇರುವ ಪೊಲೀಸ್ ಇಲಾಖೆಗೂ ಇಲ್ಲಿ ಅಷ್ಟೇ ಕುಖ್ಯಾತಿ ಇದೆ.

ರಣಹಸುವಿನ ಖಾಕಿಧಾರಿಗಳು ಹುಲುಸಾಗಿ ಮೇಯಲು ಈ ಎರಡು ಊರುಗಳು ಹೇಳಿಮಾಡಿಸಿದಂತಿರುವುದರಿಂದ ಇವತ್ತು ಸಾಮಾನ್ಯ ಕಾನ್ಸ್‌ಟೇಬಲ್‌ಗಳಿಂದ


ಚಂದಿರಾಮ್‌ಸಿಂಗ್


ಮಸೂತಿ


ಜೋಶಿ ಶ್ರೀನಾಥ್


ಮುಪ್ಪಿನಮಠ


ಬಟಕುರ್ಕಿ

ಹಿಡಿದು ಆಯುಕ್ತ ತನಕದ ಹುದ್ದೆಗಳು ಲಕ್ಷಾಂತರ ರೂಪಾಯಿ ಬೆಲೆಬಾಳುತ್ತವೆ. ಆಯಾ ಹುದ್ದೆಗೆ ತಕ್ಕಂತೆ ಆಯಾ ಕ್ಷೇತ್ರದ ರಾಜಕೀಯ ಪುಢಾರಿ, ಶಾಸಕ ಮತ್ತು ಸಂಸದ ಫಿಕ್ಸ್ ಮಾಡಿರುವ ರೇಟನ್ನು ಅವರುಗಳ ಜೇಬಿಗೆ ಇಳಿಸಿ ಡ್ಯೂಟಿಗೆ ರಿಪೋರ್ಟ್ ಮಾಡಿಕೊಳ್ಳುವಂತಹ ಸ್ಥಿತಿ ಈಗ ಅವಳಿನಗರದಲ್ಲಿ ನಿರ್ಮಾಣಗೊಂಡಿದೆ.


ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದನಂತರವಂತೂ ಪೊಲೀಸ್ ಇಲಾಖೆಯವರು ತಮ್ಮ ವರ್ಗಾವಣೆ ಅರ್ಜಿ ಹಿಡಿದುಕೊಂಡು ನೇರವಾಗಿ ಮಂತ್ರಿಗಳ ಬಳಿ ಹೋಗುವ ಬದಲು ಅದನ್ನೇ ಸ್ಥಳೀಯವಾಗಿ 'ಪರಿಹರಿಸುವ' ಸೂತ್ರವನ್ನು ಜಾರಿಗೆ ತಂದಿದೆ. ಅದರಲ್ಲೂ ಪೊಲೀಸ್ ಇಲಾಖೆಯ ವರ್ಗಾವಣೆಗೆ ಈಗ ಸಿ.ಎಂ. ಯಡಿಯೂರಪ್ಪ ರೆಡಿಯಾಗಿದ್ದಾರೆ ಎಂಬ ಸುದ್ದಿ ಹೊರಬಿದ್ದಿದ್ದೇ ತಡ, ಇಲ್ಲಿನ ಎಲ್ಲಾ ಪ್ರಮುಖ ಹುದ್ದೆಗಳು ಹರಾಜಿಗೆ ರೆಡಿಯಾಗಿ ಬಿಟ್ಟಿವೆ.

ಮೊನ್ನೆ ಮೊನ್ನೆ ಚುನಾವಣೆಯಲ್ಲಿ ಮತ್ತೆ ಆರಿಸಿಬಂದ ಸಂಸದ ಪ್ರಹ್ಲಾದ ಜೋಷಿಯಂತೂ ಟ್ರಾನ್ಸ್‌ಫರ್‌ಗೆ ಶಿಫಾರಸ್ಸು ಬರೆಯಲು ಲೆಟರ್ ಪ್ಯಾಡ್ ರೆಡಿ ಇಟ್ಟುಕೊಂಡು ಗಿರಾಕಿಗೆ ಕಾಯುತ್ತಿದ್ದರೆ, ಮಂತ್ರಿ ಮುರುಗೇಶ ನಿರಾಣಿ ಆಯಾ ಜಾಗಕ್ಕೆ ಎಷ್ಟು ರೇಟು ಎಂಬುದನ್ನು ಫಿಕ್ಸ್ ಮಾಡಿಕೊಂಡು ಸಿದ್ಧರಾಗಿದ್ದಾರೆ. ದೂರದ ಮೈಸೂರು ಜಿಲ್ಲೆಯ ಉಸ್ತುವಾರಿ ಹೊಂದಿರುವ ಯಡ್ಡಿಯ ಪರಮಾಪ್ತೆ ಮಂತ್ರಿ ಶೋಭಾ ಕರಂದ್ಲಾಜೆ ಸಹ ಹುಬ್ಬಳ್ಳಿ ಧಾರವಾಡ ಪೊಲೀಸ್ ವರ್ಗಾವಣೆಯಲ್ಲಿ ಕೈ ಹಾಕಿದ್ದಾಳೆ. ಇವರೆಲ್ಲರ ಮಧ್ಯೆ ತಾವೇನು ಕಡಿಮೆ ಎಂದು ಹುಬ್ಬಳ್ಳಿ ಶಹರದ ಶಾಸಕ ವೀರಭದ್ರಪ್ಪ ಹಾಲರವಿ, ಧಾರವಾಡ ಶಹರದ ಚಂದ್ರಕಾಂತ ಬೆಲ್ಲದ, ಗ್ರಾಮೀಣದ ಸೀಮಾ ಮಸೂತಿ ಕೂಡಾ ಗಿರಾಕಿಗಳನ್ನು ಹುಡುಕಿಕೊಂಡು, ರೇಟು ಫಿಕ್ಸ್ ಮಾಡಿಕೊಂಡು ಫೈಲ್ ಹಿಡಿದುಕೊಂಡು ತಿರುಗುತ್ತಿದ್ದಾರೆ.

ಯಾವ ಲೀಡರ್ ಬೆನ್ನಿಗೆ ಯಾವ ಪುಢಾರಿಗಳು

ಲೋಕಸಭಾ ಚುನಾವಣೆಯಲ್ಲಿ ಹಾಕಿದ ಬಂಡವಾಳವನ್ನು ಹಿಂಪಡೆಯಲು ಸಂಸದ ಪ್ರಹ್ಲಾದ ಜೋಷಿ ಜೋಳಿಗೆ ಹಿಡಿದು ನಿಂತಿದ್ದಾನೆ. ಸಧ್ಯ ಹುಬ್ಬಳ್ಳಿ-ಧಾರವಾಡದಲ್ಲಿ ಜೋಷಿ ಪರವಾಗಿ ದತ್ತಾ ಡೋರ್ಲೆ, ಸುಧೀರ ಸರಾಫ, ವಿಜಯ ನಾಡಜೋಷಿ, ವಿಜಯಾನಂದ ಶೆಟ್ಟಿ, ವಿರೇಶ ಅಂಚಟಗೇರಿ ತರಹದವರು ಗಿರಾಕಿ ತರುವ ಏಜೆಂಟರಾಗಿ ಕೆಲಸ ಮಾಡುತ್ತಿದ್ದಾರೆ.


ಶೋಭಾ


ಬಸವರಾಜ್ ಬೊಮ್ಮಾಯಿ


ಜಗದೀಶ್ ಶೆಟ್ಟರ್


ವೀರಭದ್ರಪ್ಪ


ಪ್ರದೀಪ್ ಶೆಟ್ಟರ್


ಸೀಮಾ ಮಸೂತಿ

ಸಚಿವ ಸ್ಥಾನದ ಬದಲಾಗಿ ವಿಧಾನಸಭೆಯ ಅಧ್ಯಕ್ಷ ಹುದ್ದೆ ಪಡೆದು ಎರಡೂ ಕೈಗಳಿಂದ ಬಾಯಿ ಬಡಿದುಕೊಂಡಿದ್ದ ಜಗದೀಶ ಶೆಟ್ಟರ ಇವತ್ತಿಗೂ ಕೈಕೈ ಹಿಸುಕಿ ಕೊಳ್ಳುತ್ತಿದ್ದಾರೆ.

ಈಗ ಶೆಟ್ಟರ ಸಹೋದರ ಪ್ರದೀಪ ಶೆಟ್ಟರ ಖಾಕಿಗಳ ವರ್ಗಾವಣೆಯ ಉಸ್ತುವಾರಿ ವಹಿಸಿಕೊಂಡು ತನ್ನದೇ ಆದ ರೇಟನ್ನು ಫಿಕ್ಸ್ ಮಾಡುತ್ತಿದ್ದಾನಂತೆ. ಮಹಾಪೌರ ವೀರಣ್ಣ ಸವಡಿ, ಮಲ್ಲಿಕಾರ್ಜುನ ಸಾಹುಕಾರ, ಮಹೇಶ ತೆಂಗಿನಕಾಯಿ, ಹರ್ಷಾ ಪಾಟೀಲರುಗಳು ಪ್ರದೀಪ್ ಶೆಟ್ಟರಿಗೆ ಗಿರಾಕಿಗಳನ್ನು ಹುಡುಕಿ ತರುತ್ತಿದ್ದಾರೆ.

ಧಾರವಾಡ ಉಸ್ತುವಾರಿ ಮಂತ್ರಿಯಾಗಿರುವ ಬಾಗಲಕೋಟೆ ಜಿಲ್ಲೆಯ ಮುರುಗೇಶ ನಿರಾಣಿ ತನ್ನದೂ ಒಂದು ಕೈ ಇರಲಿ ಎಂದು ತನ್ನ ಚೇಲಾಗಳಾದ ರವಿ ಶಿರಿಯಣ್ಣನವರ, ಟಿ.ಎಸ್. ಪಾಟೀಲ, ನಾಗರಾಜ ಜಮ ಖಂಡಿಗಳಿಗೆ ಬಲೆ ಹಾಕಲು ಹೇಳಿದ್ದಾನಂತೆ. ಎಲ್ಲೋ ಹುಟ್ಟಿ ಎಲ್ಲೋ ಹರಿಯುವ ನದಿಯಂತೆ ಕರಾವಳಿಯಲ್ಲಿ ಹುಟ್ಟಿ, ಬೆಂಗಳೂರಿನಲ್ಲಿ ಗೆದ್ದು ಮೈಸೂರಿನ ಜವಾಬ್ದಾರಿ ಹೊತ್ತಿರುವ ಶೋಭಾ ಕೂಡ ಈಗ ಧಾರವಾಡ-ಹುಬ್ಬಳ್ಳಿಯಲ್ಲಿ ತನ್ನ ಪ್ರಭಾವವನ್ನು ಹರಿಸಲು ಮುಂದಾಗಿದ್ದಾಳೆ. ಯಡ್ಡಿಯೊಂದಿಗೆ ತನಗಿರುವ ಡೈರೆಕ್ಟ್ ಸಂಪರ್ಕದ ಲಾಭವನ್ನು ಪಡೆಯಲು ಆಕೆ ಮಾಜಿ ಶಾಸಕ, ಹಾಲಿ ನಿಗಮದ ಅಧ್ಯಕ್ಷ ಅಶೋಕ ಕಾಟವೆಯನ್ನು ಮುಂದೆ ಬಿಟ್ಟಿದ್ದಾಳೆ. ಶೋಭಕ್ಕನ ಸೆರಗು ಹಿಡಕೊಂಡು ಟ್ರಾನ್ಸ್‌ಫರ್ ದಂಧೆಗೆ ಕೈಹಾಕಿರುವ ಇತರರೆಂದರೆ ರಾಜೇಂದ್ರ ಗೋಖಲೆ, ಲಿಂಗರಾಜ ಪಾಟೀಲ, ಲಿಂಬಣ್ಣನವರ ಮತ್ತು ಸಿರೂರನಂತವರು.

ಎಲ್ಲಾ ಅಧಿಕಾರ ಮಂತ್ರಿಗಳದ್ದೇ ಆದರೆ ನಮ್ಮದೇನು ಉಳಿಯಿತು ಎಂದು ಧಾರವಾಡ ಶಾಸಕ ಚಂದ್ರಕಾಂತ ಬೆಲ್ಲದ ಟ್ರಾನ್ಸ್‌ಫರ್ ಬಯಸುವ ಹಾಗೂ ಇಲ್ಲಿಗೆ ಬರಲು ತಯಾರಾಗಿರುವ ಅಧಿಕಾರಿಗಳಿಗೆ ಖುದ್ದು ತಾನೇ ಫೋನು ಮಾಡಿ ರೇಟು ಚೌಕಾಸಿ ನಡೆಸಿದ್ದಾನಂತೆ. ಇವನ ಮಗ ಅರವಿಂದ ಬೆಲ್ಲದ ತನ್ನ ವಾಹನ ವ್ಯಾಪಾರ ಕಡಿಮೆ ಮಾಡಿ ಟ್ರಾನ್ಸ್‌ಫರ್ ಉದ್ಯಮಕ್ಕೆ ನಿಂತಿದ್ದಾನೆ. ಒಟ್ಟಿನಲ್ಲಿ ಈ ಅಪ್ಪ-ಮಗ ಬಣಜಿಗ ವ್ಯಾಪಾರಕ್ಕೆ ಇಳಿದಿರುವುದಂತೂ ಸತ್ಯ.


ಪ್ರಹ್ಲಾದ ಜೋಶಿ

ಇನ್ನು ಈ ಭಾಗದ ಏಕೈಕ ಮಹಿಳಾ ಶಾಸಕಿ ಸೀಮಾ ಮಸೂತಿ ಅದ್ಯಾವ ಜನುಮದ ಹಸಿವು ತೀರಿಸಿಕೊಳ್ಳುತಿದ್ದಾಳೋ ಆ ದೇವರೇ ಬಲ್ಲ. ಈಗ ಪೊಲೀಸ್ ಇಲಾಖೆ ವರ್ಗಾವಣೆ ಯಲ್ಲೂ ತಲೆ ಇಟ್ಟಿರುವ ಸೀಮಾಳಿಗೆ ಅವಳ ಗಂಡ ಅಶೋಕ ಮಸೂತಿ ಗಿರಾಕಿಗಳನ್ನು ಹುಡುಕುತ್ತಿದ್ದಾನಂತೆ. ಇನ್ನು ಹುಬ್ಬಳ್ಳಿ ಶಾಸಕ ವೀರಭದ್ರಪ್ಪ ಹಾಲರವಿ ಯಾರನ್ನೂ ಏಜೆಂಟರಾಗಿ ಇಟ್ಟುಕೊಳ್ಳದೇ ಖುದ್ದು ತಾನೇ ಫೈಲ್ ಹಿಡಿದುಕೊಂಡು ವಿಧಾನಸೌಧಕ್ಕೆ ಹೋಗುತ್ತಿದ್ದಾನಂತೆ.

ಇನ್‌ಕಮ್ ಸ್ಟೇಷನ್‌ಗಳೋ ಸುಲಿಗೆ ಠಾಣೆಗಳೋ

ವಿಪರ್ಯಾಸದ ಸಂಗತಿ ಯಾವುದೆಂದರೆ, ಯಾವ ಠಾಣೆಯಲ್ಲಿದ್ದರೆ ಎಷ್ಟು ಲಕ್ಷ ಸುಲಿಯಬಹುದು ಎಂಬ ಲೆಕ್ಕಾಚಾರದ ಒಂದು ಮಿನಿ ಡೈರಿಯನ್ನೇ ಕೆಲ ಅಧಿಕಾರಿಗಳು ಅನಧಿಕೃತವಾಗಿ ಹೊರತಂದಿದ್ದಾರಂತೆ. ಆ ಕೈಪಿಡಿಯಲ್ಲಿರುವ ಠಾಣೆಗಳಿಗೆ ಈಗ ಎಲ್ಲಿಲ್ಲದ ಬೇಡಿಕೆ. ಹುಬ್ಬಳ್ಳಿ ಸಬರಮನ್ ಶಹರ ಠಾಣೆ, ಹಳೇ ಹುಬ್ಬಳ್ಳಿ, ಗಂಟಿಕೇರಿ, ಕಮರಿಪೇಟೆ, ಎ.ಸಿ.ಪಿ. ಮತ್ತು ಡಿ.ಸಿ.ಪಿ. ಲಿಮಿಟ್ಸ್, ಹುಬ್ಬಳ್ಳಿ ಉತ್ತರ ಹಾಗೂ ದಕ್ಷಿಣ ಮತ್ತು ಧಾರವಾಡ ಸಂಚಾರಿ ಠಾಣೆಗಳು ಈಗ ಜನರನ್ನು ಸುಲಿಯುವ ಕೇಂದ್ರಗಳಾಗಿವೆ. ಆದ್ದರಿಂದ ಆ ಜಾಗಗಳಿಗೆ ಹೆಚ್ಚಿನ ರೇಟು. ಆದ್ರೆ ಹುಬ್ಬಳ್ಳಿ ಕೇಶ್ವಾಪೂರ, ವಿದ್ಯಾನಗರ, ಬೆಂಡಿಗೇರಿ, ಕಸಬಾಪೇಟ ಮತ್ತು ಹೊಸದಾಗಿ ಪ್ರಾರಂಭವಾಗಿರುವ ನವನಗರ ಠಾಣೆಗಳಿಗೆ ಯಾರೊಬ್ಬರೂ ಹೋಗಲು ಸಿದ್ಧರಿಲ್ಲ, ಯಾಕೆಂದರೆ ಅಲ್ಲಿ ನೋ ಇನ್‌ಕಮ್!

ಮಟ್ಕಾ ದಂಧೆ, ಕ್ರಿಕೆಟ್ ಬುಕ್ಕಿಂಗ್, ಹೊರವಲಯ[...]
ನಡೆಯುವ ನಕಲಿ ಮದ್ಯದ ವ್ಯವಹಾರ, ಖಾಸಗಿ [...]
ಹೈಟೆಕ್ ವೇಶ್ಯಾವಾಟಿಕೆ.. ಇಂತಹ ಹಲವಾರು [...]
ಗಳಿಂದ ಪೊಲೀಸರಿಗೆ ತಿಂಗಳಿಗಿಷ್ಟು ಅಂತಾ [...]
ಬಂದು ಸೇರುತ್ತದೆ. ಎಲ್ಲ ಮೂಲಗಳಿಂದ ಬರುವ ಆ[...]
ಲೆಕ್ಕಾ ಹಾಕುತ್ತಾ ಹೋದರೆ ಅದೇ ಕೋಟಿಗಳಷ್ಟಾಗು[...]
ಸಧ್ಯ ಮದ್ಯದಂಗಡಿಗಳ ಪರವಾನಗಿ ನವೀಕರಣ ಎದುರಾ[...]
ಹುಬ್ಬಳ್ಳಿಯ ಪ್ರತಿ ವೈನ್ ಶಾಪಿನಿಂದ 7 ಲಕ್ಷ, ಧಾರ[...]
ದಿಂದ 5 ಲಕ್ಷ ಹಣ ಸಂದಾಯದ ನಿರೀಕ್ಷೆಯಲ್ಲಿ[...]
ಖಾಕಿ ಅಧಿಕಾರಿಗಳು.

ಯಾವ ಜಾಗೆಗೆ ಯಾವ ಹೆಗ್ಗಣವೋ ಸಿದ್ಧಾರೂಢಾ!

ಪೊಲೀಸ್ ಇಲಾಖೆಯಲ್ಲಿ ಈಗ ನಡೆಯುತ್ತಿ[...]
ವರ್ಗಾವಣೆ ಸರ್ಕಸ್ ಎಂತಹ ತಾರಕ ಮುಟ್ಟಿದೆ ಎ[...]
ಹಲವಾರು ರೂಮರ್‌ಗಳು ಅವಳಿ ನಗರಗ[...]
ಹರಿದಾಡುತ್ತಿವೆ. ಅವುಗಳ ಕೆಲ ಸ್ಯಾಂಪಲ್‌ಗಳು ಇ[...]


"ಹುಬ್ಬಳ್ಳಿ ಡಿಸಿಪಿ ಚಂದಿರಾಮ್ ಸಿಂಗ್ ಮ[...]
ಕ್ರೈಂ ಡಿಸಿಪಿ ಬಟಕುರ್ಕಿ ತಾವು ಈಗಿರುವ ಜಾಗೆಯ[...]
ಮುಂದುವರೆಯಲು ಎಲ್ಲಿಲ್ಲದ ಹರಸಾಹಸ ಮಾಡುತ್ತಿ[...]
ರಂತೆ. ಇಬ್ಬರೂ ಸೇರಿ ಶೆಟ್ಟರ ಮತ್ತು ಜೋಷಿಗೆ [...]
12ಲಕ್ಷ ಪೇಮೆಂಟ್ ಮಾಡಿದ್ದಾರಂತೆ. ಆದರೆ ನಿರಾಣಿ ಮ[...]
ಬೊಮ್ಮಾಯಿಗಳು 'ನಮಗ್ಯಾಕಿಲ್ಲೋ' ಅಂತಿದ್ದಾರಂತೆ[...]

– "ಸಂಚಾರಿ ಎಸಿಪಿ ಎಫ್.ಬಿ. ಚೌಹಾಣ ಮೊನ್ನೆ[...]
ಲೋಕಸಭಾ ಚುನಾವಣೆ ಸಂದರ್ಭದಲ್ಲಿ 'ಪ್ರಹ್ಲಾ[...]
ಜೋಷಿಯ ಜೋಳಿಗೆಗೆ 11 ಲಕ್ಷ ಸುರಿದು ಕೃತಾರ್ಥನಾ[...]
ಎಂದಿದ್ದಾನಂತೆ. ಈತನ ಸ್ನೇಹಿತ ನಿಂಗಣ್ಣಾ ಪಾಟ[...]
ಈಗಾಗಲೇ ಬಿಜಾಪುರವನ್ನು ಅರ್ಧ ಹಾಳು ಮಾಡಿ[...]
ಆ ಕೆಲಸವನ್ನು ಪೂರ್ಣಗೊಳಿಸಲು ತಾನೇ ಅ[...]
ಹೋಗತೇನಿ ಅಂತ ಚೌಹಾಣ್ ಹೇಳುತ್ತಿದ್ದಾನಂತೆ. ಇ[...]
ಜಾಗಕ್ಕೆ ಬರಲು ಬೆಳಗಾವಿಯನ್ನು ಹಾಳುಗೆಡವಿರು[...]
ಪಂಡರಿನಾಥ ವಾಂಡಕರ್ ಈಗಾಗಲೇ ಜೋಷಿಯಿಂ[...]
ಲೆಟರ್ ಪಡೆದಿದ್ದಾನಂತೆ. ಜಿ.ಆರ್.ಪಾಟೀಲ ಎನ್ನುವಾತ[...]
ಈ ರೇಸಿನಲ್ಲಿದ್ದಾನಂತೆ."

"ಸೌತ್ ಎಸಿಪಿ ಶ್ರೀನಾಥ ಜೋಷಿ ಹುಬ್ಬಳ್ಳಿಯಿಂ[...]
ಖಾಲಿ ಇರುವ ಧಾರವಾಡದ ಎಸಿಪಿ ಹುದ್ದೆಗೆ ಹಾರಿದ[...]
ಅವರ ಖಾಲಿ ಜಾಗಗೆ ಅಲಮೇಲಕರ್ ಶಾಸಕ ಹಾಲರ[...]
ಸಪೋರ್ಟಿನಿಂದ ಬರಲು ತಯಾರಿ ನಡೆಸಿದ್ದಾರಂತೆ. ಆ[...]
ಎ.ಆರ್. ಬಡಿಗೇರ ಜಗದೀಶ ಶೆಟ್ಟರಿಗೆ ಆಗಲೇ ಕಂ[...]
ಪಾವತಿ ಮಾಡಿದ್ದಾನಂತೆ. ಉತ್ತರ ಟ್ರಾಫಿಕ್ಕಿನ ಶಂ[...]
ಮಾರಿಹಾಳ ಜೋಷಿ ಬೆಂಬಲದಿಂದ ಏನೇ ಆದರ[...]
ತಾನು ಈ ಜಾಗ ಬಿಟ್ಟು ಕದಲಲ್ಲ ಎನ್ನುತ್ತಿದ್ದಾನಂ[...]
ಆದರೆ ಸಂದಿಗವಾಡ ಶೆಟ್ಟರಗೆ 5 ಲಕ್ಷ ಅಡ್ವಾನ್ಸ್ ಕೊ[...]
ಆ ಜಾಗೆಯನ್ನು ಬುಕ್ ಮಾಡಿದ್ದಾನೆ ಎಂಬ ಸುದ್ದಿ ಕೆ[...]
ಬೆಚ್ಚಿ ಬಿದ್ದಿರುವ ಮಾರಿಹಾಳ ಸಾಹೇಬರು ಈಗ ಜೋ[...]
ಮನೆ ಬಾಗಿಲು ಕಾಯುತ್ತಿದ್ದಾರಂತೆ. ಧಾರವಾಡ ಸಂಚ[...]
ಠಾಣೆಗೆ ಬರಲು ಮುಪ್ಪಿನಮಠ ಅರವಿಂದ ಬೆಲ್ಲ[...]
ಬೆನ್ನು ಬಿದ್ದಿದ್ದಾನಂತೆ. ಧಾರವಾಡ ಗ್ರಾಮೀಣ ಠಾಣೆ[...]
ಮೊರಬ ಶೆಟ್ಟರು ಈ ಹಿಂದೆ ಈ ಸ್ಥಾನ ಪಡೆಯಲು [...]
ಸಂಬಂಧಿ ಸೀಮಾ ಮಸೂತಿಗೆ 9 ಲಕ್ಷ ಕೊಟ್ಟು ಬಂದಿದ್ದ[...]
ಆದರೆ ಆ ಜಾಗ ಅಷ್ಟೇನು ಲಾಭದಾಯಕವಾಗಿಲ್ಲದಿರುವು[...]
ರಿಂದ ತಾನು ಹೂಡಿದ್ದ ಬಂಡವಾಳ ವಾಪಸ್ಸು ಬಂ[...]
ಎಂದು ಲಟಿಕೆ ಮುರಿಯುತ್ತಿದ್ದಾನಂತೆ. ಈಗ ಇವನ[...]
ಎತ್ತಂಗಡಿ ಮಾಡಿ ಅಲ್ಲಿಗೆ ಕೇಶ್ವಾಪೂರ ಠಾಣೆಯಲ್ಲಿರ[...]
ಭರತ್ ರೆಡ್ಡಿಯನ್ನು ತರಲು ಖುದ್ದು ಮಸೂತಿನೆ ರೆಕಮೆಂ[...]
ಪತ್ರ ಕೊಟ್ಟಿದ್ದಾಳಂತೆ" ಇಂತಹದ್ದೇ ತರಹೇವಾರಿ ಸುದ್ದಿ[...]
ಇವತ್ತು ಅವಳಿ ನಗರಗಳ ಬೀದಿಬೀದಿಗಳಲ್ಲಿ ಚ[...]
ಸಾಮಗ್ರಿಯಾಗಿವೆ.

ಅಧಿಕಾರದಲ್ಲಿರುವ ಯಡ್ಡಿ ಸರಕಾರದ ಕೃಪೆಯಿ[...]
ಲಂಚಕೋರ ಖಾಕಿ ಅಧಿಕಾರಿಗಳು ಹುಲುಸಾಗಿ ತಿಂ[...]
ತೇಗಲು ಬಂಡವಾಳ ಹಾಕಿ ಬಡ್ಡಿಸಮೇತ ತೆಗೆಯ[...]
ಸನ್ನದ್ಧರಾಗಿದ್ದಾರೆ. ಹಿಂದೆಂದೂ ಕಾಣದಷ್ಟು ಲಂಚದ ಹಾ[...]
ಇಂದು ಹುಬ್ಬಳ್ಳಿ ಧಾರವಾಡದಲ್ಲಿ ಎಗ್ಗಿಲ್ಲದೇ ಸಾಗಿ[...]
ಅದರಲ್ಲಿ ಬಿಜೆಪಿಯ ಶಾಸಕ, ಮಂತ್ರಿ, ಸಂ[...]
ಉದ್ಧಾರವಾಗುತ್ತಿದ್ದರೆ, ಬಿಜೆಪಿಯ ದಂಡಪಿಂಡ ಪುಢಾರಿ[...]
ಜೀವನ ಸಾಗಿಸುತ್ತಿದ್ದಾರೆ ಎಂಬುದರ ಬಗ್ಗೆ ಯ[...]
ಅನುಮಾನವೂ ಉಳಿದಿಲ್ಲ.

● ವಿನಯ ಕುರಳಿಕು[...]


ರಾಘವೇಂದ್ರ

ಔರಾಧಕರ ಎಂಟ್ರಿ ಹಿಂದೆ ಬ್ರಾಹ್ಮಣರ ಲಾಬಿ!

ಪ್ರಹ್ಲಾದ ಜೋಷಿ ಸಂಸದ ಆಗಿದ್ದೇ ತಡ ಹುಬ್ಬಳ್ಳಿ-ಧಾರವಾಡದ ಬ್ರಾಹ್ಮಣರು ಆಯಕಟ್ಟಿನ ಜಾಗೆಗಳಲ್ಲಿ ತಮ್ಮವರನ್ನು ತಂದು ಕೂರಿಸುತ್ತಿದ್ದಾರೆ. ಅದರ ಮೊದಲ ಪ್ರಯೋಗವೇ ರಾಘವೇಂದ್ರ ಔರಾಧಕರನ್ನು ಹುಬ್ಬಳ್ಳಿ-ಧಾರವಾಡ ಪೊಲೀಸ್ ಆಯುಕ್ತರನ್ನಾಗಿ ನೇಮಿಸಿದ್ದು. ಬೆಳಗಾವಿ ವಿಭಾಗದ ಐ.ಜಿ.ಯಾಗಿದ್ದ ಔರಾಧಕರಗೆ ಈ ಹುದ್ದೆ ಡಿಮೋಷನ್ ಆದರೂ ಅವರನ್ನು ಇಲ್ಲಿಗೆ ತರಲಾಗಿದೆ. ಈ ಔರಾಧಕರ ಉಡುಪಿ ಪೇಜಾವರ ಮಠದ ವಿಶ್ವೇಶತೀರ್ಥ ಸ್ವಾಮಿಗಳ ಪರಮ ಶಿಷ್ಯ.

ಎಂದೂ ಎಕ್ಸಿಕ್ಯೂಟಿವ್ ಹುದ್ದೆಯನ್ನು ಸರಿಯಾಗಿ ನಿರ್ವಹಿಸದ ಈ ಹಿಂದಿನ ಆಯುಕ್ತ ಶಿವಕುಮಾರ ಹುಬ್ಬಳ್ಳಿ "ಧಾರವಾಡದಿಂದ ನಾನೇಕೆ ಕಾಲ್ಕೀಳಲಿ?" ಎಂದು ಹಠ ಹಿಡಿದು ಕುಳಿತಿದ್ದರಂತೆ. ಮಾತ್ರವಲ್ಲ, ಆತ ಸಾದ ಪೀಠದ ತರಳಬಾಳು ಸ್ವಾಮಿಯ ಮೂಲಕ ಸಿ.ಎಂ. ಯಡ್ಡಿ ಮೇಲೆ ಪ್ರಭಾವ ತಂದು ಇಲ್ಲೇ ಉಳಿಯಲು ಪ್ರಯತ್ನಿಸಿದ.

ಆದರೆ ಬ್ರಾಹ್ಮಣ ಲಾಬಿ ಮುಂದೆ ಶೂದ್ರ ಸಾದರ ಪ್ರಭಾವ ಯಾವ ಲೆಕ್ಕದ್ದು? ಆದ್ದರಿಂದ ಸಾದ ಸ್ವಾಮಿಯ ಮಾತನ್ನು ಲೆಕ್ಕಿಸದೆ, ಪೇಜಾವರರ ಶಿಷ್ಯನಿಗೆ ಆ ಜಾಗೆಯನ್ನು ಶೂದ್ರ ಯಡ್ಡಿ ಕರುಣಿಸಿದ್ದಾರೆ. ಶಿವಕುಮಾರ್‌ರನ್ನು ಈಗ ಬೊಮ್ಮಾಯಿ ಉಸ್ತುವಾರಿ ವಹಿಸಿರುವ ಬೆಳಗಾವಿಗೆ ವರ್ಗಾಯಿಸಲಾಗಿದೆ.

ಈ ಎಲ್ಲ ಜಾತಿ ಲೆಕ್ಕಾಚಾರಗಳ ನಡುವೆಯೂ ಔರಾಧಕರ ಪ್ರಾಮಾಣಿಕ ಮತ್ತು ಟಫ್ ಅಧಿಕಾರಿ ಎಂಬುದು ಅವಳಿನಗರದ ಖದೀಮರಿಗೆ ಗೊತ್ತಾಗಿದೆ. ಅದಕ್ಕೇ ಅವರು ಚಾರ್ಜ್ ತೆಗೆದುಕೊಂಡಾಗಿನಿಂದ ಇಲ್ಲಿನ ಅಕ್ರಮ ವ್ಯವಹಾರದ ಕುಳಗಳು ದಂಗಾಗಿದ್ದಾರೆ.

ಮೂಡಿಗೆರೆ: ಚೆಡ್ಡಿಗಳಿಂದ ಪೋಲೀಸರಿಗೇ ಗೂಸಾ!

[illegible]ಯಲ್ಲಿ ಪೋಲೀಸರೊಂದಿಗೆ ಮಿಲಾಖತ್ [illegible]ವ ಚೆಡ್ಡಿಗಳು ಅಲ್ಪಸಂಖ್ಯಾತರನ್ನು ಯಶಸ್ವಿ[illegible] [illegible] ತುಳಿದವರು. ಕೆಲವೊಮ್ಮೆ [illegible]ಬಿಟ್ಟರು. ಮೊನ್ನಿನ ಚುನಾವಣೆಗಳಲ್ಲಿ ಉಡುಪಿ-[illegible]ಮತ್ತು ಮಂಗಳೂರುಗಳಲ್ಲಿ ಚೆಡ್ಡಿಗಳು [illegible] ಸಾಧ್ಯವಾಯಿತು. ಆದರ ಉಪಟಳ [illegible] ತಮ್ಮ ದುಂಡಾವರ್ತಿಗೆ ಪೊಲೀಸರು ಸಹಕರಿಸ[illegible]ವರಿಗೂ ಗತಿ ಕಾಣಿಸಲಾಗುವುದೆಂದು ಚೆಡ್ಡಿಗಳ [illegible]ಗಿರುವ ಭಜರಂಗಿಗಳು ನಿರ್ಧರಿಸಿರುವಂತಿದೆ. [illegible]ಸಲ್‌ನಂತೆ ಮೊನ್ನೆ ಮೂಡಿಗೆರೆಯಲ್ಲಿ ಕೆಲ [illegible] ನಡೆದಿವೆ.

[illegible]ಡಿಗೆರೆಯ ಕಸಬಾ ಹೋಬಳಿ ಬಿಜೆಪಿ ಕಾರ್ಯ[illegible] [illegible]ಚಾಕ್ಷರಿ ಎಂಬಾತನಿಗೆ [illegible]ಲೀಸರು ಸಾರ್ವಜನಿಕ [illegible] ಬಾರಿಸಿದ್ದಾರೆ. ಈತನೊಬ್ಬ [illegible]ಬುದು ಗೊತ್ತಾಗದೇ [illegible]ಮಿನ 'ಸ್ಟೈಲ್'ನಲ್ಲಿ ಪೊಲೀ[illegible] ಕೆಲಸ ಮುಗಿಸಿದ್ದಾರೆ. [illegible]ತತು ಅವಮಾನವನ್ನು ಅದು ಹೇಗೆ ಸಹಿಸಿ[illegible] ಅದೂ ತಮ್ಮ ಸರ್ಕಾರ[illegible]? ಆಚಾರ್ಯನೆಂಬ ಪರಮ ಚೆಡ್ಡಿಯೇ ಗೃಹ [illegible]ರಾಗಿರುವಾಗ? ಹೀಗೆಂದು ಲೆಕ್ಕ ಹಾಕಿದ [illegible]ಳದ ಚೆಡ್ಡಿಗಳ ಪರಿವಾರ ಪೊಲೀಸ್ ಠಾಣೆಗೆ [illegible]ಗಳಾದ ನಾಗೇಶ್ ಮತ್ತು ತಿಪ್ಪೇಶ್ ಎಂಬಿಬ್ಬರನ್ನು [illegible] ದನಕ್ಕೆ ಬಡಿದಂತೆ ಬಡಿದಿದ್ದಾರೆ.


ಸುರೇಶ್ ಶೆಟ್ಟಿ

[illegible]ಕಾಲದೆಂಬಂತೆ ಮರುದಿನವೇ ವಿಶ್ವ ಹಿಂದೂ [illegible] ತಾಲ್ಲೂಕು ಸಂಚಾಲಕ ಕಮ್ ಅತಿಥಿ [illegible]ನ ಮಾಲೀಕ ಸುರೇಶ್ ಶೆಟ್ಟಿಯನ್ನು ಭಜರಂಗ [illegible]ಯೊಂದು ನೆಲಕ್ಕೆ ಕೆಡವಿ ಹಾಕಿ ಆತನ ಗ್ರಹಚಾರ [illegible]ಸಿ...

[illegible]ನಿದು ಚೆಡ್ಡಿಗಳ ದಾಂಧಲೆ?


[illegible]ಚೆಗಷ್ಟೆ ಒಂದು ರಸ್ತೆ ಅಪಘಾತ ನಡೆದು ಅದರಲ್ಲಿ [illegible]ಹುಡುಗನೋರ್ವ ಸವಾರಿ ಮಾಡುತ್ತಿದ್ದ ಬೈಕಿಗೆ [illegible] ಹುಡುಗನೋರ್ವ ಚಲಾಯಿಸುತ್ತಿದ್ದ ಕಾರು [illegible] ಕೇಸು ಸರಿಯಾಗಿ ಠಾಣೆಯ ಮೆಟ್ಟಲೇರಿದ್ದರೆ [illegible]ಯ ಮಾರಾಮಾರಿ ನಡೆಯುತ್ತಿರಲಿಲ್ಲ. ಆದರೆ [illegible] ಠಾಣೆಯನ್ನು ಪ್ರವೇಶಿಸದಂತೆ ನೋಡಿಕೊಂಡ [illegible] ಗ್ರಾಮದ ಕಸಬಾ ಹೋಬಳಿಯ ಬಿಜೆಪಿ [illegible]ರ್ಶಿ ಪಂಚಾಕ್ಷರಿ ಆನಂತರ ರಾಜಿ ಸಂಧಾನ [illegible]ರಿಹರಿಸಿಕೊಡುವುದಾಗಿ ಭರವಸೆ ನೀಡಿದ.

[illegible]ದಂತೆ ಆತ ಸಂಧಾನದ ಮುಂದಾಳತ್ವ ವಹಿಸಿ [illegible] ಕಡೆಯವರನ್ನು ಪ್ರವಾಸಿ ಮಂದಿರದ ಬಳಿ [illegible]ಗೆ ಕರೆಸಿದ. ಆಗ ಸಂಧಾನದಲ್ಲಿ ಚೌಕಾಸಿ [illegible]ದೆ ಧಾರ್ಮಿಕ ಭಾವನೆಗಳನ್ನೂ ಕೆರಳಿಸಲಾಯಿತು. [illegible] ಕಡೆಯವರ ನಡುವೆ ಮಾತು ತಾರಕಕ್ಕೇರಿ ಕೈಕೈ [illegible]ಸುವ ಹಂತಕ್ಕೆ ಬಂತು. ಹತ್ತಿರದಲ್ಲಿದ್ದ ಯಾರೋ [illegible] ಮೊಬೈಲ್ ಮೂಲಕ ಪೊಲೀಸ್ ಠಾಣೆಗೆ [illegible] "ಪ್ರವಾಸಿ ಮಂದಿರದ ಬಳಿ ಗಲಾಟೆ ನಡೆಯು[illegible]ಗ ಬನ್ನಿ" ಅಂದ.

[illegible]ವಲೇ ಪಿಎಸ್‌ಐ ಶಿವಲಿಂಗಯ್ಯ ಎಂಬ ಹಲಸಿನ [illegible]ಜೊತೆ ತಿಪ್ಪೇಶ್ ಮತ್ತು ಸುಬ್ರಮಣ್ಯ ಎಂಬ [illegible] ಲಾಠಿ ಹಿಡಿದು ಪ್ರತ್ಯಕ್ಷರಾದರು. ಖಾಕಿ ತೊಟ್ಟ[illegible]ಂದರೆ ಕೇಳಬೇಕೆ? ಕೈ ಉದ್ದುದ್ದ ಮಾಡಿ [illegible]ಸುತ್ತಿದ್ದ ರಾಜಿ ಸಂಧಾನಕಾರ ಪಂಚಾಕ್ಷರಿಯ[illegible] ತಿಪ್ಪೇಶ್ ತನ್ನ ಲಾಠಿ ಬಾರಿಸಿದ್ದಾನೆ.

ಈ ಪಂಚಾಕ್ಷರಿ ಸಾಮಾನ್ಯ ಮನುಷ್ಯನಲ್ಲ, ಎಲ್ಲರನ್ನು ಹೆದರಿಸಿ, ಬೆದರಿಸಿ ತನ್ನ ಕೆಲಸ ಮಾಡಿಸಿಕೊಳ್ಳುವುದರಲ್ಲಿ ಈತ ಎತ್ತಿದ ಕೈ. ತನ್ನ ಬಾವನ ಆಸ್ತಿಯನ್ನು ಮರೆಮಾಚಿ ತಹಸೀಲ್ದಾರರನ್ನು ಹೆದರಿಸಿ ಕಂದಾಯ ಭೂಮಿಯೊಂದಕ್ಕೆ ಬೇಲಿ ಸುತ್ತಿಕೊಂಡು ಸುಳ್ಳು ದಾಖಲೆ ಸೃಷ್ಟಿಸಿಕೊಂಡಿರುವ ಭೂಪನೀತ.

ಸಾರ್ವಜನಿಕವಾಗಿ ಲಾಠಿ ರುಚಿಯನ್ನು ಅನುಭವಿಸಿದ ಘೋರ ಅವಮಾನದಿಂದ ಉಗ್ರಗೊಂಡ ಪಂಚಾಕ್ಷರಿ ಪೊಲೀಸರ ಮೇಲೆ ಎಗರೆಗರಿ ಬೀಳತೊಡಗಿದ್ದಾನೆ. ಆತನನ್ನು ನಿಯಂತ್ರಿಸಲು ಶಿವಲಿಂಗಯ್ಯ ಆತನ ಕೊರಳ ಪಟ್ಟಿ ಹಿಡಿದು ಜಗ್ಗಾಡಿದ್ದಾರೆ. ಅದೇ ಹೊತ್ತಿಗೆ ನಾಗೇಶ್ ಎಂಬ ಮತ್ತೊಬ್ಬ ಪೇದೆಯ ಆಗಮನವಾಗಿದೆ. "ನಮ್ಮ ಸಾಹೇಬ್ರು ಯಾರೋ ಪಿಕ್‌ಪಾಕೇಟರನ್ನು ಹಿಂಡ್ಕಂಡಿರಬೇಕು" ಅಂದುಕೊಂಡವನೆ ಪಂಚಾಕ್ಷರಿಯ ಅಂಡು, ಬೆನ್ನು, ಕೈಕಾಲು ಎಂದೆಲ್ಲ ನೋಡದೇ ಪಟಪಟನೆ ಲಾಠಿಯ ರುಚಿ ತೋರಿಸಿ ಬಿಟ್ಟಿದ್ದಾನೆ.


ಶಿವಲಿಂಗಯ್ಯ


ಠಾಣೆಗೆ ಮುತ್ತಿಗೆ

ತಮ್ಮ ಅನುಯಾಯಿಗೆ ಸಾರ್ವಜನಿಕರು ಓಡಾಡುವ ಸ್ಥಳದಲ್ಲೇ ಪೊಲೀಸರು ಬಡಿದರು ಎನ್ನುವುದು ಭಜರಂಗಿಗಳಿಗೆ ಗೊತ್ತಾಗಿದ್ದೇ ತಡ ಅವರು ಅಲರ್ಟ್ ಆಗಿದ್ದಾರೆ. ಇದನ್ನು ಹೀಗೆ ಬಿಟ್ಟರೆ ಮುಂದಿನ ದಿನಗಳಲ್ಲಿ ತಮ್ಮ ಪರಿಸ್ಥಿತಿ ಅಧೋಗತಿಗಿಳಿಯುವ ಅಪಾಯವಿದೆ, ತಾವು ತಮ್ಮವರನ್ನು ಬಿಟ್ಟುಕೊಡಬಾರದು, ಇನ್ನು ಮುಂದೆ ಯಾರೂ ತಮ್ಮವರ ಮೈ ಮುಟ್ಟಕೂಡದು ಎಂದೆಲ್ಲ ಈ ವಾನರರು ನಿರ್ಧರಿಸಿದ್ದಾರೆ. ತಾವೆಲ್ಲ ಒಂದು ಸೂಕ್ತ ಎಚ್ಚರಿಕೆಯನ್ನು ರವಾನಿಸಿ ಮುಂದಾಗುವ ಅನಾಹುತಗಳನ್ನು ತಡೆಯಬೇಕೆಂದು ಮಾತಾಡಿಕೊಂಡಿದ್ದಾರೆ. ಅಷ್ಟೇ ಅಲ್ಲ, ತಮ್ಮದೇ ಪಕ್ಷದ ಸರಕಾರವಿದೆ, ಸಂಸದರಿದ್ದಾರೆ, ಶಾಸಕರಿದ್ದಾರೆ ಎಂದು ಲೆಕ್ಕಹಾಕಿ ತಮಗೆ ಪೊಲೀಸರಿಂದ ಯಾವ ಅಪಾಯವೂ ಇಲ್ಲ ಎಂದು ನಿರ್ಧರಿಸಿದ್ದಾರೆ. ಆನಂತರ ಅರವತ್ತು ಜನರಿದ್ದ ಪಡೆಯೊಂದು ಠಾಣೆಯ ಮುಂದೆ ಜಮಾಯಿಸಿದೆ. ಅವಾಚ್ಯ ಬೈಗುಳ, ಧಿಕ್ಕಾರ, ಘೋಷಣೆಗಳ ಸುರಿಮಳೆಯಿಂದಾಗಿ ಉದ್ರೇಕಿತಗೊಂಡಿದ್ದ ಆ ಗುಂಪು ಠಾಣೆಯ ಒಳಗೆ ನುಗ್ಗಿ ಅಲ್ಲಿಂದ ಪೊಲೀಸ್ ಪೇದೆಗಳಾದ ತಿಪ್ಪೇಶ್ ಮತ್ತು ನಾಗೇಶ್‌ರನ್ನು ಹೊರಗೆಳೆದು ದನಕ್ಕೆ ಬಡಿದಂತೆ ಬಡಿದು ಹಾಕಿದ್ದಾರೆ.



ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದರೆ ಸಾಮಾನ್ಯ ಜನರಿರಲಿ, ಸ್ವತಃ ಪೊಲೀಸರಿಗೂ ಚೆಡ್ಡಿಗಳಿಂದ ರಕ್ಷಣೆ ಇರಲ್ಲ ಎಂಬುದಕ್ಕೆ ಈ ಪ್ರಕರಣವೊಂದೇ ಸಾಕ್ಷಿಯಲ್ಲವೇ? ಕಾನೂನು ಸುವ್ಯವಸ್ಥೆ ಕಾಪಾಡಬೇಕಿರುವ, ಅರಾಜಕತೆ, ಹಿಂಸೆ, ದೊಂಬಿ ನಡೆಯದಂತೆ ನೋಡಿಕೊಳ್ಳಬೇಕಿರುವ, ಜನಸಾಮಾನ್ಯರಿಗೆ ರಕ್ಷಣೆ ಕೊಡಬೇಕಿರುವ ಖಾಕಿಪಡೆಗಳಿಗೇ ಈ ಸ್ಥಿತಿಯಾದರೆ ಮುಂದೆ ಸಾಮಾನ್ಯರ ಗತಿ? ಎಂದು ಜನ ಈಗ ಮೂಗಿನ ಮೇಲೆ ಬೆರಳಿಟ್ಟುಕೊಂಡಿದ್ದಾರೆ.

ಯಾವಾಗ ಈ ಮಂಗಗಳು ಹದ್ದು ಮೀರಿ ವರ್ತಿಸಿದ್ದಾರೆ ಅಂತ ಚೆಡ್ಡಿ ನಾಯಕರಿಗೆ ಗೊತ್ತಾಯಿತೋ ಅವರೆಲ್ಲಾ ಹೌಹಾರಿದ್ದಾರೆ. ಏನೇ ಆದರೂ ಈ ವಾನರರಿಗೆ ತೊಂದರೆ ಆಗದಂತೆ ನೋಡಿಕೊಳ್ಳಲು ಮುಂದಾಗಿದ್ದಾರೆ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ನಾಗರಾಜ್‌ರನ್ನು ಮೂಡಿಗೆರೆಗೆ ಕರೆಸಿ ಕೇಸು ಹಳ್ಳ ಹಿಡಿಯುವಂತೆ ಮಾಡಲು ಹರಸಾಹಸ ಪಟ್ಟಿದ್ದಾರೆ. ಆದರೆ ನಾಗರಾಜ್‌ರವರಿಗೆ ಅದೇನನ್ನಿಸಿತೋ ಏನೋ? ಎರಡೂ ಕಡೆಯವರಿಂದ ದೂರು ದಾಖಲಿಸಿ ಕೊಳ್ಳುವಂತೆ ಪಿ.ಎಸ್.ಐ. ಶಿವಲಿಂಗಯ್ಯರಿಗೆ ಸೂಚಿಸಿ ಹೊರನಡೆದಿದ್ದಾರೆ.


ಪಂಚಾಕ್ಷರಿ

ಪೇದೆ ನಾಗೇಶ್ ಮನೆಯಲ್ಲಿ ಮರದ ದಾಸ್ತಾನು

ಕೇಸು ಹಳ್ಳಹಿಡಿಸುವಲ್ಲಿ ಹೀಗೆ ಸೋತ ಚೆಡ್ಡಿಗಳು ಅಲ್ಲಿಗೆ ಸುಮ್ಮನಾಗಲಿಲ್ಲ, ಅವರು ಒಂದು ಸಂಚನ್ನೇ ರೂಪಿಸಿದರು.

ಮರುದಿನ ಕೋಳಿ ಕೂಗುವ ಮುನ್ನವೇ ಅರಣ್ಯಾಧಿಕಾರಿ ರಮೇಶ್ ಬಾಬು ನೇತೃತ್ವದ ತಪಾಸಣಾ ತಂಡವೊಂದು ಪೇದೆ ನಾಗೇಶ್ ಮನೆ ಮೇಲೆ ದಾಳಿ ನಡೆಸಿತು. ಹಿಂದಿನ ದಿನ ಚೆಡ್ಡಿಗಳಿಂದ ಪೆಟ್ಟು ತಿಂದಿದ್ದ ನಾಗೇಶ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ. ಆದರೆ ಆತನ ಮನೆ ಮೇಲೆ ದಾಳಿ ಮಾಡಿದ ಅಧಿಕಾರಿಗಳು ಅಲ್ಲಿ ತಮಗೆ 45 ಬೀಟೆ ತುಂಡು ಮತ್ತು 5 ಸಾಗುವಾನಿ ಮರ ತುಂಡುಗಳನ್ನು ಅಕ್ರಮ ದಾಸ್ತಾನು ಮಾಡಿದ್ದು ಸಿಕ್ಕಿದೆಯೆಂದು ಹೇಳಿ ನಾಗೇಶನ ವಿರುದ್ಧ ಕೇಸು ದಾಖಲಿಸಲು ಸಿದ್ಧರಾದರು. ಆದರೆ ಸಂಜೆ ಹೊತ್ತಿಗೆ ಅದು ಅಕ್ರಮ ಮರವಲ್ಲ, ಬದಲಾಗಿ ಸಾಮಿಲ್‌ವೊಂದರಿಂದ ಖರೀದಿ ಮಾಡಿದ್ದೇನೆ ಎಂದು ನಾಗೇಶ್ ರಶೀದಿ ತಂದು ತೋರಿಸಿದ. ಇದರಿಂದಾಗಿ ಆತನ ವಿರುದ್ಧ 'ಖಚಿತ' ಮಾಹಿತಿ ನೀಡಿದ್ದ ಭಜರಂಗಿ ಹಿಂದಿಗೆ ಹಿನ್ನಡೆಯುಂಟಾಯಿತು.

ಅತಿಥಿ ಹೋಟೆಲ್ ಮೇಲೆ ದಾಂಧಲೆ

ಇದೆಲ್ಲಾ ರಾದ್ಧಾಂತ ನಡೆದ ಮರುದಿನವೇ ಭಜರಂಗ ದಳದ ಮತ್ತೊಂದು ಪಡೆ ತನ್ನ ಸಹೋದರ ಸಂಘಟನೆಯಾದ ವಿಶ್ವ ಹಿಂದೂ ಪರಿಷತ್‌ನ ಸಂಚಾಲಕನ ಹೋಟೆಲ್‌ಗೆ ನುಗ್ಗಿ ದಾಂಧಲೆ ನಡೆಸಿದ ವಿಚಿತ್ರ ಪ್ರಕರಣವೊಂದು ನಡೆಯಿತು.

ಈ ಹಿಂದೆ ಕಾಂಗ್ರೆಸ್‌ನ ಮೋಟಮ್ಮನವರು ಮೂಡಿಗೆರೆಯ ಶಾಸಕರಾಗಿದ್ದಾಗ ಇದೇ ಹೋಟೆಲ್‌ಅನ್ನು ಪೊಲೀಸರು ರೇಡ್ ಮಾಡಿದ್ದರು. ಅಂದು ಮೋಟಮ್ಮನ ಮನೆ ಮೇಲೆ ಕಲ್ಲು ತೂರಿ [illegible] [illegible] [illegible] ಕೂಡಲೇ [illegible] [illegible]ಕುಮಾರ್ ಮತ್ತು [illegible]ಲೇಂದ್ರ ಕುಮಾರ್ ಈ ಹೋಟೆಲ್ ಮೇಲೆ ದಾಳಿ ನಡೆ[illegible] [illegible] ಹಡ ಮುರಿ ಕಟ್ಟಿ ಠಾಣೆಯೊಳಗೆ ಕೂಡಿಹಾಕಿದ್ದರು. ಆ ಪ್ರಕರಣದ ನಂತರ ಅತಿಥಿ ಹೋಟೆಲ್ ಬಿಜೆಪಿ ಮತ್ತು ಸಂಘ ಪರಿವಾರದ ಅನಧಿಕೃತ ಕಚೇರಿಯಾದಂತಾಗಿತ್ತು.

ಮೊನ್ನೆ ಅದ್ಯಾವುದೋ ವಿಷಯಕ್ಕೆ ಸಂಬಂಧಿಸಿದಂತೆ ಮಾಕೋನಹಳ್ಳಿಯ ಅವಿನಾಶ್ ಮತ್ತು ಕಣಚೂರಿನ ಭಜರಂಗ ದಳದ ಮೂಡಿಗೆರೆ ತಾಲ್ಲೂಕು ಸಂಚಾಲಕ ವಿನೋದ್ ನಡುವೆ ಇದೇ ಹೋಟೆಲ್‌ನ ಆವರಣದಲ್ಲಿ ಮಾತಿನ ಚಕಮಕಿ ನಡೆದಿದೆ. ಆಗ ಮಧ್ಯ ಪ್ರವೇಶಿಸಿದ ಹೋಟೆಲ್ ಮಾಲೀಕ ಸುರೇಶ್ ಶೆಟ್ಟಿ ಇವರ ಜಗಳವನ್ನು ತಡೆಯಲು ಪ್ರಯತ್ನಿಸಿದ್ದಾನೆ. ಆದರೆ ಅವರಿಬ್ಬರ ಮಾತು ವಿಪರೀತವಾದಾಗ 'ಗೆಟ್ ಔಟ್' ಅಂತ ಅವರನ್ನು ಹೋಟೆಲ್ ನಿಂದ ಹೊರದಬ್ಬಿದ್ದಾನೆ.

ಈ ಅವಮಾನದಿಂದ ಕೆರಳಿದ ವಿನೋದ್ ಕಣಚೂರು ಭಾಗದಲ್ಲಿರುವ ಅಷ್ಟೂ ಭಜರಂಗ ದಳದ ಹುಡುಗ ರನ್ನು ಕರೆತಂದು ಹೋಟೆಲ್‌ನ ಒಳಗೆ ನುಗ್ಗಿದ್ದಾನೆ. ಅವರೆಲ್ಲ ಅಂದು ಅತಿಥಿ ಹೋಟೆಲ್‌ನಲ್ಲೇ ಸುರೇಶ್ ಶೆಟ್ಟಿಯ ತಿಥಿ ಮಾಡುವ ಉಮೇದಿನಲ್ಲಿದ್ದರು. ಕೈಗೆ, ಕಾಲಿಗೆ ಸಿಕ್ಕಿದ್ದನ್ನೆಲ್ಲ ಮುಡಿಗಟ್ಟಿದರು. ಆ ದಾಂಧಲೆಯಲ್ಲಿ ಸುರೇಶ್ ಶೆಟ್ಟಿಯ ನಾಲ್ಕು ಹಲ್ಲುಗಳು ಉದುರಿದವು. ಆತನ ಅಂಗಿಯೆಲ್ಲ ರಕ್ತವಾಗಿ ಆತನು ರಕ್ತ ಕಾರುತ್ತಾ ನೆಲಕ್ಕೆ ಬಿದ್ದದ್ದನ್ನು ಕಂಡು ಹೆದರಿದ ಭಜರಂಗಿ ಪಟಾಲಂ ಅಲ್ಲಿಂದ ಕಾಲ್ಕಿತ್ತಿದೆ.

ಈ ಪ್ರಕರಣ ಕುರಿತು ದೂರು ದಾಖಲಿಸಿಕೊಳ್ಳುವಾಗ ಅಲ್ಲಿನ ಪೊಲೀಸರು ರಾಜಕೀಯ ಮಾಡಿದ್ದಾರೆ. ಆರೋಪಿಗಳನ್ನು ಕೊಲೆ ಯತ್ನ ಕಾನೂನಿನಿಂದ ಬಚಾವ್ ಮಾಡಿ ಪೊಲೀಸರು ಪುಣ್ಯ ಕಟ್ಟಿಕೊಂಡಿದ್ದಾರೆ. ದಾಂಧಲೆ ನಡೆಸಿದ ಗುಂಪಿನಲ್ಲಿ ಮೂವತ್ತಕ್ಕೂ ಹೆಚ್ಚು ಮಂದಿ ಇದ್ದರಾದರೂ ಕೇವಲ ಎಂಟು ಜನರ ವಿರುದ್ಧ ದೂರನ್ನು ದಾಖಲು ಮಾಡಲಾಗಿದೆ.

ಠಾಣೆಗೆ ಸಭ್ಯಸ್ಥರು ಪ್ರವೇಶಿಸಲು ಹಿಂಜರಿಯುತ್ತಾರೆ

ಮೂಡಿಗೆರೆಯಲ್ಲಿ ಠಾಣಾಧಿಕಾರಿ ಶಿವಲಿಂಗಯ್ಯ ಇರುವತನಕ ಇಂತಹ ಗೂಂಡಾಗಿರಿಯೆಲ್ಲ ಮಾಮೂಲಿ, ಬಿಡಿ. ಈತ ಅದೆಷ್ಟೊ ಕೇಸುಗಳನ್ನು ಹಳ್ಳ ಹಿಡಿಸಿದ್ದಾನೆ. ಚೆಡ್ಡಿ ಪರಿವಾರದ ಪಾಲಿಗೆ ಸಾಕ್ಷಾತ್ ಭಗವಂತನಂತಿರುವ ಈತ ಮುಸ್ಲಿಂರ, ದಲಿತರ, ಬಡವರ ಮೇಲೆ ಸುಳ್ಳು ದೂರು ದಾಖಲು ಮಾಡುವುದರಲ್ಲಿ ಎತ್ತಿದ ಕೈ.

ಗೋ ರಕ್ಷಣೆಯ ಹೆಸರಿನಲ್ಲಿ, ಹುಡುಗಿಯರ ಚುಡಾಯಿಸಿದ ನೆಪದಲ್ಲಿ, ನಕ್ಸಲೀಯ ಚಟುವಟಿಕೆ ವಿಚಾರದಲ್ಲಿ, ಅಪಘಾತ ವಿಷಯಗಳಲ್ಲಿ ಚೆಡ್ಡಿಗಳು ಯಾರನ್ನಾದರೂ ಹೊಡೆದು, ಬಡಿದು, ಮೆರವಣಿಗೆ ಮಾಡಿ, ಠಾಣೆಗೆ ಎಳೆದು ತಂದರೆ ಅವರಿಂದ ದೌರ್ಜನ್ಯಕ್ಕೆ ಗುರಿಯಾದವರ ಮೇಲೆಯೇ ಈ ಶಿವಲಿಂಗಯ್ಯ ಕೇಸು ದಾಖಲು ಮಾಡಿಕೊಳ್ಳುತ್ತಾನೆ, ದೌರ್ಜನ್ಯ ನಡೆಸಿದವರು ಸಮಾಜ ಸೇವಕರೆಂದು ಅವರನ್ನು ಬಿಟ್ಟುಬಿಡುತ್ತಾನೆ.

ಇದೇ ಕಾರಣಕ್ಕಾಗಿ ಠಾಣಾಧಿಕಾರಿ ಶಿವಲಿಂಗಯ್ಯ ಇರುವತನಕ ಸಭ್ಯಸ್ಥರು ಠಾಣೆಯನ್ನು ಪ್ರವೇಶಿಸಲು ಹಿಂಜರಿಯುತ್ತಾರೆ. ತನ್ನ ಪೊಲೀಸ್ ಪೇದೆಗಳಿಗೇ ರಕ್ಷಣೆ ನೀಡಲಾಗದವನಿಂದ ಜನಸಾಮಾನ್ಯರಿಗೆ ಅದೆಂತಹ ರಕ್ಷಣೆ ಸಿಗಬಹುದು?!

● ಅಜೀಜ್ ಕಿರುಗುಂದ

[illegible]ಂಗಳೂರು: ಜಯಂತ್ ಶೆಟ್ಟಿಯೆಂಬ ರೆಸಾರ್ಟ್ ಪೊಲೀಸ್!

[illegible] ಇದು ಚೆಡ್ಡಿ ಸರ್ಕಾರ. ಅದರಲ್ಲೂ [illegible] ಚೆಡ್ಡಿ ಲೀಡರ್ [illegible] ಪಿ.ಎಸ್. [illegible] ಕಾರ್ಡ್‌ಕೋರ್ ಆರೆಸ್ಸೆಸಿಗ ಇಲ್ಲಿ [illegible] [illegible] [illegible] ಬೇಕು ಕರಾವಳಿಯ [illegible]?

ಕರಾವಳಿಯಲ್ಲಿ ಪೊಲೀಸರು ಮತ್ತು [illegible] [illegible] [illegible] [illegible] ಅಷ್ಟೇ. ಅದಕ್ಕೆ [illegible]

[illegible]



ಅಸಹಾಯಕರಿಗೆ ನೆರವು ನೀಡುತ್ತಿದ್ದ ನೌಶಾದ್ ಕಾಶಿಂಜಿಯವರ ಹತ್ಯೆಯಾಗಿ ಹಲವಾರು ತಿಂಗಳುಗಳೇ ಆದರೂ, ಪೊಲೀಸ್ ತನಿಖೆಯಲ್ಲಿ ಪ್ರಗತಿಯಿಲ್ಲ, ನೌಶಾದರ ಕೊಲೆಯ ಹಿಂದೆ ಮಂಗಳೂರಿನ ಕುಖ್ಯಾತ ಪೊಲೀಸ್ ಕೂಟ J ಕಂಪೆನಿಯೆಂದರೆ ಪೊಲೀಸ್ ಅಧಿಕಾರಿ ಜಯಂತ್ ಶೆಟ್ಟಿಯ ಖಾಕಿ ಗ್ಯಾಂಗ್ ಇದೆ! ನೌಶಾದ್ ತನಿಖೆಯ ಕೊಲೆ ಆರೋಪಿಗಳೆನ್ನಿಸಿಕೊಂಡ ಜಯಂತ್ ಶೆಟ್ಟಿ ನೇತೃತ್ವದ ಪೊಲೀಸ್ ತಂಡಕ್ಕೇ ತನಿಖೆಯ ಜವಾಬ್ದಾರಿ ನೀಡಿಬಿಟ್ಟಿತು ಗೃಹ ಇಲಾಖೆ! ಕಳ್ಳನ ಕೈಗೇ ಮನೆಯ ಬೀಗ ಕೊಟ್ಟಂತಾಯ್ತು, ಅದರ ಪರಿಣಾಮವನ್ನು ಈಗ ನೋಡ್ತಾ ಇದ್ದೇವೆ. ಯಾರನ್ಯಾರನ್ನೋ ಬಂಧಿಸಿದ ಪೊಲೀಸರು ಪಾಪ, ಮೂಕ, ಸೇಫ್! ಯಾಕೆಂದರೆ ಹಿಂದೆ [illegible] ಗೋಮುಖ [illegible] ಆಚಾರ್ಯ ಎಂಬ ಪೊಲೀಸ್ ಮಂತ್ರಿ!!

ಈ ಜಯಂತ್ ಶೆಟ್ಟಿ ಎಂಬ ಪೊಲೀಸ್ ಅಧಿಕಾರಿ ಕಮ್ ಪೊಲೀಸ್ ವ್ಯಾಪಾರಿ ಮಂಗಳೂರು ತಾಲ್ಲೂಕಿನ ಸೋಮೇಶ್ವರ ಗ್ರಾಮದ ಕಡಲ ತೀರದಲ್ಲಿ ಭವ್ಯ ರೆಸಾರ್ಟ್ ಹೊಂದಿದ್ದಾನೆ. ಇದು ಕಾನೂನುಬಾಹಿರ ರೆಸಾರ್ಟು. ಕರಾವಳಿ ಮೀಸಲು ಪ್ರದೇಶದಲ್ಲಿ ಇಂತಹ ರೆಸಾರ್ಟ್ ಆರಂಭಿಸಲು ಕಾನೂನಿನಲ್ಲಿ ಸಮ್ಮತಿ ಇಲ್ಲ, ಆದರೆ ಹದಟೆ ದುಡ್ಡಿನ ಚೆಡ್ಡಿ ಜಯಂತ್‌ಗೆ ಇದ್ಯಾವುದೂ ಲೆಕ್ಕಕ್ಕೇ ಇಲ್ಲ.

ರೆಸಾರ್ಟ್ ಹಿಸ್ಟರಿ.....

ಕೆಲ ವರ್ಷಗಳ ಹಿಂದೆ ಬೋವಿ ಜನಾಂಗದ ದಿನಕರ್ ಉಳ್ಳಾಲ್ ಎಂಬುವವರು ತನ್ನ ಒಡೆತನದ ಒಂದು ರೆಸಾರ್ಟ್‌ನ್ನು ಮಂಗಳೂರಿನ ಬಿಲ್ಡರ್ ಸುರೇಶ್ ಭಂಡಾರಿ ಎಂಬುವವರಿಗೆ ಮಾರಿದ್ದರು. ಎರಡು ವರ್ಷದ ಹಿಂದೆ ಭಂಡಾರಿ ಅದನ್ನು ಕುಖ್ಯಾತ ಪೊಲೀಸ್ ಅಧಿಕಾರಿ ಜಯಂತ್ ಶೆಟ್ಟಿಗೆ ಮಾರಿದರು. ಜಯಂತ್ ಹೆಂಡತಿಯ ಹೆಸರಲ್ಲಿ ಕಾಗದಪತ್ರಗಳು ರೆಡಿಯಾದವು. ನಿಷೇಧಿತ ಪ್ರದೇಶದಲ್ಲಿನ ಕಾನೂನುಬಾಹಿರ ರೆಸಾರ್ಟುಗಳನ್ನು ಮುಚ್ಚಿಸಬೇಕಾಗಿದ್ದ ಓರ್ವ ಪೊಲೀಸ್ ಅಧಿಕಾರಿಯೇ ಅಲ್ಲಿ



ರೆಸಾರ್ಟು ನಡೆಸುತ್ತಾನೆಂದರೆ? ಆತನೆಂತಹ [illegible] ಇರಬಹುದು ಅಲ್ಲವೆ?

ಈತನ ಬೇನಾಮಿ ರೆಸಾರ್ಟು, ಬೇನಾಮಿ ಆಸ್ತಿಗಳ ಕುರಿತು ತನಿಖೆಯಾದರೆ ಅದೆಷ್ಟೋ ಸತ್ಯಗಳು ಹೊರಬೀಳಲಿವೆ. ಹಾಗೆಯೇ ಮಂಗಳೂರಿನ ಕೋಮುವಾದಿ ರಾಜಕಾರಣದಲ್ಲಿ ರಾಜಕಾರಣಿಗಳು, ಪೊಲೀಸರ ನಡುವಿನ ಗುಪ್ತ ಹೊಂದಾಣಿಕೆಗಳೂ ಬಯಲಿಗೆ ಬರಲಿವೆ.

ಗೃಹಮಂತ್ರಿಯೇ ಚೆಡ್ಡಿಯೊಬ್ಬನ ಜೇಬಿನಲ್ಲಿ ಬಿದ್ದಿರುವಾಗ [illegible] ಮಾಡುವವರ್ಯಾರು! [illegible] [illegible] [illegible] [illegible] [illegible]!


● [illegible]

ಕನ್ನಡ ಸಾಹಿತ್ಯದ ಹೊಳೆಗೆ ಹೊಸನೀರು

ಗೌರಿ ಲಂಕೇಶ್ ಪತ್ರಿಕೆಯವರು ನನಗೆ ಹೊಸತಲೆಮಾರಿನ ಲೇಖಕರ ಬಗ್ಗೆ ಬರೆಯಲು ಕೇಳಿದಾಗ, ಕೂಡಲೇ ಒಪ್ಪಿಕೊಂಡೆ. ಕನ್ನಡದಲ್ಲಿ ಸದ್ಯಕ್ಕೆ ಅಕ್ಷರಶಃ ನೂರಾರು ಹೊಸಪೀಳಿಗೆಯ ಪ್ರತಿಭಾವಂತ ಲೇಖಕರು ಬೇರೆಬೇರೆ ಪ್ರಕಾರದಲ್ಲಿ ಬರೆಯುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಹೊಸತಲೆಮಾರಿನ ಲೇಖಕರನ್ನು ಕನ್ನಡ ಸಾಹಿತ್ಯದ ಹೊಳೆಗೆ ನಾನಾ ದಿಕ್ಕುಗಳಿಂದ ಹರಿದುಬಂದ ಹೊಸನೀರು ಎಂದು ಭಾವಿಸಿದ್ದೇನೆ. ಈ ಹೊಳೆನೀರಲ್ಲಿ ಈಜಾಡಿದ, ಕುಡಿದ, ಜಳಕ ಮಾಡಿದ ಅನುಭವಗಳನ್ನು ಈ ಅಂಕಣದಲ್ಲಿ ಹಂಚಿಕೊಳ್ಳುತ್ತೇನೆ.

ಗೌರಿ ಲಂಕೇಶ್ ಪತ್ರಿಕೆಯವರು ನನಗೆ ಹೊಸತಲೆಮಾರಿನ ಲೇಖಕರ ಬಗ್ಗೆ ಬರೆಯಲು ಕೇಳಿದಾಗ, ಕೂಡಲೇ ಒಪ್ಪಿಕೊಂಡೆ. ಕಾರಣ, ನಾನು ಕಳೆದ ಕೆಲವು ವರ್ಷಗಳಿಂದ ಈ ಲೇಖಕರನ್ನು ಓದಿದ ಅನುಭವವನ್ನು ಹಂಚಿಕೊಳ್ಳಬಹುದು ಎಂದು ಅನಿಸಿದ್ದು. ಹೊಸ ಪೀಳಿಗೆಯ ಲೇಖಕರ ಸೃಜನಶೀಲ ಮತ್ತು ಬೌದ್ಧಿಕ ದುಡುಕುಗಳಿಂದ ಕಲಿಯುವ ಕೆಲಸವನ್ನು ಮೊದಲಿಂದಲೂ ಮಾಡಿಕೊಂಡು ಬಂದವನು ನಾನು. ನನಗೆ ಅವರನ್ನು ಓದುವುದು ಮತ್ತು ಚರ್ಚಿಸುವುದು ಖುಷಿಕೊಡುತ್ತದೆ. ಹೋದ ವರ್ಷ ಇದೇ ಹೊಸ ಲೇಖಕರ ಚಿಂತನೆಗಳನ್ನು ಸಂಗ್ರಹಿಸಿ, 'ಹೊಸತಲೆಮಾರಿನ ತಲ್ಲಣ' ಎಂಬ ಕೃತಿಯನ್ನು ಸಂಪಾದಿಸಿ ಪ್ರಕಟಿಸಿದ್ದೆ. ಅದರ ಪ್ರಸ್ತಾವನೆಯಲ್ಲಿ ಅವರ ತಲ್ಲಣಗಳ ಸ್ವರೂಪವನ್ನು ಕುರಿತು ಚರ್ಚೆಯನ್ನೂ ಮಾಡಿದ್ದೆ. ಆದರೆ ಅಲ್ಲಿ ಕನ್ನಡ ಸಾಹಿತ್ಯದ ಈಚಿನ ಪ್ರವೃತ್ತಿಗಳನ್ನು ಹುಡುಕುವುದು ಮುಖ್ಯ ಉದ್ದೇಶವಾಗಿತ್ತು; ಹೀಗಾಗಿ ನಿರ್ದಿಷ್ಟ ಲೇಖಕರ ಮೇಲೆ ಅಥವಾ ಅವರ ಕೃತಿಯ ಮೇಲೆ ಫೋಕಸ್ಸಾಗಿ ಚರ್ಚಿಸುವುದು ಸಾಧ್ಯವಾಗಿರಲಿಲ್ಲ, ಅಲ್ಲಿ ಆಗದ ಕೆಲಸವನ್ನು ಈಗ ಇಲ್ಲಿ ಮಾಡಬಹುದು ಅನಿಸಿತು.

ಈ ಅಂಕಣದಲ್ಲಿ ಈಗಾಗಲೇ ತಮ್ಮ ಕೃತಿಗಳಿಂದ ಮಾನ್ಯತೆ ಪಡೆದು, ಪ್ರೌಢ ಬರಹಗಾರರಾಗಿ ಸ್ಥಾಪಿತರಾಗಿರುವವರನ್ನು ಪರಿಚಯಿಸುವ ಅಗತ್ಯವಿಲ್ಲ ಅನಿಸುತ್ತದೆ. ಬದಲಿಗೆ 25-35ರ ವಯೋಮಾನದ ಪಾಸಿನಲ್ಲಿದ್ದು ಬರೆಯುತ್ತಿರುವ, ತಮ್ಮ ನೆಲೆಯನ್ನು ಇನ್ನೂ ಕಂಡುಕೊಳ್ಳಲು ಹವಣಿಸುತ್ತಿರುವ ಲೇಖಕರನ್ನು ಕುರಿತು ಪರಿಚಯಿಸುವುದು ಉಚಿತವಾಗಿದೆ. ಕನ್ನಡದಲ್ಲಿ ಸದ್ಯಕ್ಕೆ ಅಕ್ಷರಶಃ ನೂರಾರು ಹೊಸಪೀಳಿಗೆಯ ಪ್ರತಿಭಾವಂತ ಲೇಖಕರು ಬೇರೆಬೇರೆ ಪ್ರಕಾರದಲ್ಲಿ ಬರೆಯುತ್ತಿದ್ದಾರೆ. ಅವರು ತಮ್ಮ ಕೃತಿಗಳ ಮೂಲಕ ತಮ್ಮನ್ನು ಓದುಗಲೋಕಕ್ಕೆ ಪರಿಚಯಿಸಿಕೊಂಡಿದ್ದಾರೆ. ಇಂತಹವರನ್ನು ಹೊಸದಾಗಿ ಎಂಬಂತೆ ಪರಿಚಯಿಸುವುದು ಎನ್ನುವುದು ಕೂಡ ಅಷ್ಟು ಸರಿಯಲ್ಲ, ವಾಸ್ತವದಲ್ಲಿ ಇವರ ಕೃತಿಗಳನ್ನು ಓದಿದಾಗ ನಾನು ಅನುಭವಿಸಿದ ಸಂತೋಷವನ್ನು ಹಂಚಿಕೊಳ್ಳುವುದು ಈ ಅಂಕಣದ ಗುಪ್ತ ಉದ್ದೇಶ ಎನ್ನಬಹುದು. ಇಲ್ಲಿ ಇವರ ಕೃತಿಗಳ ವಿಮರ್ಶೆ ಮಾಡುವುದಾಗಲಿ, ಮೌಲ್ಯಮಾಪನ ಮಾಡುವುದಾಗಲಿ, ಇವರ ಮೂಲಕ ಕನ್ನಡ ಸಾಹಿತ್ಯ ಚರಿತ್ರೆಯನ್ನು ರಚಿಸುವುದಾಗಲಿ ಅಷ್ಟು ಮುಖ್ಯವಲ್ಲ. ಇಷ್ಟಾಗಿಯೂ, ಅವರ ಕೃತಿಗಳ ಚರ್ಚೆಯ ಮೂಲಕ ಕನ್ನಡ ಸಾಹಿತ್ಯದ ಚಲನೆ ಯಾವ ದಿಕ್ಕಿನತ್ತ ಇದೆ ಎಂದು ಗೋಚರಿಸಬಹುದು; ಯಾಕೆಂದರೆ, ಸಾಹಿತ್ಯಕ ಚರ್ಚೆಯಲ್ಲಿ



ಒಬ್ಬರ ಮೇಲೆ ಮಾತಾಡುವಾಗ, ಅದು ಪರಂಪರೆಯ ಬಗೆಗಿನ ಚರ್ಚೆಯೂ ಆಗಿರುತ್ತದೆ. ಪರಂಪರೆಯ ಚರ್ಚೆಯು ನಿರ್ದಿಷ್ಟ ಲೇಖಕರ ಉಲ್ಲೇಖವಿಲ್ಲದೆ ಪೂರ್ಣಗೊಳ್ಳುವುದಿಲ್ಲ ಕೂಡ.

ಇಲ್ಲಿಯೇ ಎರಡು ಸಂಗತಿಗಳನ್ನು ಸ್ಪಷ್ಟಪಡಿಸಬೇಕು. ಮೊದಲನೆಯದಾಗಿ-ಈ ಅಂಕಣದಲ್ಲಿ ಕಾಣಿಸಿಕೊಳ್ಳುವ ಹೆಸರುಗಳು ಮಾತ್ರ ಕನ್ನಡದ ಪ್ರತಿಭಾವಂತ ಲೇಖಕರವು, ಉಳಿದವರವಲ್ಲ ಎಂದು ಭಾವಿಸಬೇಕಿಲ್ಲ. ಯಾವುದೇ ಉದ್ದೇಶಕ್ಕೆ ಲೇಖಕರ ಅಥವಾ ಕೃತಿಯ ಆರಿಸಿಕೊಳ್ಳುವಿಕೆಯು ಪರೋಕ್ಷವಾಗಿ ಕೈಬಿಡುವ ಇನ್ನೊಂದು ಆಯಾಮವನ್ನು ಸಹಜವಾಗಿಯೇ ಒಳಗೊಂಡಿರುತ್ತದೆ. ಈ ಹೊರಗಿಡುವಿಕೆ ಭಿನ್ನಮತವನ್ನೂ ವಾಗ್ವಾದವನ್ನೂ ಹುಟ್ಟಿಸುತ್ತದೆ. ಇದು ಸಾಹಿತ್ಯ ಸಂಸ್ಕೃತಿಯಲ್ಲಿ ಹೊಸ ಸಂಗತಿಯಲ್ಲ. ಈ ದೃಷ್ಟಿಯಿಂದ ಇಲ್ಲಿ ನನಗೆ ಓದಲು ಸಾಧ್ಯವಾಗಿರುವ ಲೇಖಕರಷ್ಟೆ ಚರ್ಚೆಗೆ ಒಳಗಾಗಿದ್ದಾರೆ ಎಂದಷ್ಟೆ ಸೂಚಿಸ ಬಯಸುತ್ತೇನೆ. ಎರಡನೆಯದಾಗಿ-ಹೀಗೆ ಲೇಖಕರ ಆಯ್ಕೆ ಮಾಡಿಕೊಳ್ಳುವಾಗ, ಕರ್ನಾಟಕದ ಎಲ್ಲ ಭಾಗಗಳ, ಬರಹದ ಎಲ್ಲ ಪ್ರಕಾರಗಳ, ನಮ್ಮ ಸಮಾಜದ ಎಲ್ಲ ಸ್ತರಗಳಿಂದ ಬಂದ ಲೇಖಕರ ಪ್ರಾತಿನಿಧ್ಯ ಇರುವಂತೆ ನೋಡಿಕೊಳ್ಳಲು ಕೂಡ ಯತ್ನಿಸಬಹುದು.

ಈ ಅಂಕಣಕ್ಕೆ 'ಹೊಳೆಗೆ ಹೊಸನೀರು' ಎಂದು ಹೆಸರಿಟ್ಟುಕೊಂಡಿದ್ದೇನೆ. ಇದು ಕೇಳಲು ಕೊಂಚ ರೊಮ್ಯಾಂಟಿಕ್ ಅನಿಸಬಹುದು. ಆದರೂ ಪರಂಪರೆಯನ್ನು ಹೊಳೆಯ ರೂಪಕದಲ್ಲಿ ಕಾಣುವ ಪದ್ಧತಿ ಸಾಹಿತ್ಯಕ ಚರ್ಚೆಯಲ್ಲಿ ಮೊದಲಿಂದಲೂ ಇದೆ. ನನಗಾದರೂ ಈ ರೂಪಕ ಅರ್ಥಪೂರ್ಣವೆನಿಸಿದೆ. ಅನೇಕ ಝರಿ, ಹಳ್ಳ ಹಾಗೂ ತೊರೆಗಳಿಂದ ಹೊಸಹೊಸ ನೀರು ಹೊಳೆಯ ಗರ್ಭಕ್ಕೆ ಸೇರುತ್ತಿರುತ್ತದೆ. ಅದು ಈ ಹಿಂದಿದ್ದ ನೀರಿನ ಭಾಗವಾಗಿ ಸೇರುತ್ತಿರುತ್ತದೆ. ಹಿಂದಣ ನೀರು ತಿಳಿಯಾಗಿರುತ್ತದೆ, ಆದರೆ ಅದು ಕೊಂಚ ನಿಂತು ಮಲೆತಿರುತ್ತದೆ. ಹೊಸನೀರು ರಭಸ ಪಡೆದಿರುತ್ತದೆ, ಆದರೆ ಅದಕ್ಕೆ ಕೊಂಚ ಮಣ್ಣಿನ ಕದಡಿರುತ್ತದೆ. ಇವೆರಡೂ ಸೇರಿಕೊಂಡು ಹೊಳೆ ನಿರಂತರ ಹರಿಯುತ್ತಿರುತ್ತದೆ. ಈ ಹಿನ್ನೆಲೆಯಲ್ಲಿ ಹೊಸತಲೆಮಾರಿನ ಲೇಖಕರನ್ನು ಕನ್ನಡ ಸಾಹಿತ್ಯದ ಹೊಳೆಗೆ ನಾನಾ ದಿಕ್ಕುಗಳಿಂದ ಹರಿದುಬಂದ ಹೊಸನೀರು ಎಂದು ಭಾವಿಸಿದ್ದೇನೆ. ಈ ಹೊಳೆನೀರಲ್ಲಿ ಈಜಾಡಿದ, ಕುಡಿದ, ಜಳಕ ಮಾಡಿದ ಅನುಭವಗಳನ್ನು ಈ ಅಂಕಣದಲ್ಲಿ ಹಂಚಿಕೊಳ್ಳುತ್ತೇನೆ. ■



ಜೀವನ ಪರಿಸರದ ಬಗೆಗಿನ ಕಾಳಜಿ-ಬಿಎಸ್‌ವಿ

ಕಳೆದ ಶನಿವಾರ ತೀರಿಕೊಂಡ ಬಿ.ಎಸ್. ವೆಂಕಟಲಕ್ಷ್ಮಿ ನಮ್ಮ ನಡುವಿನ ಕ್ರಿಯಾಶೀಲ ವ್ಯಕ್ತಿತ್ವಗಳಲ್ಲಿ ಒಬ್ಬರು. ಸಾಹಿತ್ಯ, ಸಂಸ್ಕೃತಿ, ರಾಜಕೀಯ-ಸಾಮಾಜಿಕ ಪ್ರಶ್ನೆ - ಹೀಗೆ ಒಡೆದು ನೋಡುವುದರಲ್ಲಿ ವೆಂಕಟಲಕ್ಷ್ಮಿ ಅವರಿಗೆ ಆಸಕ್ತಿ ಇರಲಿಲ್ಲ. ನಾವು ಬದುಕುತ್ತಿರುವ ಜೀವನ ಪರಿಸರದ ಅಗತ್ಯ ಮತ್ತು ಪ್ರಶ್ನೆಗಳನ್ನು ಇಡಿಯಾಗಿ ನೋಡುವುದರಲ್ಲಿಯೇ ಅವರಿಗೆ ಹೆಚ್ಚಿನ ಆಸಕ್ತಿಯಿತ್ತು. ಜನಸಮುದಾಯದ ಸಣ್ಣ-ದೊಡ್ಡ ಸಂಗತಿಗಳಿಗೆಲ್ಲ ತತ್‌ಕ್ಷಣ ಎನ್ನುವಂತೆ ಸ್ಪಂದಿಸಿ ಚರ್ಚಿಸುವುದಕ್ಕೆ ಅವರಿಗೆ ಸಾಧ್ಯವಾಗುತ್ತಿದ್ದುದು ಈ ದೃಷ್ಟಿಕೋನದಿಂದಲೇ.

ವೆಂಕಟಲಕ್ಷ್ಮಿ ಅವರ ಸಾವಿನ ಸುದ್ದಿಯನ್ನು ಪ್ರಕಟಿಸುವಾಗ ಬಹುಪಾಲು ಮಾಧ್ಯಮಗಳಲ್ಲಿ ಹಿರಿಯ ಪತ್ರಕರ್ತೆ, ಅಂಕಣಗಾರ್ತಿ ಎನ್ನುವ ಶೀರ್ಷಿಕೆಗಳೇ ಪ್ರಧಾನವಾಗಿದ್ದವು. ಆದರೆ ನಿಜದಲ್ಲಿ ವೆಂಕಟಲಕ್ಷ್ಮಿ ಈ ವೃತ್ತಿಯ ಸಾಧನೆ ಮತ್ತು ಯಶಸ್ಸನ್ನು ಮೀರಿ ತನ್ನ ಸಮುದಾಯದೊಂದಿಗೆ ಜೀವಂತ ಸಂಬಂಧವೊಂದನ್ನು ಕಟ್ಟಿಕೊಂಡಿದ್ದರು. ಇವರ ಅನಿರೀಕ್ಷಿತ ಸಾವು ಆಘಾತದೊಂದಿಗೆ ಕ್ಷೀಣಿಸಿದವರಿಗೆಲ್ಲ ದುಃಖವನ್ನುಂಟು ಮಾಡಿದ್ದು ವೃತ್ತಿಯಾಚೆಗೆ ಅವರು ಸದಾ ಕಟ್ಟಿಕೊಳ್ಳಲು ಬಯಸುತ್ತಿದ್ದ ಮಾನವೀಯ ಸಂಬಂಧದ ಸಲುವಾಗಿ.


ವೆಂಕಟಲಕ್ಷ್ಮಿ ಅವರ ಬರವಣಿಗೆಯ ಶಕ್ತಿಯೂ ಇದೇ. ವಿಷಯಗ್ರಹಿಕೆ ಮತ್ತು ಮಂಡನೆಯ ದೃಷ್ಟಿಯಿಂದ ಪತ್ರಕರ್ತರಿಗೆ ವೃತ್ತಿಭಾಷೆಯೊಂದು ಇದ್ದೇ ಇರುತ್ತದೆಯಷ್ಟೆ. ಇದು ವಿಷಯ ಮತ್ತು ಸನ್ನಿವೇಶವನ್ನು 'ಸರಿಯಾಗಿ' ಹಿಡಿಯಬೇಕೆನ್ನುವ ಪತ್ರಿಕಾಧರ್ಮದ ಮೂಲಗುಣಕ್ಕೆ ಸಂಬಂಧಪಟ್ಟದ್ದು. ಆದರೆ ಕಣ್ಣಿಗೆ ಕಾಣುತ್ತಿರುವುದರ ಆಚೆಗಿನದನ್ನು ಕಂಡುಕೊಳ್ಳುವುದಕ್ಕೆ ಅತ್ಯಂತ ಸೂಕ್ಷ್ಮವಾದ ಮನಸ್ಸು, ಜೊತೆಗಿರುವ ಮನುಷ್ಯರ ಬಗೆಗಿನ ಅಕ್ಕರಾಸ್ಥೆ ಅವರನ್ನು ಹಿಡಿದು ಆಡಿಸುತ್ತಿರುವ ಮೂಲಸಂಗತಿಗಳ ಬಗೆಗಿನ ತಿಳಿವಳಿಕೆ ಎಲ್ಲವೂ ಬೇಕಾಗುತ್ತದೆ. ವೆಂಕಟಲಕ್ಷ್ಮಿಯವರಿಗೆ ಇವೆಲ್ಲವೂ ಇತ್ತಲ್ಲದೇ ಪತ್ರಕರ್ತರಾಚೆಗಿನ ವ್ಯಕ್ತಿತ್ವವೊಂದು ಸಿದ್ಧಿಸಿತು.

ಇವತ್ತಿಗೂ ಅವರ ಅತ್ಯಂತ ಜನಪ್ರಿಯವೂ, ಮುಖ್ಯವೂ ಆದ ಬರವಣಿಗೆಯೆಂದರೆ 'ಪ್ರಿಯರು ಕಂಡಂತೆ ಪ್ರಸಿದ್ಧರು' ಅಂಕಣ. ಪ್ರಸಿದ್ಧರ ಜೊತೆಗಿನ ಬದುಕಿನ ಬಗೆಗೆ ನಡೆಸುವ ಸಂದರ್ಶನಗಳಿಗೆ ನಮ್ಮಲ್ಲಿ ಒಂದು ಸಿದ್ಧ ಮಾದರಿಯೇ ಇದೆ. ಆದರೆ ವೆಂಕಟಲಕ್ಷ್ಮಿ 'ವೇಷ'ಗಳಾಚೆಗಿನ ಸೂಕ್ಷ್ಮಗಳನ್ನು ಗುರುತಿಸಲು ಪ್ರಯತ್ನಿಸಿದರು ಮತ್ತು ಇದನ್ನು ಅತ್ಯಂತ ಸಹಜವೆಂಬಂತೆ ದಾಖಲಿಸಲು ಪ್ರಯತ್ನಿಸಿದರು. ವಿವರಗಳನ್ನು ರೋಚಕವಾಗಿಸುವ ವಾಡಿಕೆಗಿಂತ ಭಿನ್ನವಾಗಿ ವಾಸ್ತವತೆಯ ನೆಲೆಯಲ್ಲಿ ಮಂಡಿಸಿದರು. ಹಲವು ಬಾರಿ ಇಂಥದ್ದೇ ಎಂದು ಸ್ಪಷ್ಟವಾಗಿ ಹೇಳಲಾಗದ ಕಾರಣಕ್ಕಾಗಿ ವಿವರಗಳನ್ನು ಬಿಗಿ ಹಿಡಿದು, ಪರೋಕ್ಷವಾಗಿ ಅಸ್ಪಷ್ಟವಾಗಿ ಹೇಳಿದ್ದೂ ಉಂಟು. (ಪ್ರಿಯರೇ, ಇಲ್ಲಿಯೂ ಸಂಬಂಧಗಳ ಮಾನವೀಯ ನೆಲೆಯ ಕಾರಣಕ್ಕಾಗಿಯೇ ಹೀಗೆ ಮಾಡಿದರೇನೋ?)

ವೆಂಕಟಲಕ್ಷ್ಮಿ ಅವರ ಇನ್ನೊಂದು ಮುಖ್ಯ ಕೃತಿ 'ಬದುಕು-ಬವಣೆ-ಭರವಸೆ'ಯ ಶಕ್ತಿ ಕೂಡ ಇದೆ. ಬದುಕು ಮತ್ತು ಅದರ ಪರಿಕರಗಳ ಜೊತೆಗೆ ಮನುಷ್ಯ ಸದಾ ಎದುರಿಸುವ ಸಂಘರ್ಷಗಳು, ಅವುಗಳ ಬದಲಾಗುವ ಸ್ವರೂಪಗಳು ಮನುಷ್ಯರನ್ನು ಸತತವಾಗಿ ಕಾಡುವ ಪರಿಯನ್ನು ನೋಡುತ್ತಲೇ ಬದುಕು ಅದಕ್ಕಿಂತ ದೊಡ್ಡದು ಎನ್ನುವ ಕಾರಣಕ್ಕೆ ಬದುಕನ್ನು ಕಾಪಿಡುವ ಚೈತನ್ಯವನ್ನು ಉಳಿಸಿಕೊಳ್ಳುವುದರಲ್ಲಿ ಅವರಿಗೆ ಅಪಾರ ಆಸಕ್ತಿ. ಕೊನೆಯಿಲ್ಲದಂತೆ ಕಾಣುವ ಬದುಕಿನ ಬವಣೆಗಳು ವೆಂಕಟಲಕ್ಷ್ಮಿ ಅವರ ಬದುಕಿನ ಬಗೆಗಿನ ದೃಷ್ಟಿಕೋನವನ್ನು ಸಿನಿಕತನಕ್ಕೆ ತಳ್ಳುವುದಿಲ್ಲ. ವ್ಯಗ್ರತೆ ಮತ್ತು ಕಹಿಯಲ್ಲಿ ನಿರಾಕರಣೆಯ ಕಡೆಗೆ ಚಲಿಸುವುದಿಲ್ಲ. ಇವುಗಳ ನಡುವೆಯೇ ಬದುಕನ್ನು ಅರಳಿಸಿಕೊಳ್ಳಬೇಕೆನ್ನುವ ಆರ್ತತೆ ಈ ಕೃತಿಯಲ್ಲಿದೆ. ಸಾಹಿತ್ಯ ಮತ್ತು ಸಂಗೀತದಲ್ಲಿನ ಆಳವಾದ ಪ್ರೀತಿ ಇದಕ್ಕೆ ಕಾರಣವಾಗಿರಬಹುದು.

'ಚರ್ಚೆಗೊಂದು ಚಾವಡಿ' ಕೂಡ ಮೂಲತಃ ಹೀಗೆ ಬದುಕನ್ನು ಕಟ್ಟಿಕೊಳ್ಳಲು ಅನುವು ಮಾಡಿಕೊಡಬಹುದಾದ ಚರ್ಚೆಗೆ 'ಆವರಣ'ವೊಂದನ್ನು ಸೃಷ್ಟಿಸುವ ಆಶಯದ್ದು. ಬದುಕು ಕಟ್ಟುವ ಆಶಯದ ಚರ್ಚೆಗೊಂದು ಚಾವಡಿಯನ್ನು ಮುಂದುವರಿಸುವುದೇ ವೆಂಕಟಲಕ್ಷ್ಮಿಯ ಕ್ರಿಯಾಶೀಲ ವ್ಯಕ್ತಿತ್ವಕ್ಕೆ ಸಲ್ಲಿಸಬಹುದಾದ ಅರ್ಥಪೂರ್ಣ ಶ್ರದ್ಧಾಂಜಲಿ.

● ಡಾ. ಎಂ.ಎಸ್. ಆಶಾದೇವಿ



ತಿಮ್ಮಪ್ಪನಿಗೆ ಹಾಕಿದ ಟೋಪಿ

ಅದೆಷ್ಟು ಅನ್ನದ ಡಬರಿಗಳ ತುಂಬುವ
ಹೊಲ-ಗದ್ದೆಗಳ ಹೊಟ್ಟೆಗಳ ಬಗೆದರೋ.....
ಮುತ್ತು ರತ್ನವಿದೆಯೆಂದು
ಅವ್ವನ ಹೊಟ್ಟೆಯನೆ ದುರದುರನೆ ನೋಡಿ
ಗಬಕ್ಕನೆ ಹಿಡಿದು ಬಗೆದು
ಹಾಕಿದ ಟೋಪಿಯದು!
ಬರಿಯ ನಲವತ್ತೆರಡು ಕೋಟಿಯದೆ?

ನಿನ್ನ ನಾಮದ ಬಲದಿ ಸಾಗಿದರೆ
ಅವರ ಮೆರವಣಿಗೆ
ದುಡಿಯುವ ಜನರ ಬೆವರ ಮುತ್ತುಗಳ ಕಸಿದು
ಪೋಣಿಸಿ ನಿನಗೊಂದು ಟೋಪಿ ಹಾಕುವುದಾ
ಹತ್ತಿ ಉರಿದೀತು ಇಲ್ಲಿ ಧರೆ!!

'ಅಮ್ಮಾ ತಾಯೇ.... ಅನ್ನ ನೀಡ್ರಮ್ಮ'
ಖಾಲಿ ಬೋಗಣಿ ಡಬರಿಗಳ ಸದ್ದನ್ನೊಮ್ಮೆ ಆ
ಕಿವಿಯೊಳಗೆ ಅವರಿಟ್ಟ ಸೂರ್ಯಕಾಂತಿಯ
ಹೂವನ್ನೊಮ್ಮೆ ಅತ್ತ ಸರಿಸು
ಬೆವರು ಸುರಿದರೂ ಮಳೆ ಸುರಿಯದೆ
ಮರಗಿಡಗಳಲ್ಲಿ ನೇತಾಡುವವರೊಮ್ಮೆ
ಕಣ್ತೆರೆದು ನೋಡು ತಂದೆ

ಕೋಟಿಕೋಟಿಗಳ ಕೋಟೆಯಲಿ ಬಂದಿ ನೀನು
ಸಾಲಿಯ ಚೀಲದಲ್ಲಿಟ್ಟು ತಂಗಳ ರೊಟ್ಟಿ
ಅವ್ವನ ಮಾಸಿದ ಉಡಿಯಲಿ
ಅಪ್ಪನ ಪಂಚೆಯ ತುದಿಯಲಿ
ಬೆವರಲಿ ತೊಯ್ದ ರೂಪಾಯಿ ಕಂಡೀತೆ ನಿನಗೆ

ಮೊದಲು ಅವರು ಹಾಕಿದ ಟೋಪಿ ಸರಿಸಿ
ಕೊಟ್ಟ ವಜ್ರ-ಮುತ್ತುರತ್ನಗಳ ಲೆಕ್ಕಬೇಡ
ಕೊಡುವ ಕಳ್ಳರ ಲೆಕ್ಕವಾದರೂ ಕೊಡು ದೊರೆ
ಇಲ್ಲವಾದರೆ......
ಕೋಟಿಕೋಟಿಗಳ ಕೋಟೆಗಳಲಿ
ವಜ್ರ ಖಚಿತ ಕಿರೀಟದಲಿ
ಭಕುತರಿಲ್ಲದೆ
ಉಳಿದವನೊಬ್ಬನೇ 'ತಿಮ್ಮಪ್ಪ'......!
ಆಮೇಲೆ ನಿನ್ನ ಗತಿ
ಗೋವಿಂದಾ.... ಗೋ.... ವಿಂ..... ದಾ.....
ಮೊದಲು ಅವರು ಹಾಕಿದ ನಾಮ ತೆಗೆ
ಆಮೇಲೆ ಟೋಪಿ......

ಸಾಕು ಮಾಡಿನ್ನು ಶ್ರೀನಿವಾಸ
ಕಳ್ಳಕಾಕರ ಸಹವಾಸ!!


● ಬಿ. ಶ್ರೀನಿವಾ

...ರ್‌ಬಚೋವ್, ಯೆಲ್ಸಿನ್: ಮೊದಲ ಪಾಠ




...ಬಚೋವ್ ಜಗತ್ತಿನ ಕಾಲುಭಾಗದಷ್ಟು ಜನಕ್ಕೆ ... ಸ್ವಾತಂತ್ರ್ಯ ತಂದುಕೊಟ್ಟವನು ... ಈಗ ಹಳೆಯ ಮಾತು-ಆತನ ... ಇತ್ತೀಚಿನ ಪದಚ್ಯುತಿ ಮತ್ತು ... ಷಡ್ಯಂತ್ರವನ್ನು ಕುರಿತು ಯೋಚಿಸ... ಷ್ಯಾದ ಜನ ಪ್ರಜಾಪ್ರಭುತ್ವ ... ದೊರೆ ಇಮ್ಮಡಿ ನಿಕೋ... ಅವ ಕುಟುಂಬದೊಂದಿಗೆ ... ಕಮ್ಯುನಿಸ್ಟರು ಬಡವರ, ... ರಾಜ್ಯ ಸೃಷ್ಟಿಸಲೆತ್ನಿಸಿ ರಾಜ ... ಅಧಿಕಾರಿಗಳ, ಸೈನಿಕರ ರಾಷ್ಟ್ರ... ಎಲ್ಲ ವಲಯದಲ್ಲಿ ಕೈದಾ ... ಧಿಕಾರಿ, ಸೈನಿಕ, ರಾಜಕಾರಣಿ ... ಭೀಕರ ಸರ್ವಾಧಿಕಾರಿ ಆಡಳಿತವಾಗಿ ... ಬೆಳೆಯದ, ಸೃಷ್ಟಿಸದಿರುವ ಸ್ಥಿತಿ ತಲುಪಿತು. ... ಉಸಿರು ಕಟ್ಟಿಹೋಯಿತು. ಆಯಕಟ್ಟಿನ ... ಅಧಿಕಾರಿ, ಸೈನಿಕ, ರಾಜಕಾರಣಿಗಳಿಗೆ ಎಲ್ಲ ... ಜನತೆ ಮಣ್ಣು ತಿನ್ನುವ ಹಂತ ತಲುಪಿದರು. ...ಕೃತಿ ಸಂಪತ್ತಿನ ಚಿನ್ನ, ಪೆಟ್ರೋಲ್, ಬೆಳ್ಳಿ, ...ನ್ನದರಲ್ಲಿಯೂ ಶ್ರೀಮಂತವಾದ ರಷ್ಯಾ ದಿವಾಳಿ ...

...ರಿತ ಖ್ರುಶ್ಚೇವ್ ಮೂವತ್ತು ವರ್ಷಗಳ ... ಸ್ಟಾಲಿನ್ ಸ್ಥಾಪಿಸಿ ಕ್ರೂರ ವ್ಯವಸ್ಥೆಯನ್ನು ... ಯತ್ನಿಸಿದ. ಆತ ಕಮ್ಯುನಿಸ್ಟ್ ಪಟ್ಟಭದ್ರರನ್ನು ...ಟ್ಟುಕೊಂಡು ನಿಧಾನಕ್ಕೆ ಸುಧಾರಿಸಲು ...ಂದ ರಾಜಕಾರಣಿ, ಸೈನಿಕ, ಅಧಿಕಾರಿಗಳು ಅವನ ಮೇಲೆ ಬಿದ್ದು ಅಧಿಕಾರದಿಂದ ಕೆಳಗಿಳಿಸಿದರು.


ಯೆಲ್ಸಿನ್

ಆತನ ತತ್ಪರಿತ ಗರ್‌ಬಚೋವ್ 1985ರಲ್ಲಿ ಅಧಿಕಾರಕ್ಕೆ ಬಂದೊಡನೆ ಹಠಾತ್ತನೆ ಹೊಸ ಆದರ್ಶ, ಹೊಸ ವ್ಯವಸ್ಥೆಯನ್ನು ತಂದ. ಪೂರ್ವ ಯುರೋಪಿನ ಹಂಗೇರಿ, ಪೋಲೆಂಡ್, ರುಮೇನಿಯಾ, ಪೂರ್ವ ಜರ್ಮನಿ, ಜೆಕೋಸ್ಲಾವಾಕಿಯಾಗಳಿಗೆ ಸ್ವಾಯತ್ತತೆ, ಸ್ವಾತಂತ್ರ್ಯ ನೀಡಿ ರಷ್ಯಾದಲ್ಲಿ ಮುಕ್ತ ವ್ಯವಸ್ಥೆ ಮತ್ತು ಆರ್ಥಿಕ ಪುನರ್ರಚನೆ ಶುರುಮಾಡಿದ. ಇದು ಸುಲಭದ ಮಾತಾಗಿರಲಿಲ್ಲ. ಮೀನನ್ನು ಬೇಯಿಸಿ ಪಲ್ಯ ಮಾಡುವುದು ಸುಲಭ; ಪಲ್ಯವನ್ನು ಮೀನನನ್ನಾಗಿಸುವುದು ಅಸಾಧ್ಯ. ಈ ಅಸಾಧ್ಯವನ್ನು ಸಾಧ್ಯಗೊಳಿಸುವ ಪವಾಡ ಕೈಗೊಂಡ ಗರ್‌ಬಚೋವ್ ಉದ್ದೇಶಪೂರ್ವಕವಾಗಿಯೇ ಒಂದು ತಪ್ಪು ಮಾಡುವುದು ಅನಿವಾರ್ಯವಾಯಿತು. ಅದೇನೆಂದರೆ ಆತನಿಗೆ ಯಾವುದೇ ಬದಲಾವಣೆ ತರಲು ಇದ್ದ ಪಕ್ಷ ಆತನದೇ ಆದ ಕಮ್ಯುನಿಸ್ಟ್ ಪಕ್ಷ. ಆ ಪಕ್ಷದ ಮುಖಂಡನಾಗಿದ್ದ ಗರ್‌ಬಚೋವ್ ಅದನ್ನು ಬಿಟ್ಟುಹೋಗುವಂತಿರಲಿಲ್ಲ. ಬರೀ ಕಾರ್ಯದರ್ಶಿಯಾಗಿದ್ದರೆ ಪ್ರಯೋಜನವಿಲ್ಲವೆಂದು ಅಧ್ಯಕ್ಷನಾದ; ರಷ್ಯಾದ ಪಾರ್ಲಿಮೆಂಟನ್ನು ತನ್ನ ಪ್ರಭಾವಕ್ಕೊಳಪಡಿಸಿ ಸುಧಾರಣೆಯ ಕೆಲಸ ಮುಂದುವರೆಸಿದ. ಇದು ಒಬ್ಬ ಮನುಷ್ಯ ಜನತಂತ್ರದಲ್ಲಿ ಆಡಳಿತ, ವಿರೋಧ ಎರಡನ್ನೂ ಮಾಡಿದಂತಿತ್ತು.


ಗರ್‌ಬಚೋವ್

ಎಷ್ಟೋ ಕಾಲದಿಂದ ಹಿಡಿದಿಟ್ಟದ್ದ ರಷ್ಯನ್ ನಾಗರಿಕ ತನಗೆ ಸಿಕ್ಕ ಸ್ವಾತಂತ್ರ್ಯವನ್ನು ದುರುಪಯೋಗಪಡಿಸಿಕೊಳ್ಳತೊಡಗಿದ. ಮಾತು ಬೈಗುಳಕ್ಕೆ, ವ್ಯಾಪಾರ ಬ್ಲಾಕ್ ಮಾರ್ಕೆಟಿಗೆ, ಸಾಹಿತ್ಯ ಅಶ್ಲೀಲತೆಗೆ ಹೋಗುವುದು ತಡವಾಗಲಿಲ್ಲ.

ಇದರಲ್ಲೆಲ್ಲ ತನ್ನ ಅವಾಂತರಕಾರಿ ಗುಣವನ್ನೇ ಬಳಸಿಕೊಂಡು ಕಮ್ಯುನಿಸ್ಟ್ ಪಕ್ಷದ ವಿರುದ್ಧವೇ ಬಂಡೆದ್ದು ಜನಪ್ರಿಯವಾಗುವುದು ಯೆಲ್ಸಿನ್‌ಗೆ ಸುಲಭವಾಯಿತು. ರಷ್ಯಾದ ಜನತೆ ಯೆಲ್ಸಿನ್‌ನಲ್ಲಿ ತಮ್ಮ ಸಿಟ್ಟು, ಆಕ್ಷೇಪಣೆ, ನೋವು ಎಲ್ಲವನ್ನೂ ಕಂಡರು; ಅವನ ಮೂಲಕ ಹೇಳಿಕೊಂಡರು. ಹೀಗಾಗಿ ಯೆಲ್ಸಿನ್ ಸೋವಿಯತ್ ಸಾಮ್ರಾಜ್ಯದ ಒಂದು ಭಾಗವಾದ ರಷ್ಯಾ ರಾಜ್ಯಕ್ಕೆ ಅಧ್ಯಕ್ಷನಾಗಿ ಆಯ್ಕೆಗೊಳ್ಳುವುದು ಸಾಧ್ಯವಾಯಿತು. ಯೆಲ್ಸಿನ್‌ನ ವರ್ಣರಂಜಿತ ವ್ಯಕ್ತಿತ್ವ, ಅವನ ಮುಕ್ತನಡವಳಿಕೆ, ಕಳ್ಳವ್ಯಾಪಾರಿಗಳು ಮತ್ತು ಖಾಸಗಿ ಉದ್ಯಮಿಗಳನ್ನು ಸಹಿಸುವಂತೆ ಕಂಡುಬಂದ ಗರ್‌ಬಚೋವ್ ಇದನ್ನೆಲ್ಲ ನೆಪಮಾಡಿಕೊಂಡು ಗರ್‌ಬಚೋವ್‌ನ ಪದಚ್ಯುತಿಗೆ ಕಟ್ಟಾ ಕಮ್ಯುನಿಸ್ಟರು ಯತ್ನಿಸಿದರು.

ಆದರೆ ಈ ದುಷ್ಟರು ಕಳೆದ ಆರು ವರ್ಷದಿಂದ ರಷ್ಯನ್ ಜನತೆ ಸವಿದ ಸ್ವಾತಂತ್ರ್ಯದ ಸವಿಯನ್ನು ಗ್ರಹಿಸಲಿಲ್ಲ. ಜನತಂತ್ರದ ಖುಷಿ ಮತ್ತು ಕ್ರಿಯಾಶೀಲತೆ ಈ ಜನತೆಯ ಆತ್ಮವನ್ನು ಹೊಕ್ಕಿತ್ತು ಅಲ್ಲದೆ ಆರಂಭದ ಯೆಲ್ಸಿನ್ ಇವತ್ತು ಬದಲಾಗಿದ್ದ ಜನತಂತ್ರದ ವಿರುದ್ಧ ಕಟ್ಟಾ ಕಮ್ಯುನಿಸ್ಟರು ಯಶಸ್ವಿಯಾದರೆ ಯೆಲ್ಸಿನ್‌ನ ಕನಸು ಮುರಿದುಬೀಳುತ್ತಿತ್ತು. ಆದ್ದರಿಂದಲೇ ರಷ್ಯಾದಲ್ಲಿ ಒಂದು ಅದ್ಭುತ ಸಾಧ್ಯವಾಯಿತು. ಅದೇನೆಂದರೆ, ಮೇಲು ನೋಟಕ್ಕೆ ಶತ್ರುಗಳಂತೆ, ಪ್ರತಿಸ್ಪರ್ಧಿಗಳಂತೆ ಕಂಡುಬರುತ್ತಿದ್ದ ಯೆಲ್ಸಿನ್ ಮತ್ತು ಗರ್‌ಬಚೋವ್ ಜನತಂತ್ರದ ಮಾಂತ್ರಿಕತೆಯಲ್ಲಿ ಒಂದೇ ಆಗಿದ್ದರು- ಅವರ ಶತ್ರುತ್ವ ಸರ್ವಾಧಿಕಾರಿ ಮತ್ತು ಜನತಂತ್ರವಾದಿಯ ನಡುವಿನ ದ್ವೇಷವಾಗಿರಲಿಲ್ಲ. ಪ್ರಜಾಪ್ರಭುತ್ವದ ನಿಯಮಕ್ಕೊಳಪಟ್ಟ ಆರೋಗ್ಯಕರ ಕ್ರೀಡೆಯಾಗಿತ್ತು. ಈ ಮನೋಭಾವ ಕಟ್ಟಾ ಕಮ್ಯುನಿಸ್ಟರನ್ನು ದಿಗ್ಭ್ರಮೆಗೊಳಿಸಿತು. ಗರ್‌ಬಚೋವ್ ಮತ್ತೆ ಅಧಿಕಾರಕ್ಕೆ ಬಂದು ತನ್ನ ಸುಧಾರಣೆ ಮುಂದುವರೆಸುವುದು ಸಾಧ್ಯವಾಯಿತು.

ಸೋವಿಯತ್ ರಷ್ಯಾ ಪ್ರಜಾಪ್ರಭುತ್ವದ ನಿಯಮಗಳನ್ನು ಕಲಿಯತೊಡಗಿದೆ. ಮೊದಲನೆಯ ಪರೀಕ್ಷೆಯಲ್ಲಿ ಗೆದ್ದಿದೆ. ಅದು ಈಗ ಇತರ ಪ್ರಜಾಪ್ರಭುತ್ವಗಳಂತೆಯೇ ಸ್ವಾತಂತ್ರ್ಯಕ್ಕೆ ಬೇಕಾದ ಹೊಣೆಗಾರಿಕೆ ಮತ್ತು ಆರ್ಥಿಕ ಪುನರ್ರಚನೆಗೆ ಬೇಕಾದ ಪ್ರಾಮಾಣಿಕತೆ- ಇವನ್ನು ಇನ್ನೂ ಚೆನ್ನಾಗಿ ಕಲಿಯಬೇಕಾಗಿದೆ. ಗರ್‌ಬಚೋವ್ ಮತ್ತು ಯೆಲ್ಸಿನ್ ಇವರಿಬ್ಬರೂ ಈ ಶಿಕ್ಷಣ ನೀಡಲು ಹೇಳಿಮಾಡಿಸಿದಂತಿದ್ದಾರೆ.

ಸೆಪ್ಟೆಂಬರ್ 1, 1991

...ದಿಗಳು ಚರಂಡಿಲೆ ಅಲವೆ ತಿರಗದು. ರಾಜಬೀದಿಗೆಲ್ಲಿ ಬಂದವ್ರೂ?

...ಗಿಲನ್ನು ಕಾದು ಕೂತ ಭೂಮಿ, ಭಸ್ಮೊ ಎನ್ನುವ ...ದಲಿರುವ ದುರ್ದಿನಗಳನ್ನು ನೆನೆದು ಹೆದರಿ ...ಪ್ಪವರ ಎದುರು ಉಗ್ರಿ ಎಡೂರಪ್ಪನ ರೆಸಾರ್ಟ್ ...ವನ್ನು ಕೆದಕಿ ಒಂದಿಷ್ಟು ಅಸಹನೆಯಿಂದ, ...ಗಲ್ ಹನುಮಂತಯ್ಯ ವಿಧಾನಸಭೆ ಕಟ್ಸಿದ್ದು ...ತ?" ಎಂದ.

...ಸ್ತ್ರ ಕೇವಿಲ್ವೆಯ" ಎಂದ ಸೀರ.

...ಆಯ್ತಪ್ಪ ಈಗ. ಅಂಥಾ ವಿಧಾನಸಭೆ ವಳಗೆ ...ರೆಸಾರಟಲ್ಲಿ ಮಾಡ್ತರಾ ಇವುರು?"

...ರಟು ಅಂದ್ರೇನ್ಲ?" ಎಂದಳು ಜುಮ್ಮಿ.

...ರ್ಟು ಅಂದ್ರೇನೇಳನವ್ವ ನಿನಗೆ. ಅದೊಂತರ ... ಕಣೆ. ಹೋಟ್ಲು ಅಂದೇಟಗೆ ಈ ನಮ್ಮ ...ಹೋಟ್ಲು ಅನ್ನಕಬ್ಯಾಡ. ಆ ಹೋಟ್ಲೆ ಬ್ಯಾರೆ. ...ಸುಖ ಅನುಬವುಸಕ್ಕೆ ಏನೇನು ಬೇಕೊ ಅದ್ಯಲ್ಲ ...ಅಲ್ಲಿ."

...ಹಾ ಹೋಟ್ಲೇನ್ಲ?"

... ಕಣೆ. ಹಿಂದೆ ಗುಂಡೂರಾಯ ಅಂತ ಈ ...ದಂಥೋನೆ ಇದ್ನಲ್ಲ ಅವುನಿಗೆ ಫಿರೋಜ್ ಖಾನ್, ... ಖಾನ್ ಅಂಥ ಪ್ರೆಂಡ್ಸಿದ್ರು. ಅವುರದೆ ... ಅಲ್ಲಿ ಏನು ಕೇಳಿದ್ರು ಸಿಗತದೆ, ಯಾವ ... ಕೇಳು ಸಿಗತದೆ, ಪಾರಿನ್ ಡ್ರಿಂಕ್ಸು ಸಿಗತದೆ, ... ನವ್ವಾದ್ರೆ ಮಸಾಜ್ ಮಾಡಕ್ಕೆ ಹುಡುಗಿರು

"ಉಗ್ರಿ, ನೀನೇಳದ ನೋಡಿದ್ರೆ ಈ ಮುಂದೆ ಮಕ್ಕಳು ಇನ್ನು ಮುಂದೆ ಇದಾನ ಸಭೆಲಿ ಸಭೆ ಮಾಡದಿಲ್ಲ ಕಂಡ್ಲ" ಎಂದಳು ಜುಮ್ಮಿ.

"ಇದಾನ ಸೌಧ ನೋಡಿದ್ರೆ ಬೋರು ಕಣೆ ಅವುರಿಗೆ. ಆ ಕಲ್ಲು ಕಟ್ಟಡದಲ್ಲಿ ಏನದೆ ಅಂತ ಕೇಳ್ತರೆ ಬಿಜೆಪಿಗಳು, ಇದಕೇನೇಳ್ತೀ?"

"ಸರಿ, ರೀಸಾಟಗೋಗಿ ಏನು ಮಾಡಿದ್ರಪ್ಪ?" ಎಂದ ಸೀರ.

"ಇಧಾನಸೌದ್ದಲ್ಲೇ ಮಾಡದವು ಇನ್ನ ರೆಸಾರ್ಟಗೋಗಿ ಏನು ಮಾಡ್ಯವು ಮಾವ? ಎಡೂರಪ್ಪ ಅಧಿಕಾರಿಗಳ ಕರದು ಏನು ಮಾಡ್ತಯಿದ್ದಿರಿ ಅಂದವುನೆ. ಅವು ನೀವೇಳಿದ್ನೆಲ್ಲ ಮಾಡ್ತಯಿದ್ದಿವಿ ಸಾ. ಅಂದವೆ. ಸ್ವಲುಪ ಜೋರಾಗಿ ಮಾಡಿ ಅಂದವುನೆ. ಆಯ್ತು ಸಾ ಅಂದವೆ. ಅಮ್ಯಾಲೆ ಯಾರ್‍ಯಾರು ಯಾವ ಮಜ ಮಾಡಬೇಕೊ ಅದು ಮಾಡಿಕೊಂಡು ಬಂದವೆ. ಇಷ್ಟೆ ನೋಡು ರೆಸಾರ್ಟಗೋಗಿ ಕಡದೆತ್ತಾಕಿರದು" ಎಂದ ಉಗ್ರಿ.

"ರೆಸಾರ್ಟ್ ರುಚಿ ತೋರಿಸಿದೋನೆ ಕುಮಾರಣ್ಣ" ಎಂದು ವಾಟಿಸ್ಸೆ ಬಂದ.

"ನೀನು ನೋಡಿದ್ದಿಯೇನ್ಲ ರಿಸಾರ್ಟ್?" ಎಂದಳು ಜುಮ್ಮಿ.

"ನೋಡಧೇನು, ಇದ್ದು ಬಂದೆ ಕಣಕ್ಕ."

"ಯಾರು ಕರಕಂಡೋಗಿದ್ರು?"

ಕಟ್ಟೆಪುರಾಣ

ಬಿ. ಚಂದ್ರೇಗೌಡ

"ಕರಟ್ಯಾಗೆ ಕೇಳಿದೆ ನೋಡು. ರೆಸಾರ್ಟಗೆ ನಮ್ಮಂಥೋರು ಹೋಗಕ್ಕೆ ಬರದಿಲ್ಲ. ಯಾರಾರ ಕರಕಂಡೇ ಹೋಗಬೇಕು. ಅಂಗೆ ನನ್ನು ಯಾರೋ ಕರಕಂಡೋಗಿದ್ರು. ಆ ಲೋಕನೆ ಬ್ಯಾರೆ ಕಣಕ್ಕ ಅಲ್ಲಿ ಒಂದಿಪ್ಪೊತ್ತು ಕುಂತಿದ್ರು ಸಾಕು. ಬಡುವುರ ಕಂಡ್ರೆ ಬರಬಾರದ ಸಿಟ್ಟೆ ಬತ್ತದೆ."

"ಬಡವರ ಕಂಡ್ರೆ ಸಿಟ್ಟು ಬಂದತೆ?"

"ಊ ಕಣಕ್ಕ, ಮನ್ಸ ಮಜ ಮಾಡಕ್ಕೆ ಅಂತ ವಂಟಾಗ ಮಜ ಮಾಡದ್ನೆ ಯೋಚನೆ ಮಾಡ್ತನೇ ವರತೂ ಬ್ಯಾರೆ ಯೋಚನೆ ಮಾಡದಿಲ್ಲ. ಅದ್ಕೆ ನೋಡು ಎಡೂರಪ್ಪನ ಬಾಯಿಲೆ ಆ ಮಾತು ಬತ್ತು"

"ಏನಂದ?"

"ನಾವಲ್ಲಿ ಮಜ ಮಾಡಕ್ಕೋಯ್ತಾಯಿಲ್ಲ ಅಂದವುನೆ. ಮಜ ಮಾಡೊ ಜಾಗಕ್ಕೆ ಹೋಯ್ತಾಯಿರುವಾಗ ಅಂಗಂತನೆ ಅಂದ್ರೆ, ಅದ್ಕೆ ಹೋಯ್ತಾ ಅವುನೆ ಅಂತ ತಾನೆ?"

"ಹೋಗ್ಲಿ ಬುಡ್ಡ ಪಾಪ. ಅವುನು ಹೆದರಿ ಸತ್ತೋಗಲವೆ. ಏನೊ ಹೋಗಿ ಮಾಡಿಕಂಬರ್ಲಿ ಬುಡು. ಒಟ್ನಲ್ಲಿ ನಮ್ಮ ಕರ್ನಾಟಕಕ್ಕೆ ಏನಾರ ಮಾಡಿದ್ರೆ ಸಾಕು" ಎಂದ ಸೀರ.

... ಸುಳ್ಳನೆ ಹೇಳಬ್ಯಾಡ ಕಂಡ್ಲ."

... ಸುಳ್ಳೇಳನ? ಬೇಕಾದ್ರೆ ಆಣೆ ಮಾಡ್ಲೇನೆ?"

...

..., ಹೇಳ್ತಯಿರದು ನಿಜ ಕಂಡ್ಲ" ಎಂದ ಸೀರ. ...ವ್ಯಾಲೆ ಬೇಜಾರಾದ್ರೆ, ಈಜಾಡಬೌದು, ಆಟ ..., ಯಾವುದಾರ ಗೇಮಾಡಬೌದು. ಯಾವುದೂ ...ದ್ರೆ ಪಾರಿನ್ನಿಂದ, ಬಂಬಾಯಿಂದ ಬಂದಿರೊ ... ನೋಡಿಕಂಡು ಮಜಾ ಮಾಡಿಗಂಡು ಕಾಲಹಾಕಬು... ಎಂದ ಉಗ್ರಿ.

... ಅವುರ ಸುದ್ದಿ ಯಾತೀಕ್ಲ" ಎಂದ ಕಾಳಮಾವ. ...ಬುದುಟ್ಟಿತು ಕೇಡುಗಾಲ. ಜುಮ್ಮಿಯಂಥೋರಿಗೆ ...ಗಳು ಏನು ಮಾಡ್ತರೆ ಅನ್ನದು ತಿಳಿಬ್ಯಾಡವೆ?"

"ಏನಾರ ಮಾಡದೆ ಆದ್ರೆ ಇದಾನಸೌದ ಯಾಕದ್ನ? ಅಲ್ಲೇ ಕೂತು ಮಾಡಕ್ಕೇನೂ?" ಎಂದ ಕಾಳಮಾವ.

"ಇಡೀ ಕರ್ನಾಟಗಕ್ಕೆ ಅನ್ನಿರದೆ ಅದಲವೆ. ಆದ್ರೆ ಬಿಜೆಪಿವು ಏತಿ ಅಂದ್ರೆ ಪ್ರೇತಿ ಅಂತವೆ. ನೀನೇನಾರ ಹೇಳು ಅದಕೆ ತಿರುಗಿ ಇನ್ನೊಂದೇಳದೆಯಿದ್ರೆ ಅವುಕೆ ತಿಂದಿದ್ದು ಅರಗದೇ ಇಲ್ಲವೇನೊ" ಎಂದ ಉಗ್ರಿ.

"ಯಾಕಂಗೆ ಹೇಳತವ ಗೊತ್ತೇನೊ ಉಗ್ರಿ? ಅವು ಈಗಿರೊ ವ್ಯವಸ್ಥೆ ವಿರೋಧಿಗಳು. ಅವುರ ವ್ಯವಸ್ಥೆನೆ ಬ್ಯಾರೆ.



ಅದ್ಕೆ ಇಂತ ಸಮಸ್ಯೆ ಆಗಿರದು" ಎಂದ ವಾಟಿಸ್ಸೆ.

"ಇಸಿಸಿ, ಇಧಾನಸೌಧನೆ ಬ್ಯಾಡ ಅಂದ್ರು ಹ್ಯಂಗ್ಲ?" ಎಂದ ಕಾಳಮಾವ.

"ಬ್ಯಾಡ ಅಂತ ಅವುರೇಳ್ತಾಯಿಲ್ಲ ಧ್ವಡಪ್ಪಾ, ವಿಧಾನಸಭೆ ನ್ಯಡಿವಾಗ ಅದು ಬೇಕು ಅಷ್ಟೆ. ಅಮ್ಯಾಲೆ ಅದರಿಂದ ಏನೂ ಉಪಯೋಗ ಇಲ್ಲ ಅನ್ನದು ಅವರ ಲ್ಯಕ್ಕ. ಅದ್ಕೆ ಅಲವೆ ರೆಸಾರ್ಟಗೋಗಿರರು?"

"ಹಿಂಗೆ ಆದ್ರೆ ಮುಂದ್ಯಂಗೆ ಅಂತ?"

"ಮುಂದಿನ್ನೇನಯ್ಯ, ಬಿಜೆಪಿಗಳು ಒಳ್ಳೊಳ್ಳೆ ರೆಸಾರ್ಟು ಮಾಡಿಕತ್ತರೆ. ಅವುರದೇ ರೆಸಾರ್ಟ್‌ನಲ್ಲಿ ಸಭೆ ಆಗಂಗೆ ನೋಡಿಕತ್ತರೆ. ಸರ್ಕಾರ ಅವುರ ಬಿಲ್ ಪೇಮಾಡ್ತದೆ. ಒಂದಲ್ಲಾ ಒಂದಿನ ವಿಧಾನಸೌಧನ ಪ್ರಜಾಪ್ರಭುತ್ವದ ಮ್ಯೂಜಿಯಂ ಮಾಡ್ತರೆ."

"ಅಲ್ಲಾ, ಕ್ಯಂಗಲ್ ಹನುಮಂತಯ್ಯ ವಿಟು ಪ್ರೀತಿ ಮಾಡಿ ಕಟ್ಟಿಸಿದ್ನ ಮುಂದೆ ನಿಂತಗಂಡು ಕಟ್ಟಿಸಿದ್ನ ಗೊತ್ತ?" ಎಂದ ಕಾಳಮಾವ.

"ಕಟ್ಟಿಸಿದ್ನ ಸರಿ ದೊಡಪ್ಪ, ಅದರ ಬಗ್ಗೆ ಆಗ್ಲೆ ಗೌರವ ಕಡಿಮ್ಯಾಗದಲ್ಲ, ಹೇಳು. ಇಲ್ಲಿ ಇದ್ರೆ, ಎಸ್ಸೆಂ ಕೃಷ್ಣ ವಿಧಾನಸೌಧನೆ ಆದಿಕಳೊ ಅಂತೆದ ತಿರಗ ಕಟ್ಟುತ್ತೋಯಿದ್ನೆ? ರಂಗನ ಮುಂದೆ ಸಿಂಗ ಅನ್ನಂಗೆ ವಿಧಾನಸೌಧ ಅಂತ ಇದ್ದಮ್ಯಾಲೆ ತಿರಗ ಯಾಕಪ್ಪ ಇನ್ನೊಂದು ಸಣ್ಣ ಕಟ್ಟಡ? ಅದ ನೋಡಿದ್ದಿಯಾ ಧ್ವಡಪ್ಪ?"

"ನಾನ್ಯಾಕ್ ನೋಡನ್ಲ ಅದ. ಇವತ್ತಿನವರಿಗೂ ಇಧಾನಸೌಧ ಯಂಗದೆ ಅಂತ ಅದರ್‍ವಳಿಕೋಗಿ ನೋಡಿಲ್ಲ."

"ರಿಯಲಿ ಗ್ರೇಟ್ ಧ್ವಡಪ್ಪ, ನಮ್ಮ ಧ್ವಡಪ್ಪ ಕುವೆಂಪು, ಕಾರಂತ, ಬೇಂದ್ರೆ ಇಂತ ದೊಡ್ಡ ಸಾಯಿತಿಗಳಿಗೆ ಸಮ."

"ಅದ್ಯಾಕವುರಿಗೆ ಜಮಾವೊಟು ಮಾಡ್ತಿಯಾ?" ಎಂದ ಉಗ್ರಿ.

"ಅವುರು ವಿಧಾನಸೌಧ ಯತ್ತಗದೆ ಅಂತ ನೋಡಿರ್ಲಿಲ್ಲ ಕಣೊ ಉಗ್ರಿ. ಅದೇ ಇವತ್ತಿನ ಸಾಯಿತಿಗಳು ನೋಡು. ಸಮುದ್ರ ದಡದಲ್ಲಿ ನಾಯಿ ತಿರಿಗಿದಂಗೆ ಅಲ್ಲೇ ತಿರುಗ್ತವೆ."

"ಅಂಗರೆ ವಿಧಾನಸೌಧ ಸಮುದ್ರ ಅನ್ನು?"

"ನಾನು ಒಂದೊಂದು ಸತಿ ಸಾಂಕೇತಿಕವಾಗಿ ಮಾತಾಡ್ತಿನಿ ಕಣೊ."

"ಯಾವ ತಿಕನೂ ಬ್ಯಾಡ ನ್ಯಟ್ಟಗೆ ಮಾತಾಡು."

"ನೋಡೋ ಉಗ್ರಿ, ಸಮುದ್ರದ ದಡ ಅಂದ್ರೆ, ಅಲ್ಲಿ ಏನೇನೊ ತೇಲಿಕೊಂಡು ಬತ್ತದೆ. ಅದರ ವಾಸನೆಗೆ ಅಲ್ಲಿ ನಾಯಿ, ನರಿ, ತ್ವಾಳ ತಿರುಗ್ತವೆ. ಅದೇ ತರ ವಿಧಾನಸೌಧದತ್ತ ತಿರುಗೋ ಸಾಯಿತಿಗಳು ಅವುಕ್ಕೆ ಸಮ ಅಂತ ನಾನು ತಿಳಕಂಡಿದ್ದಿನಿ. ನಮ್ಮ ಧ್ವಡಪ್ಪ ವಿಧಾನಸೌಧಕೆ ಹೋಗಿಲ್ಲ ಅಂದ್ರೆ ರಿಯಲಿ ಗ್ರೇಟ್" ಎಂದ ವಾಟಿಸ್ಸೆ.

"ನನಿಗೇನು ಕ್ಯಲಸ ಹೇಳಲ್ಲಿ?"

"ಅದ್ನೆ ಧ್ವಡಪ್ಪ ನಾನೇಳಿದ್ದು. ನಮ್ಮ ಸಾಯಿತಿಗಳು ಕೂಡ ಅಂಗ ಅಂದ್ರೆ ಎಷ್ಟು ಚೆನಾಗಿರತದೆ ಅಲ್ವೆ?"

"ವಿಧಾನಸೌಧನ ಅಷ್ಟು ಕೀಳಾಗಿ ಕಾಣಬೇಕಾಗಿಲ್ಲ ಕಣೊ. ನಮ್ಮ ಕರ್ನಾಟಕದ ಜನಗಳು ಆರಿಸಿಕಳಿಸಿರೊ ಜನ ಅಲ್ಲಿ ಕುತಗಂಡು ನಮ್ಮ ಆಳತಾ ಅವುರೆ."

"ಅಲ್ಲಿ ಕುತಗಂಡು ನಮ್ಮ ಆಳಕ್ಯಾಗದಿಲ್ಲ ಅಂತ ರೇಸಾರ್ಟಗೋದೋರ ಏನನ್ನಬೇಕು ಹೇಳ್ಳು?"

"ಇನ್ನೇನನ್ನಬೇಕು? ನಾವು ವಿಧಾನಸಭೆ ವೇಗತೆ ಇದ್ದುಕೊಂಡು ಕರ್ನಾಟಕ ಆಳಕ್ಯಾಗಲ್ಲ, ರೆಸಾರ್ಟ್ ಸರಿ ಅಂತ ಅವುರನ್ನವಾದ್ರೆ ಸರಿಯಾಗೆ ಅನ್ನಬೇಕಾಯ್ತದೆ. ಏನಪ್ಪ ಅಂದ್ರೆ, 'ನಿಜಕಂದ್ರ, ಹಂದಿಗಳು ಚರಂಡಿಲೇ ತಿರುಗಾಡ್ತವೆ. ಚರಂಡಿ ಬಗ್ಗೆನೆ ಯೋಚನೆ ಮಾಡ್ತವೆ. ಅವೆಂದೂ ರಾಜಬೀದಿಗೆ ಬರಲ್ಲ, ಬಂದ್ರು, ಕೂಡ ಚರಂಡಿ ಕಡೆಕೆ ಓಡ್ತವೆ. ಅದೆ ಕುದುರೆ ರಾಜಬೀದಿಲೆ ತಿರುಗಾಡದು. ನೀವು ಹಂದಿಗಳಾಯ್ತಿರೊ, ಕುದುರೆಗಳಾಯ್ತಿರೋ? ಅಂತ ಕೇಳಬಾಯ್ತು!"

ಸಂಸ್ಕೃತ ವಿವಿ ಸಮಗ್ರ ಒಳಿತಿಗೆ ಪೂರಕವಲ್ಲ

'ಯಾರ ಸಂತೃಪ್ತಿಗೆ ಸಂಸ್ಕೃತ ವೇದ ವಿಶ್ವವಿದ್ಯಾಲಯ?' ಎಂಬ ಶೀರ್ಷಿಕೆಯ ವಿಶೇಷ ಲೇಖನ ವಸ್ತುನಿಷ್ಠ ವಿಮರ್ಶೆಯಿಂದ ಗಮನ ಸೆಳೆಯುತ್ತದೆ. ಲೇಖಕರು ಅಂಕಿ-ಅಂಶಗಳ ಸಹಿತ ಪ್ರಸ್ತುತ ವಿವಾದಕ್ಕೆ ಗ್ರಾಸವಾಗಿರುವ ಸಂಸ್ಕೃತ ವಿಶ್ವವಿದ್ಯಾಲಯದ ಸ್ಥಾಪನೆಯ ಒಳ-ಹೊರವನ್ನು ಸೂಕ್ಷ್ಮಮತಿತ್ವದಿಂದ ತೆರೆದಿಟ್ಟಿದ್ದಾರೆ.

ಸಂಸ್ಕೃತ ಭಾಷೆಯ ಬಗೆಗಿರುವ ಮಿತ್‌ಗಳನ್ನು ತಪ್ಪು ಅಭಿಪ್ರಾಯ ಎಂದು ಸ್ಪಷ್ಟವಾಗಿ ತೆರೆದಿಟ್ಟಿದ್ದಾರೆ. ಸನಾತನವಾದಿಗಳು ಮಿತ್‌ಗಳನ್ನು ಸೃಷ್ಟಿಸುವುದರ ಮೂಲಕವೇ ಈ ನಾಡಿನ ಬಹುಮುಖಿ ಸಂಸ್ಕೃತಿಯ ಶ್ರೀಮಂತಿಕೆಯನ್ನು ಹಿನ್ನೆಲೆಗೆ ಸರಿಸಲು ಪ್ರಯತ್ನಿಸಿದ್ದು ನಗ್ನ ಸತ್ಯ. ಸಂಸ್ಕೃತ ಭಾಷೆಯನ್ನು ಸಹ ದೇವಭಾಷೆ, ಮಾತೃಭಾಷೆ ಎಂಬಿತ್ಯಾದಿ ಲೇಖನಗಳೊಂದಿಗೆ ಅದನ್ನು ಜನಸಾಮಾನ್ಯರ ಸಂಪರ್ಕದಿಂದ ದೂರವಿಟ್ಟು ಮಾತೃಭಾಷೆಯ ಸ್ಥಾನಕ್ಕೆ ಕೊಂಡೊಯ್ದಿರುವುದು ಈ ಪುರೋಹಿತಶಾಹಿ ಪ್ರಣೀತ ಪಂಡಿತ ಮಾನ್ಯರೆ.

ಸಂಸ್ಕೃತ ಭಾಷೆಗೆ ಕರ್ನಾಟಕದಲ್ಲಿ ಒಂದು ಪ್ರತ್ಯೇಕ ವಿಶ್ವವಿದ್ಯಾಲಯದ ಅವಶ್ಯಕತೆ ಇದೆಯೇ? ಎಂಬ ಪ್ರಶ್ನೆಯೇ ಇಲ್ಲಿ ಅತಿಮುಖ್ಯವಾದುದ್ದು.

ಹೊಗಳಿಕೆ ತೆಗಳಿಕೆ

ಏಕಮುಖಿ ಚಿಂತನೆಯ ಕನ್ನಡಿಯಂತಿರುವ ಸಂಘಪರಿವಾರ ಪೋಷಿತ ಸರಕಾರದ ಈ ಯೋಜನೆ ಒಂದು ರಾಜಕೀಯ ಹುನ್ನಾರ. ಮಠಗಳನ್ನೇ ಓಲೈಸುವ, ಜ್ಯೋತಿಷ್ಯವನ್ನು ಪಠ್ಯವನ್ನಾಗಿ ರೂಪಿಸಲು ಬಯಸುವ ಈ ಸರ್ಕಾರದ ಅಂತರ್ಯದಲ್ಲಿರುವುದು ಪಾಳೇಗಾರಿಕೆ ಮನೋಸ್ಥಿತಿ. ಆದ್ದರಿಂದಲೇ ಯಾವುದೇ ಸಾರ್ವಜನಿಕ ಚರ್ಚೆಗಳಿಲ್ಲದೆ ಏಕಾಏಕಿಯಾಗಿ ಇಂತಹ ನಿರ್ಧಾರಗಳನ್ನು ಕೈಗೊಂಡಿರುವುದು. ಸಂಸ್ಕೃತ ವೇದ ವಿಶ್ವವಿದ್ಯಾಲಯ ಎಂಬ ನಾಮಕರಣದಲ್ಲಿಯೇ ನಾಡಿನ ಜನತೆಗೆ ನಾಮ ಬಳಿಯುವ ಸೂಚನೆಗಳು ಕಾಣುತ್ತವೆ. ಭಾಷೆಯೊಂದನ್ನು ನೆಪವಾಗಿರಿಸಿಕೊಂಡು ಆ ಮೂಲಕ ನಮ್ಮ ಬಹುಸಂಖ್ಯಾತರ ಸಂಸ್ಕೃತಿಯನ್ನು ದುರ್ಬಲಗೊಳಿಸುವ ಸಂಚನ್ನು ಪ್ರಬಲವಾಗಿ ವಿರೋಧಿಸಬೇಕಾಗಿದೆ.

ಪ್ರತಿಯೊಂದು ಭಾಷೆಯ ಬೆಳವಣಿಗೆಯು ಇತರ ಭಾಷೆಯ ಸಂಪರ್ಕದಿಂದಲೇ ಸಾಧ್ಯ ಎಂಬುವುದು ವಾಸ್ತವ. ಆದ್ದರಿಂದ ಸಂಸ್ಕೃತ ವೇದ ವಿಶ್ವವಿದ್ಯಾಲಯದ ಅವಶ್ಯಕತೆ ಇಲ್ಲ ಎಂದು ನಾವು ಪ್ರತಿಪಾದಿಸಲು ಇರುವ ಪ್ರಬಲ ಕಾರಣ ಅದರ ಹಿಂದೆ ಅಡಗಿರುವ ಸಂಕುಚಿತತೆ ಮತ್ತು ಧ್ರುವೀಕರಣದ ಒಳಸಂಚು ಹೊರತು ಭಾಷಾ ದ್ವೇಷ ಅಲ್ಲ.


ಪ್ರಾಚ್ಯ ಭಾಷಾ ಉನ್ನತ ಅಧ್ಯಯನ/ಸಂಶೋಧನಾ ಕೇಂದ್ರ ತೆರೆಯುವಂತೆ ಆಗ್ರಹಿಸಬೇಕು ಎಂಬ ಲೇಖಕರ ಸಲಹೆ ಅತ್ಯಂತ ಆರೋಗ್ಯಪೂರ್ಣ. ಯಾವುದೇ ಯೋಜನೆಯ ಉದ್ದೇಶ ಸರ್ವರ ಸಮಗ್ರ ಒಳಿತಿಗೆ ಪೂರಕವಾಗಿರಬೇಕೆಂಬ ವಿವೇಕ ಒಂದು ಜನತಾಂತ್ರಿಕ ಸರ್ಕಾರಕ್ಕಿರಬೇಕು ಇಲ್ಲದಿದ್ದಲ್ಲಿ...

-ವಿದ್ಯಾಧರ ರೈ ಎಂ.ಆರ್., ಮಡಿಕೇರಿ

ಈ ವಾರದ ಪತ್ರಿಕೆಯಲ್ಲಿ "ಕಂಡಹಾಗೆ" ಓದುತ್ತಿದ್ದಂತೆ ನಿಜಕ್ಕೂ ತುಂಬಾ ಯಾತನೆ ಅನುಭವಿಸಿಬಿಟ್ಟೆ. ಈ ದೇಶದ ಸಂವಿಧಾನದಲ್ಲಿ ಸಾರಿ ಸಾರಿ ಹೇಳಿರುವಂತೆ ಅನೇಕ ಸವಲತ್ತುಗಳು ಜನಸಾಮಾನ್ಯರಿಗೆ ದೊರಕಿಸಿಕೊಡುವುದು ಪ್ರತಿ ರಾಜಕೀಯ ಪಕ್ಷಗಳ ಮತ್ತು ಅಧಿಕಾರಿಗಳ ಆದ್ಯ ಕರ್ತವ್ಯ. ಆದರೆ 'ಅಭಿವೃದ್ಧಿ' ಎಂಬ ಅಕ್ಷರವನ್ನು ಮೂರು ಭಾಗಗಳ ಜನ ತಮ್ಮ ಭಾಗವಾಗಿ ಮಾಡಿಕೊಂಡಿದ್ದಾರೆ. ಆ ಮೂರೂ ಬಣಗಳ ದೃಷ್ಟಿಯಲ್ಲಿ 'ಅಭಿವೃದ್ಧಿ' ಎಂಬ ಪದ ಯಾವ ಅರ್ಥವನ್ನು ಪಡೆದಿದೆ ಎಂಬುದನ್ನು ಕಂಡಾಗ, ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದು ಇಷ್ಟು ವರ್ಷಗಳಾದರೂ ಅದರ ಪ್ರಾರಂಭಿಕ ಹಂತದ ಸುತ್ತಲೇ ಗಿರಕಿ ಹೊಡೆಯುತ್ತಿರುವುದನ್ನು ನೋಡಿದಾಗ, ಈ ದೇಶದ ಸಂಸದೀಯ ವ್ಯವಸ್ಥೆಯ ಬಹುದೊಡ್ಡ ಸೋಲು ಎಂಬುದನ್ನು ಬೇರೆ ತಿಳಿಯಬೇಕಾಗಿಲ್ಲ, ಪಕ್ಷ ಚಿಹ್ನೆಗಳನ್ನು ಮುಖವಾಡವಾಗಿರಿಸಿಕೊಂಡು ಜನರನ್ನ ವಂಚಿಸುತ್ತಾ, ಅವರಿಗೆ ಸಾಮಾನ್ಯ ಮೂಲಭೂತ ಸೌಕರ್ಯಗಳನ್ನು ನಿರಾಕರಿಸುತ್ತಾ ಇರುವ ರಾಜಕಾರಣಿಗಳ, ಅಧಿಕಾರಿಗಳ ಧೋರಣೆ ಕೇವಲ ಲಾಲ್‌ಗಢ, ರಾಮ್‌ಗಢಗಳ ವಿಚಾರಕ್ಕಷ್ಟೆ ಸೀಮಿತಗೊಂಡಿಲ್ಲ, ಇಂತಹ ಸಮಸ್ಯೆಗಳನ್ನು ಇಡೀ ದೇಶದಗಲ ಇರುವ ಜನಸಮುದಾಯ ಹೊಂದಿರುವುದರಿಂದ, ಸಮಸ್ಯೆಯಿಂದ ಪಾರುಮಾಡುವ ತುರ್ತು ಅಗತ್ಯ ಇನ್ನಾದರೂ ಆಗಲೇಬೇಕು. ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ವಲಯಗಳ ಮುಖ್ಯವಾಹಿನಿಯಲ್ಲಿ ಇವರ ಪಾಲುದಾರಿಕೆ ಹೆಚ್ಚದ ಹೊರತು, ಈ ದೇಶ ಮತ್ತಷ್ಟು ಸರ್ವರೀತಿಯಲ್ಲೂ ಅಧಃಪತನದತ್ತ ಹೆಜ್ಜೆ ಹಾಕುವುದನ್ನು ತಡೆಯಲು ನ್ಯಾಯಯುತ ಮಾರ್ಗವಾದರೂ ಯಾವುದಿದೆ?


-ಸಿದ್ದು ಅಂಬಾಡಹಳ್ಳಿ

'ಕಬಡ್ಡಿ' ಕಮಾಲ್!



ಬಹಳ ನಿರೀಕ್ಷೆಯ 'ಕಬಡ್ಡಿ' ಚಿತ್ರ ಈಗ ತೆರೆಕಂಡಿದೆ. ಈ ಚಿತ್ರವನ್ನು ರಂಗಭೂಮಿ ಹಿನ್ನೆಲೆಯ ನರೇಂದ್ರ ಬಾಬು ನಿರ್ದೇಶಿಸಿದ್ದಾರೆ. ಸದಭಿರುಚಿಯ ನಟ ಕಿಶೋರ್ ನರೇಂದ್ರ ಬಾಬು ಅವರ ಜೊತೆಗೂಡಿ ಈ ಚಿತ್ರ ನಿರ್ಮಾಣವಾಗಲು ಕಾರಣರಾಗಿದ್ದಾರೆ.

ಬಹುತೇಕ ರಂಗಭೂಮಿ ಕಲಾವಿದರೇ ಈ ಚಿತ್ರದಲ್ಲಿ ನಟಿಸಿದ್ದರಿಂದ ಚಿತ್ರ
ರಿಯಲಿಸ್ಟಿಕ್ ಆಗಿ ಮೂಡಿಬಂದಿರಬಹುದು, ಚಿತ್ರದ ಹೆಸರು ಕಬಡ್ಡಿಯಾಗಿದ್ದರಿಂ
ಚಿತ್ರದಲ್ಲಿ ಮಣ್ಣಿನ ವಾಸನೆ ಮತ್ತು ಸೊಗಡು ಇದ್ದೇ ಇರುತ್ತದೆ. ಎಂದು ಎಲ್ಲರೂ ನಿರೀಕ್ಷಿ
ನೆರೆಯ ಚಿತ್ರರಂಗಗಳಿಂದ ಬರೀ ಲಾಂಗು ಮಚ್ಚು ಕಥೆಗಳನ್ನು ಕನ್ನಡಕ್ಕೆ ಯಥಾವತ್ತು
ಇಳಿಸುತ್ತಿರುವ ಇವತ್ತಿನ ಕನ್ನಡ ಸಿನಿಮಾ ಜನರ ನಡುವೆ ಯುವಕರಾದ ನರೇಂದ್ರ
ಮತ್ತು ಕಿಶೋರ್ ಪ್ರಯತ್ನ ಡಿಫರೆಂಟ್ ಆಗಿರುತ್ತದೆ ಎಂಬುದೂ ಬಹಳಷ್ಟು ಜನರ ನಿರೀಕ್ಷೆಯಾಗಿತ್ತು.



ಮೊನ್ನೆ 'ಕಬಡ್ಡಿ' ನೋಡಿದಾಗ ಆ ಎಲ್ಲ ನಿರೀಕ್ಷೆಗಳಿಗೆ ಅಂತಹ ಮೋಸವೇನೂ ಆಗಲಿಲ್ಲ. ನಿಜಕ್ಕೂ ನರೇಂದ್ರ ಬಾಬು ಬಿಗಿಯಾದ ಚಿತ್ರಕತೆಯ ಮೂಲಕ ಕಬಡ್ಡಿ ಆಟದ ಜೊತೆಗೆ ಯುವ ಪ್ರೇಮಿಗಳ ಪ್ರೀತಿಯ ತಾಕಲಾಟವನ್ನು ತುಂಬ ನವಿರಾಗಿ ನಿರೂಪಿಸುತ್ತಾ ಹೋಗಿದ್ದಾರೆ. ಆ ಮಟ್ಟಿಗೆ ಈ ಚಿತ್ರ ನೋಡುವಾಗ ಇದರಲ್ಲಿ ಕನ್ನಡದ ಮಣ್ಣಿನ ವಾಸನೆ ನೋಡುಗನ ಅನುಭವಕ್ಕೆ ಬರುತ್ತದೆ. ಅದಕ್ಕೆ ಪೂರಕವಾಗಿ ನಿರ್ದೇಶಕ ಬಳಸಿರುವ ಮಂಡ್ಯ ಕನ್ನಡದ ಭಾಷೆ ಕೂಡಾ ಮನಸ್ಸಿಗೆ ಮುದ ನೀಡುತ್ತದೆ.

ಇಷ್ಟೆಲ್ಲಾ ಆದರೂ ದುರಂತವೆಂದರೆ, ಚಿತ್ರದ ಕ್ಲೈಮ್ಯಾಕ್ಸ್ ಅನ್ನು ನರೇಂದ್ರ
ಸಮರ್ಪಕವಾಗಿ ನಿಭಾಯಿಸುವಲ್ಲಿ ಎಡವಿರುವುದು. ಯಾವುದೇ ಒಂದು ಚಿತ್ರಕ್ಕೆ ಕ್ಲೈ
ಬಹುಮುಖ್ಯ. ಆದರೆ ಇಲ್ಲಿ ನರೇಂದ್ರ ಬಾಬು ಅದನ್ನೇ ಹಿಚುಕಿಹಾಕಿದ್ದಾರೆ. ಹಿ
ಆರಂಭದಿಂದ ದೊರೆಯುವ ಚೇತೋಹಾರಿ ಅನುಭವ ಚಿತ್ರದ ಕ್ಲೈಮ್ಯಾಕ್ಸ್‌ನಿಂದಾಗಿ ಸಂಪೂ
ಭಗ್ನಗೊಳ್ಳುತ್ತದೆ. ಬಹಳ ಕಾಲದ ತನಕ ನೆನಪಿನಲ್ಲಿ ಉಳಿಯಬಹುದಾದ ಒಂದು ಚಿತ್ರ
ನೀಡುವ ತಾಕತ್ತು ಹೊಂದಿದ್ದ ನಿರ್ದೇಶಕ ನರೇಂದ್ರ ಬಾಬು ತನ್ನದೇ ಪ್ರಮಾದದಿ
ಚಿತ್ರವನ್ನು ಕೆಡಿಸಿದ್ದಾರೆ. ಉಳಿದಂತೆ ಎಲ್ಲ ವಿಷಯದಲ್ಲೂ ಬಾಬು ಗೆದ್ದಿದ್ದಾರೆ. ನಟನೆ
ಕಿಶೋರ್, ಅವಿನಾಶ್, ಹೊಸಬರಾದ ನಾಯಕ ನಾಯಕಿಯರು ತಮ್ಮ ಪಾತ್ರಕ್ಕೆ
ತುಂಬಿದ್ದಾರೆ. ಒಟ್ಟಾರೆಯಾಗಿ ಹೊಸಬರ ಬಗೆಗಿನ ನಿರೀಕ್ಷೆ ಹುಸಿಯಾಗಿಲ್ಲ ಎಂಬ
ಸಮಾಧಾನದ ಸಂಗತಿ.

ಆಧುನಿಕ ಬಸವಣ್ಣ

ಯಡ್ಯೂರಪ್ಪ ಅಂದರೆ ಯಾರು?

ಆಧುನಿಕ ಬಸವಣ್ಣ!

ಆ ಬಸವಣ್ಣ ಏನು ಹೇಳಿದ -'ಇವನಾರವ ಇವನಾರವ' ಅಂತ ಬಡಿದಾಡಿಕೊಂಡು ಸಾಯಬೇಡ್ರೋ, 'ಇವ ನಮ್ಮವ ಇವ ನಮ್ಮವ' ಅನ್ರೊ ಅಂತ ಬಡ್ಕಂಡು ಸತ್ತ.

ಅಂಕಣ

▶ ಎಚ್.ಎಲ್. ಕೇಶವಮೂರ್ತಿ

ಈ ಮಾತಿದೆಯಲ್ಲ 'ಇವನಾರವ ಇವನಾರವ' ಅನ್ನೊ ಮಾತು ಯಡ್ಯೂರಪ್ಪನವರ ಮೇಲೆ ಗಾಢವಾದ ಪರಿಣಾಮ ಬೀರ್‍ತು, ಆಹಾ ಎಂತಹ ಘನವಾದ ಮಾತು ಹೇಳಿದಾರೆ ಅಣ್ಣ ಬಸವಣ್ಣ ಅಂತ ಮೆಚ್ಚಿ ತಲೆದೂಗಿದರು. ಅವರ ಆಶಯವನ್ನು ಹಂತವಾಗಿ ಜಾರಿಗೆ ತರಲು ಮನಸ್ಸು ಮಾಡಿದರು.

ಮನುಷ್ಯರು ಎಂದರೆ ಎಲ್ಲರೂ ಒಂದೇ ಅಲ್ವ, ಹಾಗೇನೆ ಸಾದರು ಎಂದರೆ ಎಲ್ಲರೂ ಒಂದೆ ಎಂದು ಅವರ ಒಳಮನಸ್ಸು ಹೇಳಿತು. ಅದಕ್ಕೇನು ಮಾಡಿದರು ಈ ಆಧುನಿಕ ಬಸವಣ್ಣ ಅಂದರೆ ಹಿಂದೂ ಸಾದರು, ಲಿಂಗಾಯತ ವೀರಶೈವ ಸಾದರು ಅಂತ ಯಾಕೆ ಬಡಿದಾಡಿಕೊಂಡು ಸಾಯ್ತಿರೋ ನಿಮ್ಮನ್ನೆಲ್ಲ ಒಂದು ಮಾಡ್ತೀನಿ ಅಂತಾವ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಬದಲಾವಣೆ ಮಾಡಿದ್ರು. ಹೇಗೂ ಹಿಂದೂ ಸಾದರು 2ಎ ವರ್ಗದಲ್ಲಿದ್ದರಲ್ಲ, ಲಿಂಗಾಯತ ವೀರಶೈವ ಸಾದರನ್ನೂ ಅದರೊಳಕ್ಕೆ ನುಗ್ಗಿಸಿದರು. ಆಹಾ ಹಿಂದೂ ಸಾದರು, ಲಿಂಗಾಯತ ವೀರಶೈವ ಸಾದರು ಇಬ್ಬರ್‍ನೂ ಒಂದು ಮಾಡಿದೆನಲ್ಲ ಅಂತ ಹಿರಿಹಿರಿ ಹಿಗ್ಗಿದರು. ಬಸವಣ್ಣನ ಆಶಯವನ್ನು ಈ ಮೂಲಕ ಜಾರಿಗೊಳಿಸಿದೆನಲ್ಲ ಅಂತ ಸಂತೃಪ್ತಿ ಪಟ್ಟುಕೊಂಡರು!

ಆಧುನಿಕ ಬಸವಣ್ಣನವರ ಈ ಮಹತ್ತರವಾದ ಕಾರ್ಯವನ್ನು ಪ್ರಶಂಸಿಸಬಾರದ. ಉಹುಂ. ಮುಂದುವರೆದ ಲಿಂಗಾಯತ ವೀರಶೈವ ಸಾದರಿಗೆ ಅನುಕೂಲ ಮಾಡಲು ಹೀಗೆ ಮಾಡಿದಾರೆ ಅಂತ ಕೂಗಾಡ್ತವೆ. ಅವರ ಮನೆ ಹೆಣ್ಣುಮಕ್ಕಳ ನಮಗೆ ಲಗ್ನ ಮಾಡಿಕೊಡ್ತಾರ ಅಂತಾನೂ ಕೆಲವು ಪೋಲಿ ಮುಂಡೇವು ಕೇಳ್ತಾ ಬಿದ್ದವಂತೆ. ಅಯ್ಯೊ ರಾಮನೆ, ಅಂತಸ್ತು, ಗೌರವ, ಘನತೆ ಇದ್ದರೆ ಅದ್ನೂ ಮಾಡಿಕೊಡ್ತಾರಪ್ಪ ಅದರಲ್ಲೇನಿದೆ. ಇದ್ಯಾವುದೂ ಅವರ ತಲೆ ಒಳಕ್ಕೆ ಹೋಗುವುದೇ ಇಲ್ಲ, ಅಲ್ಲೇ ಸಾಯ್ತೀವಿ ಅಂದರೆ ಬಿದ್ದು ಸಾಯ್ಲಿ, ಯಾರಿಗೇನಂತೆ. ಪಾಪ ಆಧುನಿಕ ಬಸವಣ್ಣನವರು ಸರ್ಕಾರಿ ಆಜ್ಞೆಯನ್ನು ಒಲ್ಲದ ಮನಸ್ಸಿನಿಂದ ಹಿಂಪಡೆಯಬೇಕಾಯ್ತು. ಹೀಗೆ ಮಾಡುವಾಗ ಅವರ ಮನಸ್ಸು ಎಂತಹ ಸಂಕಟ ಅನುಭವಿಸಿತೋ ಏನು ಕತೆಯೋ....

ಪ್ರತಿಮೆ ಪ್ರದೇಶ

ಮಾಯಾವತಿಯ ಎದೆಗಾರಿಕೆ ಮೆಚ್ಚಬೇಕು. ಹಲವರು ಇದೊಂದು 'ಹುಚ್ಚುಗಾರಿಕೆ' ಎಂದರೂ ಇದೇ ನನ್ನ 'ಹೆಚ್ಚುಗಾರಿಕೆ' ಎಂದು ತಮ್ಮ ಪ್ರತಿಮೆ ಸ್ಥಾಪಿಸುತ್ತಲೇ ಇದ್ದಾರೆ. ಇದನ್ನು ಸಹಿಸದ ಯಾರೋ ಒಬ್ಬ ಸುಪ್ರೀಂಕೋರ್ಟಿನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಗುಜರಾಯಿಸಿ ಇಂತಹ ಹುಚ್ಚಾಟಕ್ಕೆ ಕಡಿವಾಣ ಹಾಕಿ ಎಂದು ಕೋರಿಕೊಂಡಿದ್ದಾನಂತೆ. ಯಾವ್ದೊನೋ ಆಕೇನ ಕಂಡರೆ ಆಗದ ನ್ಯಾಯಾಧೀಶ ಹುಚ್ಚುಹುಚ್ಚಾಗಿ ಇದನ್ನೆಲ್ಲ ನಿಲ್ಲಿಸಿಬಿಡು ಅಂದರೇನು ಗತಿ ಅಂತ ಅಮ್ಮಾವರು ಕೋರ್ಟಿನಲ್ಲಿ ಕೇಸು ವಿಚಾರಣೆಗೆ ಬರುವ ಮುಂಚೇನೇ ತರಾತುರಿಯಲ್ಲಿ ಪ್ರತಿಮೆ ಉದ್ಘಾಟಿಸಿಕೊಂಡರು. 'ಕೊಂಡರು' ಅಂತ ಯಾಕೆ ಹೇಳಿದೆ ಅಂದರೆ ಅವರ ಪ್ರತಿಮೇನ ಅವರೇ ಉದ್ಘಾಟಿಸಿಕೊಂಡರು ಅದಕ್ಕೆ. ಇದೇನು ಹುಚ್ಚು ಅಂದರೆ, ಅಯ್ಯೋ ಶಿವನೆ ನನ್ನ ಪ್ರತಿಮೆ ಉದ್ಘಾಟಿಸಿ ಅಂತ ಅವರಿವರ ಕಾಲನ್ನ ಯಾಕ್ರೀ ಕಟ್ಟಬೇಕು. ಸ್ವಾಭಿಮಾನಿ ಮಹಿಳೆ ಅಲ್ವ ಆಕೆ. ಅದಕ್ಕೇ ಅವರೇ ಮಾಡಿಕೊಂಡರಪ್ಪ ಆದರಲ್ಲೇನು ಆಶ್ಚರ್ಯ ಅಂತೀನಿ...

ನಮ್ಮ ನಾಯಕೀನೆ ಹಿಂಗೆ ಹುಚ್ಚಾಪಟ್ಟೆ ಪ್ರತಿಮೆಗಳ ಸ್ಥಾಪಿಸುತ್ತಿರಬೇಕಾದರೆ ನಾನ್ಯಾಕೆ ಕೈಕಟ್ಟಿ ಕುಳಿತಿರಲಿ ಅಂತ ಬಹುಜನ ಸಮಾಜ ಪಕ್ಷದ ಕಾರ್ಯಕರ್ತನೊಬ್ಬ ತನ್ನ ಪ್ರತಿಮೆನ ತಾನೆ ಸ್ಥಾಪಿಸಿಕೊಂಡನಂತೆ. ಇಷ್ಟು ಸಾಲದು ಅಂತ ತನ್ನನ್ನು ಹಾಡಿ ಹೊಗಳಿ ಕವನಗಳನ್ನು ಬರೆಸಿಕೊಂಡನಂತೆ. ವಾರಣಾಸಿ ಹತ್ತಿರದ ಊರಿನ ಈ ಪ್ರತಿಮೆ ವೀರನ್ನ ಏನಪ್ಪ ಇದು ಹುಚ್ಚಾಟ ಅಂದಿದ್ದಕ್ಕೆ ದೊಡ್ಡದೊಡ್ಡ ರಾಜಕಾರಣಿಗಳು ತಮ್ಮ ಪ್ರತಿಮೆಗಳನ್ನು ಸ್ಥಾಪಿಸಿಕೊಂಡು, ಹೊಗಳಿ ಪುಸ್ತಕ ಬರೆಸೋದು, ಪಾಂಪ್ಲೆಟ್ಸ್



ಹಂಚಿಕೊಂಡು ಮಾಡ್ತಿರೋವಾಗ ಇದರಲ್ಲೇನು ತಪ್ಪು ಕಂಡಿ, ಅಂತಾ ಕೇಳ್ತಾ ಬಿದ್ದವನಂತೆ.

ಎಲಎಲಾ ಇಂಥೋನೆ ಪ್ರತಿಮೆ ಸ್ಥಾಪಿಸಿಕೊಂಡಿರಬೇಕಾದರೆ ನಾವು ಯಾಕೆ ಹಿಂದೆ ಬೀಳಬೇಕು ಅಂತ ಹತ್ತಾರು ಬಿಎಸ್‌ಪಿ.ಕಾರ್ಯಕರ್ತರು ತರಾತುರಿಯಲ್ಲಿ ಓಡಾಡುತ್ತಿರುವುದರಿಂದ ಪ್ರತಿಮೆ ಕೆತ್ತಿದ ಶಿಲ್ಪಿಗೆ ಬಿಡುವಿಲ್ಲದ ಕೆಲಸ ಅಂತೆ.

ಅಂತೂ ಇಂತೂ ಮಾಯಾವತಿ ಅಕ್ಕನ ಚಾಳಿ ಕಾರ್ಯಕರ್ತರಿಗೆಲ್ಲ ಹಬ್ಬುತ್ತಿದೆ ಅಂದ ಹಾಗಾಯಿತು!

ನನಗೊಂದು ಸಣ್ಣ ಅನುಮಾನ. ದೆಹಲಿ ರಾಜ
ಅಲ್ವ, ಹಾಲಿ ಮಾಜಿ ಪ್ರತಿಷ್ಠಿತರೆಲ್ಲ ಮುದಿ
ಸಾಗಿಸುತ್ತಿರೋದು ಅಲ್ಲೆ. ಇವರು ಸತ್ತ
ಇವರಿಗೊಂದು 'ವನ' ಬೇಕೇಬೇಕು. ವಿದೇಶಿ ರಾಜ
ತಜ್ಞರು ಬಂದಾಗ ಅವರು ಹೂಗುಚ್ಛ ಅರ್ಪಿಸಲು
ಅಂತ ನಿರ್ಮಾಣ ಆಗಲೇಬೇಕು. ಇದು ದೇಶದ ಪ್ರತಿ
ಪ್ರಶ್ನೆ. ಹೀಗೆ ಒಬ್ಬೊಬ್ಬ 'ರಾಷ್ಟ್ರನಾಯಕ' ಸತ್ತಾ
ಒಂದೊಂದು ವನ ನಿರ್ಮಿಸುತ್ತಾ ಹೋದರೆ 'ಲ್ಯೂ
ದೆಹಲಿ', 'ಸಮಾಧಿಗಳ ದೆಹಲಿ' ಆಗಬಹುದೇನೋ
ಎಲ್ಲೋ ಓದಿದ ನೆನಪು. ಹಾಗೇನೇ ಪ್ರತಿಮೆ
ಸ್ಥಾಪಿಸುವ ಭರಾಟೆ ನೋಡಿದರೆ 'ಉತ್ತರ ಪ್ರ
ಅನ್ನೋದು 'ಪ್ರತಿಮೆ ಪ್ರದೇಶ' ಆಗಬಹುದಾ

ತೆರಿಗೆದಾರನ ಹಣ ಅಂದರೆ.....


ಆರ್ಥಿಕ ಹಿಂಜರಿತ ಅನ್ನೋದು ಬೇತಾಳನಂತೆ
ಬಿದ್ದಿದೆ. ಅಮೆರಿಕದ ಯಾವುದೋ ಒಂದು
ಇನ್ಶೂರೆನ್ಸ್ ಕಂಪನೀನೂ
ಬಲಿಯಾಯ್ತಂತೆ. 'ನಾವು ದಿ
ಎದ್ದಿದೀವಿ ಸಹಾಯಹಸ್ತ ನೀಡಿ ಕಾ
ಅಂತ ಸರ್ಕಾರದ ಹತ್ತಿರ ಹಲ್ಕಿರಿ
ಅರೆ ನಿಮ್ದು ಖಾಸಗಿ ಕಂಪನಿ;
ಬಂದಾಗ ಉದ್ಧಟತನದಿಂದ ವರ್ತಿ
ನಿಮ್ಮ ನಷ್ಟಾನ ಯಾಕೆ ತುಂಬಿ ಕೊಡ
ಅನ್ನಲಿಲ್ಲವಂತೆ ಒಬಾಮಾ ಸ
ಅಯ್ಯಯ್ಯೋ ಸಾವಿರಾರು ಜನ ಉದ
ಕಳೆದುಕೊಂಡು ಬೀದಿಗೆ ಬೀಳ್ತಾರಲ್ಲ
ಮಾನವೀಯತೆಯಿಂದ ಅದ
ಬಿಲಿಯನ್ ಡಾಲರ್ ನೀಡಿತಂತೆ.
ಕೈ ಸೇರಿತಲ್ಲ. ಇನ್ನು ಕಂಪನಿ ಉ
ರೂಪುರೇಷೆ ಸಿದ್ಧಪಡಿಸಲು ಸಂಬಂಧಿಸಿದ
ಮುಂದಾದರು. ಅದರ ಕೂಲಂಕಷ ಚರ್ಚೆ ಆಗಬೇ
ಅದಕ್ಕೆ ಐಷಾರಾಮಿ ಹೋಟೆಲ್ ಬುಕ್ ಮಾಡಿ ಬೋ
ಮೀಟಿಂಗ್ ಕರೆದರಂತೆ! ಅವರ ಕಂಪನಿಯದ್ದೇ ಬೋ
ಮೀಟಿಂಗ್ ಹಾಲ್ ಇತ್ತಲ್ಲ ಅಂದರೆ ಇತ್ತು
ಅಷ್ಟೆ!

ಯಡ್ಯೂರಪ್ಪನವರು ಐಷಾರಾಮಿ ಹೋಟೆ
ಚಿಂತನಮಂಥನ ನಡೆಸಿದರಲ್ಲ ಆಗ ಇದು ನೆನಪಾ
ತೆರಿಗೆದಾರನ ಹಣ ಅಂದರೆ....




...ವಮಣಿ ಜೋಷ್!

...ನಿರ್ದೇಶಕ ಶಿವಮಣಿ ತನ್ನ ಒಂದೂವರೆ ದಶಕಗಳ ...ಜೀವನದಲ್ಲಿ ಒಂದು ಅಪರೂಪದ ಸಾಧನೆ ಮಾಡುವ ...ದಲ್ಲಿದ್ದಾರೆ. ಅದೇನೆಂದರೆ, ಅವರ ನಿರ್ದೇಶನದ ...ಷ್' ಚಿತ್ರ ಮುಂದಿನ ವಾರ ನೂರು ದಿನಗಳ ಸಂಭ್ರಮವನ್ನು ಕಾಣಲಿದೆ.



ಶಿವಮಣಿ ಕನ್ನಡ ಚಿತ್ರ ರಂಗ ಕಂಡ ಪ್ರತಿಭಾವಂತ ತಂತ್ರಜ್ಞರಲ್ಲಿ ಒಬ್ಬರು ಎಂಬುದರಲ್ಲಿ ಸಂಶಯವೇ ಇಲ್ಲ, ಅದಕ್ಕೆ ಅವರ ನಿರ್ದೇಶನದ 'ದೊರೆ', 'ಸ್ವಾತಿ', 'ಶಿವಸೈನ್ಯ', 'ಗೋಲಿಬಾರ್' .... ಹೀಗೆ ಅನೇಕ ಚಿತ್ರಗಳೇ ಸಾಕ್ಷಿ. ಆದರೆ ...ಷವೆಂದರೆ, ಈ ಹಿಂದೆ ದೊಡ್ಡ ದೊಡ್ಡ ...ಕನಟರನ್ನು ಹಾಕಿಕೊಂಡು ಚಿತ್ರ ಮಾಡಿದ್ದರೂ ...ಣಿಗೆ ಈತನಕ ಸೆಂಚುರಿ ಬಾರಿಸುವ ಸಿನಿಮಾ ...ಲು ಸಾಧ್ಯವಾಗಿರಲೇ ಇಲ್ಲ. ಈಗ ಕನ್ನಡ ...ಗದಲ್ಲಿ ದೊಡ್ಡ ದೊಡ್ಡ ನಟರ ಚಿತ್ರಗಳೇ ಮಕಾಡೆ ...ಯುತ್ತಿರುವಾಗ ಶಿವಮಣಿ ಹೊಸ ಹುಡುಗರನ್ನು ...ಕೊಂಡು ನಿರ್ದೇಶಿಸಿದ 'ಜೋಷ್' ಚಿತ್ರ ...ನೋತ್ಸವ ಆಚರಿಸಲು ಹೊರಟಿದೆ. ಇದು ...ತವಾಗಿಯೂ ಶಿವಮಣಿ ಸಂತೋಷಪಡುವಂತಹ ...ು. ಅಷ್ಟೇ ಅಲ್ಲ 'ಜೋಷ್' ಚಿತ್ರದ ಯಶಸ್ಸು ... ಚಿತ್ರರಂಗದ ಪ್ರಸ್ತುತ ಸೋಲಿನ ನೋವನ್ನು ...ಟ್ಟಿಗೆ ಶಮನಗೊಳಿಸಿದೆ.

'ಚಮ್ಕಾಯ್ಸಿ ಚಿಂದಿ ಉಡಾಯ್ಸಿ'ದ ಕೋಮಲ್



ಕೋಮಲ್ ಮೊನ್ನೆ ಒಂದು ವಿಶಿಷ್ಟವಾದ ಪತ್ರಿಕಾಗೋಷ್ಠಿಯನ್ನು ಕರೆದರು. ತಮ್ಮ ನಿರ್ಮಾಣದ 'ಚಮ್ಕಾಯ್ಸಿ ಚಿಂದಿ ಉಡಾಯ್ಸಿ' ಚಿತ್ರಕ್ಕಾಗಿ ದುಡಿದ ತಂತ್ರಜ್ಞರನ್ನು ಸನ್ಮಾನಿಸುವುದು ಮತ್ತು ಅವರನ್ನು ಪತ್ರಕರ್ತರಿಗೆ ಪರಿಚಯಿಸುವುದು ಆ ಗೋಷ್ಠಿಯ ಉದ್ದೇಶವಾಗಿತ್ತು. ಇದೊಂದು ಒಳ್ಳೆಯ ಬೆಳವಣಿಗೆ. ಸಾಧಾರಣವಾಗಿ ನಾಯಕ ನಾಯಕಿಯರನ್ನು ಮಾತ್ರ ಗೋಷ್ಠಿಗಳಲ್ಲಿ ಪರಿಚಯಿಸುವುದರಿಂದ ಕೋಮಲ್ ಅವರ ಈ ಕ್ರಮ ಎಲ್ಲರಿಗೂ ಇಷ್ಟವಾಯಿತು.

ಅಂದಿನ ಗೋಷ್ಠಿಯಲ್ಲಿ ನಿರ್ದೇಶಕ ಮಹಮದ್ ಗೌಸ್ ಯಾನೆ ಎ.ಆರ್. ಬಾಬು, ಸಂಗೀತ ನಿರ್ದೇಶಕ ಮಸ್ತ್ ಬಾಲಾಜಿ, ಛಾಯಾಗ್ರಾಹಕ ಅಶೋಕ್ ಕಶ್ಯಪ್, ನೃತ್ಯ ನಿರ್ದೇಶಕ ತ್ರಿಭುವನ್, ಗೀತರಚನೆಕಾರರಾದ ನಾಗೇಂದ್ರ ಪ್ರಸಾದ್, ಹೃದಯಶಿವ, ಕವಿರಾಜ್, ಸಾಹಸ ನಿರ್ದೇಶಕ ಡಿಫರೆಂಟ್ ಡ್ಯಾನಿ ಮೊದಲಾದವರೆಲ್ಲಾ ಹಾಜರಿದ್ದರು.

ಇವರನ್ನೆಲ್ಲಾ ಕೋಮಲ್ ಹೇಗೆ ಸನ್ಮಾನಿಸಿದರು ಗೊತ್ತಾ?

"ಸಂಗೀತ ನಿರ್ದೇಶಕ ಬಾಲಾಜಿ ಅವರಿಗೆ ಹಾಡಿನ ಟ್ಯೂನೇ ಬರುತ್ತಿರಲಿಲ್ಲ. ಆಗ ಅವರಿಗೆ ನೈಂಟಿ ಹಾಕಿಸಿದೆ.... ಆಗಲೇ ಅವರು ಒಳ್ಳೇ ಟ್ಯೂನ್ ಕೊಡಲು ಆರಂಭಿಸಿದರು" ಎಂದರು ಕೋಮಲ್.

"ನಾಗೇಂದ್ರ ಪ್ರಸಾದ್ ಹಾಡು ಬರೆಯಲು ಕುಳಿತುಕೊಂಡರೆ ಯಾವ ಹೊಸ ಯೋಚನೆಯೂ ಬರುತ್ತಿರಲಿಲ್ಲ. ಆವಾಗ ಮಾಣಿಕ್ ಚಂದ್ ಗುಟ್ಕಾ ತರಿಸಿಕೊಟ್ಟೆ. ಆನಂತರ ಅವರು ನಿರರ್ಗಳವಾಗಿ ಬರೆಯುತ್ತಾ ಹೋದರು. ಹೃದಯಶಿವ ಒಂದು ಒಳ್ಳೆಯ ಹಾಡು ಬರೆದರು. ಆದರೆ ಅದರಲ್ಲಿ ಬರೀ ಹಿಂದಿ ಮತ್ತು ಉರ್ದು ಸಾಹಿತ್ಯವೇ ಹೆಚ್ಚಾಗಿತ್ತು. ಬಹುಶಃ ನನ್ನ ಚಿತ್ರದ ನಿರ್ದೇಶಕ ಮಹಮದ್ ಗೌಸ್ ಆಗಿರುವುದರಿಂದ ಅವರನ್ನು ಮೆಚ್ಚಿಸಲು ಈ ತರಹದ ಸಾಲುಗಳನ್ನು ಅವರು ಬರೆದಿರಬಹುದು" ಎಂಬ ಗುಮಾನಿ ವ್ಯಕ್ತಪಡಿಸಿದರು.

"ನಿರ್ದೇಶಕ ಎ.ಆರ್. ಬಾಬು ಅವರನ್ನು ಯಾವಾಗಲೂ ಎ.ಆರ್. ರೆಹಮಾನ್ ಎಂದೇ ನಾನು ಕರೆಯುತ್ತಿದ್ದೆ. ಅವರೂ ಅಷ್ಟೆ ಎಣ್ಣೆ ಹಾಕಿದಾಗ ಸಿಕ್ಕಾಪಟ್ಟೆ ಆಕ್ಟಿವ್ ಆಗಿ ಕೆಲಸ ಮಾಡುತ್ತಿದ್ದರು."


"ಜಯಂತ್ ಕಾಯ್ಕಿಣಿ ಒಂದು ಹಾಡು ಬರೆಯಲು ಸಾಧಾರಣವಾಗಿ ಮೂರು ತಿಂಗಳು ಸಮಯ ತೆಗೆದುಕೊಳ್ಳುತ್ತಾರಂತೆ. ನಾನು ಹೆದರಿ ಹೆದರಿ ಅವರಿಗೆ ಒಂದು ಹಾಡು ಕೊಟ್ಟೆ. ಅವರು ಮೂರೇ ದಿನದಲ್ಲಿ ಹಾಡು ಬರೆದುಕೊಟ್ಟರು. ಬೇಜಾನ್ ಆಗಿ ಪ್ರೇಮಿಸು... ಎಂಬ ಸಾಲಿನ ಹಾಡನ್ನು ಕೊಟ್ಟರು. ಜಯಂತ್ ಕಾಯ್ಕಿಣಿಯಂಥ ಮನುಷ್ಯ ಈ ತರಹ 'ಬೇಜಾನ್ ಭಾಷೆ' ಬರೆಯುತ್ತಾರಾ ಎಂದು ಆಶ್ಚರ್ಯವಾಯಿತು" ಎನ್ನಲು ಕೋಮಲ್ ಮರೆಯಲಿಲ್ಲ.



ಚಿತ್ರದ ನಿರ್ಮಾಪಕ ಶ್ರೀನಿವಾಸ್ ಅವರು ಕೋಮಲ್ ಅವರ ಸ್ವಂತ ಭಾವ. ನಿರೂಪಣೆಯಲ್ಲಿ ಈ ಕೋಮಲ್ ಅವರನ್ನೂ ಕೂಡಾ ಛೇಡಿಸದೇ ಬಿಡಲಿಲ್ಲ. "ಈ ಹಿಂದೆ ನನ್ನ ಸಹೋದರ ಜಗ್ಗೇಶ್ ಅವರ ನಾಲ್ಕು ಚಿತ್ರಗಳನ್ನು ನಿರ್ಮಿಸಿದ್ದಾರೆ. ಆದರೆ ಎಲ್ಲೂ ಅವರ ಹೆಸರು ಮತ್ತು ಫೋಟೋ ಪತ್ರಿಕೆಗಳಲ್ಲಿ ಬರಲೇ ಇಲ್ಲ ಎಂದು ನನ್ನ ಅಕ್ಕ ಅಪಸ್ವರ ಎತ್ತಿದ್ದಾಳೆ. ಆದುದರಿಂದ ಈಗ ನಿರ್ಮಾಪಕರು ದಯವಿಟ್ಟು ಮಾತನಾಡಬೇಕು" ಎಂದು ಅವರನ್ನು ಆಹ್ವಾನಿಸಿದರು. ಕಳೆದ ಆರೇಳು ವರ್ಷಗಳಿಂದ ಅನಾರೋಗ್ಯಪೀಡಿತರಾಗಿದ್ದ ಶ್ರೀನಿವಾಸ್ ಒಂದೆರಡು ಮಾತುಗಳಲ್ಲೇ ಮಾತು ಮುಗಿಸಿದರು.

ಚಿತ್ರದ ಛಾಯಾಗ್ರಾಹಕ ಅಶೋಕ್ ಕಶ್ಯಪ್ ಬಗ್ಗೆ ಮಾತ್ರ ಅಂತಹ ಲೇವಡಿಯ ಮಾತು ಕೋಮಲ್ ಬಾಯಲ್ಲಿ ಬರಲಿಲ್ಲ. ಆದರೆ ಸ್ಟಂಟ್ ನಿರ್ದೇಶಕ ಡಿಫರೆಂಟ್ ಡ್ಯಾನಿ, ನೃತ್ಯ ನಿರ್ದೇಶಕ ತ್ರಿಭುವನ್, ಮೇಕಪ್ ಮ್ಯಾನ್ ಹನುಮಂತು.... ಹೀಗೆ ಎಲ್ಲರನ್ನೂ ತನ್ನ ಮಾತಿನ ರ್‍ಯಾಲಿಕ್‌ನಿಂದ ಕಾಲೆಳೆಯುತ್ತಾ ಪತ್ರಕರ್ತರಿಗೆ ಪರಿಚಯಿಸುತ್ತಾ ಹೋದರು. "ಇನ್ನು ಕೆಲವು ತಂತ್ರಜ್ಞರು ಹಾಜರಾಗಿಲ್ಲ ಆದರೆ ಅವರಿಗೆಲ್ಲಾ ನಾವು ಕೊಡಬೇಕಾದ ಸಂಭಾವನೆಯನ್ನು ಸಂಪೂರ್ಣವಾಗಿ ನೀಡಿದ್ದೇವೆ" ಎಂದು ಕೋಮಲ್ ಘೋಷಿಸಿದರು.

ಕೋಮಲ್ ತಮಾಷೆಯಾಗಿ ತುಂಬಾ ಸಂತೋಷದಿಂದಲೇ ಎಲ್ಲರನ್ನೂ ಪರಿಚಯಿಸಿದರು. ಕೋಮಲ್ ಮಾತು ಕಾಮಿಡಿಯಂತೆ ಕಂಡರೂ ಅದರಲ್ಲಿ ದ್ವೇಷ, ಅಸೂಯೆಗೆ ಜಾಗವಿರಲಿಲ್ಲ. ಆದರೂ ಪತ್ರಿಕಾಗೋಷ್ಠಿಯಲ್ಲಿ ತಂತ್ರಜ್ಞರನ್ನು ಈ ರೀತಿ ಕಾಲೆಳೆಯುವುದು ಎಷ್ಟು ಸರಿ ಎಂಬುದು ಬಗ್ಗೆಯಂತೂ ಚರ್ಚೆಯ ವಸ್ತುವಾಯಿತು. ಯಾಕೆಂದರೆ ಬಹುತೇಕ ಎಲ್ಲ ತಂತ್ರಜ್ಞರೂ ಕೋಮಲ್ ನಿರೂಪಣೆಯಿಂದಾಗಿ ಮುಖವನ್ನು ಸಿಂಡರಿಸಿಕೊಂಡು ಕೂತಿದ್ದರು. "ಈ ರೀತಿ ತಂತ್ರಜ್ಞರನ್ನು ಪರಿಚಯಿಸುವ ಬದಲು ನಮ್ಮ ಪಾಡಿಗೆ ನಮ್ಮನ್ನು ಬಿಟ್ಟುಬಿಡಿ" ಎಂದು ಅನಂತರ ಅವರೆಲ್ಲರೂ ಪತ್ರಕರ್ತರ ಬಳಿ ಗೊಣಗಿದರು ಕೂಡ. ಇದು ಕೋಮಲ್ ಕಿವಿಗೆ ಬಿದ್ದಿದೆಯೋ ಇಲ್ಲವೋ ಗೊತ್ತಿಲ್ಲ.



ಆರ್ಕುಟ್ಟು ಯಡವಟ್ಟು

ಅಮೂಲ್ ಬೇಬಿಗೆ ನಿಗಿನಿಗಿ ಸಿಟ್ಟು!

...ಇವತ್ತು ಎಲ್ಲರಿಗೂ ಅತ್ಯಗತ್ಯವೆಂಬಂತಾಗಿರುವ ...ರ್‌ನೆಟ್ಟು ಕೆಲವೊಮ್ಮೆ ಸಿನಿಮಾ ನಟನಟಿಯರನ್ನು ...ಕ ಇಕ್ಕಟ್ಟಿಗೆ ಸಿಲುಕಿಸಿಬಿಡುತ್ತದೆ, ಅವರ ಮಾನಸಿಕ ...ಯಿಂದ ನರಳುವಂತೆ ಮಾಡಿಬಿಡುತ್ತದೆ ಎಂಬುದಕ್ಕೆ ...ದರ್ಶನ ಇಲ್ಲಿದೆ.

...ವತ್ತು ಇಂಟರ್‌ನೆಟ್ಟನಲ್ಲಿ ಆರ್ಕುಟ್ ಎಂಬ ...ನಿಟಿ ವೆಬ್ ಸೈಟ್‌ಗೆ ಹೋಗಿ amulya ...lya ಎಂದು ಟೈಪ್ ಮಾಡಿದರೆ ...ಮ ಒಂಬೈನೂರ ಅರವತ್ತಾರು ಜನರ ... ಕಮ್ಯೂನಿಟಿ ಓಪನ್ ಆಗುತ್ತದೆ. ...ಲ್ಲಿ ಕನ್ನಡದ ಯುವ ನಟಿ ಅಮೂಲ್ಯ...ಯೊಂದಿಗೆ ಚಾಟ್ ಮಾಡಿದ ಹಾಗೆ ...ಸುಮಾರು ಎರಡು ಸಾವಿರದಷ್ಟು ...ಜುಗಳಿವೆ. ಅಮೂಲ್ಯಳ ಮನೆ ... ಆಕೆಯ ಸಿನಿಮಾ ವಿವರಗಳು, ...ಫೋಟೋಗಳನ್ನು ಆ ಸೈಟಿನಲ್ಲಿ ...ಾಕಿದೆಯಲ್ಲದೆ "I'm one of ...hild artists of Kannada movies. ...e now become a heroine at the ...f 14. My real name is Maulya. ...gh I'm known as Amulya in the ...ies. I was not very keen on ...ging my name, but I changed it ...use of director Narayan" ...ಪ್ಪದಿಯಾಗಿ ದಾಖಲಿಸಲಾಗಿದೆ.

...ಆದರೆ ತನ್ನ ಹೆಸರಿನಲ್ಲಿ ಆ ರೀತಿಯ arkut ...ಇದೆ ಎಂಬುದು ಸ್ವತಃ ಅಮೂಲ್ಯಳಿಗೇ ...ಲಿಲ್ಲ!

...ಯಾರೋ ಅಮೂಲ್ಯಳ ಹೆಸರಿನಲ್ಲಿ ಆರ್ಕುಟ್‌ನಲ್ಲಿ ... ಅಕೌಂಟ್ ತೆರೆದಿದ್ದಾರೆ. ಪ್ರತಿ ದಿನ ಅದಕ್ಕೆ ...ಟ್ ಆಗಿ ನೂರಾರು ಮಂದಿಗೆ ಅಮೂಲ್ಯಳೇ ಕಳುಹಿಸಿದ ಹಾಗೆ ಮೆಸೇಜುಗಳನ್ನು ಕಳುಹಿಸಿದ್ದಾರೆ. ಹೇಳಿಕೇಳಿ ಚಿತ್ರನಟಿಯರೆಂದರೆ ಮುಗಿಬೀಳುವ ನೂರಾರು ಜನ ಹುಡುಗರು ಸ್ವತಃ ಅಮೂಲ್ಯಳೇ ತಮ್ಮೊಂದಿಗೆ ಹರಟುತ್ತಿದ್ದಾಳೆ ಎಂದು ನಂಬಿ ಒಂದೇ ಸಮನೆ ಆಕೆಗೆ ಮೆಸೇಜುಗಳನ್ನು ಕಳುಹಿಸಿದ್ದಾರೆ. ಅದೆಷ್ಟೋ ಹುಡುಗರಂತೂ ದಿನವಿಡೀ ಕಂಪ್ಯೂಟರ್ ಮುಂದೆ ಕುಳಿತು 'ನಕಲಿ ಅಮೂಲ್ಯ'ಳ ಮೆಸೇಜಿಗಾಗಿ ಗಂಟೇಗಟ್ಟಲೇ ಕಾದಿದ್ದಾರೆ!!

ಬೆಳಕಿಗೆ ಬಂದಿದ್ದು



ದೀಪಕ್

ಅಮೂಲ್ಯಳ ಹೆಸರಿನಲ್ಲಿ ಇಷ್ಟು ದೊಡ್ಡ ಜಾಲವನ್ನು ನಿರ್ಮಿಸಿಕೊಂಡು, ಆಕೆಯ ಹೆಸರಿನಲ್ಲಿ ಸಾವಿರಾರು ಜನರಿಗೆ ಮೆಸೇಜು ಕಳಿಸುತ್ತಿರುವುದು ಮೊದಲಿಗೆ ಗೊತ್ತಾಗಿದ್ದು ಆತನ ಅಣ್ಣ ದೀಪಕ್‌ಗೆ. ಮೊನ್ನೆ ಒಂದು ದಿನ ದೀಪಕ್‌ನ ಗೆಳೆಯನೊಬ್ಬ ಬಂದು "ಏನ್ ಗುರೂ, ನಿನ್ನ ತಂಗಿ ಅಮೂಲ್ಯ ಎಲ್ಲಾರ್ಗೂ ಮೆಸೇಜ್ ಕಳಿಸ್ತಾಳೆ, ಗಂಟೆಗಟ್ಟಲೆ ಚಾಟ್ ಮಾಡ್ತಾಳೆ" ಎಂದಿದ್ದಾನೆ. ಈಗಷ್ಟೇ ಎಸ್ಸೆಸ್ಸೆಲ್ಸಿ ಮುಗಿಸಿರುವ ಅಮೂಲ್ಯಳಿಗೆ ಎಂಟನೇ ತರಗತಿಯಿಂದಲೂ ಓದುವುದಕ್ಕೂ ಪುರುಸೊತ್ತೇ ಸಿಗದಷ್ಟು ಸಿನಿಮಾ ಕಮಿಟ್‌ಮೆಂಟುಗಳಿರುವುದರಿಂದ ಸಹಜವಾಗಿಯೇ ದೀಪಕ್‌ಗೆ ಈ 'ಇಂಟರ್‌ನೆಟ್ ವ್ಯವಹಾರ'ದ ಬಗ್ಗೆ ಡೌಟು ಬಂದಿದೆ.





ತಕ್ಷಣ ಆರ್ಕುಟ್ ವೆಬ್‌ಸೈಟನ್ನು ಓಪನ್ ಮಾಡಿ ನೋಡಿದಾಗ ತನ್ನ ತಂಗಿ ಅಮೂಲ್ಯ ಕಳಿಸಿದಂತೇ ದಾಖಲಾಗಿರುವ ಸಾವಿರಾರು ಮೆಸೇಜುಗಳು ಗೋಚರಿಸಿವೆ. ತಕ್ಷಣ "ಇದು ಅಮೂಲ್ಯಳ ಅಕೌಂಟ್ ಅಲ್ಲ, ಆಕೆಯ ಹೆಸರಿನಲ್ಲಿ ಯಾರೋ ಕಿಡಿಗೇಡಿಗಳು ಮಾಡುತ್ತಿರುವ ತರಲೆ ಕೆಲಸ" ಎಂದು ಸ್ಪಷ್ಟೀಕರಣ ನೀಡಿದ್ದಾನೆ.

ಅದು ಸುದ್ದಿಯಾಗುತ್ತಿದ್ದಂತೇ ಇಷ್ಟು ದಿನ ನಟಿ ಅಮೂಲ್ಯಳೊಂದಿಗೆ ಚಾಟ್ ಮಾಡುತ್ತಿದ್ದೇವೆ ಎಂದು ಊರೆಲ್ಲ ಡಂಗೂರ ಬಾರಿಸಿಕೊಂಡು ಹಿರಿಹಿರಿ ಹಿಗ್ಗುತ್ತಿದ್ದ ಪಡ್ಡೆ ಹುಡುಗರು ಅದೇ ಅಮೂಲ್ಯಳ ಅದೇ ಇಂಟರ್‌ನೆಟ್ ವಿಳಾಸಕ್ಕೆ ಮೆಸೇಜು ಬಿಟ್ಟು ಕೆಟ್ಟಾಕೊಳಕ ಬೈದು, ಹಿಡಿಶಾಪ ಹಾಕುತ್ತಿದ್ದಾರೆ. ತನ್ನ ಹೆಸರಿನಲ್ಲಿ ಅಭಿಮಾನಿಗಳು ಇಷ್ಟು ದೊಡ್ಡ ಮಟ್ಟದಲ್ಲಿ ವಂಚನೆಗೆ ಒಳಪಟ್ಟಿರುವುದರಿಂದ ಅಮೂಲ್ ಬೇಬಿ ಅಮೂಲ್ಯ ಸಹ ಸಿಟ್ಟಿನಿಂದ ನಿಗಿನಿಗಿ ಎನ್ನುತ್ತಿದ್ದಾಳೆ.

ನಕಲಿ ಗೋಲ್ಡು, ಫೇಕ್ ಪೂಜಾ....

ಈ ರೀತಿ ನಟನಟಿಯರ ಹೆಸರಿನಲ್ಲಿ ನಕಲಿ ಐಡಿ ಓಪನ್ ಮಾಡುವ ಹುಚ್ಚು ಈಗ ಯಾವ ಮಟ್ಟ ತಲುಪಿದೆಯೆಂದರೆ, ಗೋಲ್ಡನ್ ಸ್ಟಾರ್ ಗಣೇಶ, ಗ್ಲಾಮರ್ ಬೆಡಗಿ ಪೂಜಾ ಗಾಂಧಿ, ರಮ್ಯಾ ಪುನೀತ್, ದರ್ಶನ್.... ಹೀಗೆ ಕನ್ನಡದ ಬಹುತೇಕ ಸ್ಟಾರ್‌ಗಳ ನಕಲಿ ಐಡಿಗಳು ಇಂಟರ್‌ನೆಟ್‌ನಲ್ಲಿ ಸ್ಥಾಪಿತಗೊಂಡು, ಅಮಾಯಕ ಅಭಿಮಾನಿಗಳನ್ನು ಸಲೀಸಾಗಿ ವಂಚಿಸುತ್ತಿವೆ. ಹಾಗೆಂದು ಎಲ್ಲ ನಟನಟಿಯರ ಐಡಿಗಳೂ ಬೋಗಸ್ ಏನಲ್ಲ. 'ನಂದ ನಂದಿತ' ಚಿತ್ರದ ನಾಯಕಿ ಜಿಂಕೆಮರಿ ಶ್ವೇತಾ, 'ಪ್ರೆತ್ತಿ ಲವ್ಸ್ ಪದ್ಮಾ'ದ ನಾಯಕ ಅಜಿತ್... ಹೀಗೆ ಕೆಲವರು ಅಸಲಿ ಅಕೌಂಟುಗಳನ್ನು ಹೊಂದಿದ್ದಾರೆ.

ಏನೇ ಇರಲಿ ಚಿತ್ರರಂಗದ ಜಂಜಾಟಗಳು, ಶೂಟಿಂಗು, ಡಬ್ಬಿಂಗು... ಎಂದು ತುರಿಸಿಕೊಳ್ಳೋದಕ್ಕೂ ಪುರುಸೊತ್ತಿಲ್ಲದೆ, ಮನೆ ಮಂದಿಯೊಂದಿಗೂ ವ್ಯವಹರಿಸಲು ಸಮಯವಿಲ್ಲದೇ ಒದ್ದಾಡುತ್ತಿರುವ ಬ್ಯುಸಿ ನಟರ ಹೆಸರುಗಳಲ್ಲಿ ನಡೆಯುತ್ತಿರುವ ಈ ನಕಲಿ ವೆಬ್ ಸ್ಪಾಟ್‌ಗಳನ್ನು ಮಟ್ಟ ಹಾಕದೇ ಇದ್ದಲ್ಲಿ ಮುಂದೆ ಈ ಸೆಲೆಬ್ರಿಟಿಗಳ ಹೆಸರಿನಲ್ಲಿ ಏನಾದರೂ ಅನಾಹುತಗಳು ಸಂಭವಿಸಿದರೆ ಅವರು ತಮ್ಮದಲ್ಲದ ತಪ್ಪಿಗೆ ಬಲಿಪಶುಗಳಾಗುವ ಸಂದರ್ಭ ಒದಗಿಬಂದರೂ ಆಶ್ಚರ್ಯವಿಲ್ಲ. ಮಾತ್ರವಲ್ಲ ತಮ್ಮ ಆರಾಧ್ಯ ನಟ/ನಟಿಯರೊಂದಿಗೆ ಹರಟಬೇಕು ಎಂದು ಬಯಸುವ ಎಷ್ಟೋ ಜನ ಯುವ ಮನಸ್ಸುಗಳು ಇಂಥ ಅಸಂಬದ್ಧ ವೆಬ್‌ಸೈಟುಗಳ ಮುಂದೆ ಕುಳಿತು ತಮ್ಮ 'ಅಮೂಲ್ಯ'ವಾದ ಸಮಯವನ್ನು ಹಾಳುಮಾಡುವುದು ತಪ್ಪುತ್ತದೆ.

● ಅರುಣ್.ಜಿ



Regd.No.KA/RNP/BGS/2036/2008-10 Posted at : Basavanagudi, B'lore-4. R B P LANKESH, Kannada Weekly Price Rs. 12/- 15-07-2009 RNI No. KARKAN2005/

ಶಿಷ್ಯ 'ರತ್ನ'ನಿಗೆ ಗುರು ಬೋಧನೆ!

ತನ್ನ ಪಟ್ಟದ ಶಿಷ್ಯ ರತ್ನಜ ಪರವಾಗಿ ಸಂಗೀತ ನಿರ್ದೇಶಕ ಹಂಸಲೇಖ ಪತ್ರಕರ್ತರಲ್ಲಿ ಕ್ಷಮೆ ಕೇಳಿದ ಅಪರೂಪದ ಪ್ರಸಂಗ ಮೊನ್ನೆ ನಡೆಯಿತು.



ರತ್ನಜ

'ಪ್ರೇಮಿಸಂ' ಎಂಬ ತನ್ನ ಹೊಸ ಚಿತ್ರದ ಬಗ್ಗೆ ವಿವರಣೆ ನೀಡಲು ನಿರ್ದೇಶಕ ರತ್ನಜ ಮತ್ತು ನಿರ್ಮಾಪಕ ಅಜಯ್ ಗೌಡ ಪತ್ರಿಕಾಗೋಷ್ಠಿ ಕರೆದಿದ್ದರು. ನಿಮಗಿದು ನೆನಪಿರಬಹುದು, ಈ ಜೋಡಿ 'ನೆನಪಿರಲಿ' ಚಿತ್ರದ ಮೂಲಕ ಸಿನಿಮಾರಂಗಕ್ಕೆ ನಿರ್ದೇಶಕ-ನಿರ್ಮಾಪಕರಾಗಿ ಪರಿಚಿತರಾದವರು. ಅದಾದನಂತರ 'ಹೊಂಗನಸು' ಎಂಬ ಚಿತ್ರವನ್ನು ಈ ಜೋಡಿ ಮಾಡಿತ್ತು. 'ಪ್ರೇಮಿಸಂ' ಈ ಜೋಡಿಯ ಮೂರನೇ ಚಿತ್ರ. ಅಂದಹಾಗೆ ಈ ಮೂರೂ ಚಿತ್ರಗಳಿಗೆ ಹಂಸಲೇಖ ಅವರದ್ದೇ ಸಂಗೀತ-ಸಾಹಿತ್ಯದ ಸಾರಥ್ಯ. ಅಲ್ಲಿಗೆ ಈ ತ್ರಿಮೂರ್ತಿಗಳು ಒಟ್ಟು ಸೇರಿ ಹ್ಯಾಟ್ರಿಕ್ ಬಾರಿಸಿದ್ದಾರೆ ಎನ್ನಬಹುದು.

'ನೆನಪಿರಲಿ' ಚಿತ್ರ ವಿಮರ್ಶಕರಿಂದ ಪ್ರಶಂಸೆಗೆ ಒಳಗಾಯಿತು. ಆದರೆ ಆನಂತರ ಬಂದ 'ಹೊಂಗನಸು' ಚಿತ್ರವನ್ನು ಅದೇ ವಿಮರ್ಶಕರು ಅಡ್ಡಾದಿಡ್ಡಿಯಾಗಿ ತೆಗಳಿದ್ದರು. ಆಗ ರತ್ನಜ ವಿಮರ್ಶಕರ ಮೇಲೆ ಸಿಟ್ಟುಗೊಂಡು ಏನೇನೋ ಪತ್ರಿಕಾ ಹೇಳಿಕೆಗಳನ್ನು ನೀಡಿದ್ದರಲ್ಲದೆ "ವಿಮರ್ಶಕರ ಮಾತು ಕೇಳಿ ಯಾರೂ ಥಿಯೇಟರಿಗೆ ಬರುವುದಿಲ್ಲ, ಚಿತ್ರ ನೋಡುವ ಪ್ರೇಕ್ಷಕರೇ ಬೇರೆ" ಎಂದೆಲ್ಲ ಬೊಬ್ಬೆ ಹಾಕಿದ್ದರು. ಅಷ್ಟೇ ಅಲ್ಲದೆ ಜಾಹೀರಾತುಗಳನ್ನೂ ನೀಡಿ ಅವುಗಳಲ್ಲಿ "ವಿಮರ್ಶೆ-ವಿಮರ್ಶಕರೇ ಸರಿಯಿಲ್ಲ... ನಮ್ಮ ಚಿತ್ರ ತುಂಬಾ ಚೆನ್ನಾಗಿದೆ" ಎಂಬಿತ್ಯಾದಿಯಾಗಿ ಪ್ರಕಟಿಸಿದ್ದರು. ಅವರು ಇಂತಹ ಅದೆಷ್ಟೇ ಸರ್ಕಸ್ ಮಾಡಿದರೂ 'ಹೊಂಗನಸು' ಚಿತ್ರ ಎರಡೇ ವಾರಕ್ಕೆ ಥಿಯೇಟರಿನಿಂದ ಎತ್ತಂಗಡಿಯಾಗಿತ್ತು. ಅಜಯ್ ಗೌಡನಿಗೆ ಸಿಕ್ಕಾಪಟ್ಟೆ ನಷ್ಟವಾಯಿತು; ರತ್ನಜಗೆ ಭ್ರಮನಿರಸನವಾಯಿತು.



ಹಂಸಲೇಖ

ಇದನ್ನೆಲ್ಲಾ ಮೊನ್ನೆ ಪತ್ರಕರ್ತರು ಪ್ರಸ್ತಾಪಿಸಿ ರತ್ನಜ ತನ್ನ ಕ್ಷಮೆ ಕೇಳಬೇಕೆಂದು ಒತ್ತಾಯಿಸಿದರು. ಆ ಚಿತ್ರಕ್ಕೆ ಹಣ ಹಾಕಿ ಕೈಸುಟ್ಟುಕೊಂಡಿದ್ದ ನಿರ್ಮಾಪಕ ಅಜಯ್ ಗೌಡ ಕ್ಷಮೆ ಕೋರಿದರೂ ರತ್ನಜ ಮಾತ್ರ ಅದ್ದಗೋಡೆ ಮೇಲೆ ದೀಪವಿಟ್ಟಂತೆ ಹಾರಿಕೆಯ ಉತ್ತರ ನೀಡಿದರು. ಆಗ ಮಾತನಾಡಲು ಎದ್ದುನಿಂತ ರತ್ನಜ ಅವರ ಗುರು ಹಂಸಲೇಖ ಅಲ್ಲೇ ಇದ್ದ ರತ್ನಜರನ್ನು ಯದ್ವಾತದ್ವಾ ಬೈದು ಬೆಂಡೆತ್ತಿದರು. ಅಷ್ಟೇ ಅಲ್ಲ, ತನ್ನ ಶಿಷ್ಯನ ದುರ್ವರ್ತನೆಗಾಗಿ ಮಾಧ್ಯಮದವರ ಕ್ಷಮೆ ಕೇಳಿದರು. ಹಾಗೆಯೇ "ಇನ್ನು ಮುಂದೆ ನನ್ನ ಪಟ್ಟದ ಶಿಷ್ಯ ಆ ರೀತಿ ನಡೆದುಕೊಳ್ಳದಂತೆ ನಾನು ಭರವಸೆ ನೀಡುತ್ತೇನೆ" ಎಂದು ಘೋಷಿಸಿದರು.

ಹಂಸಲೇಖರಂತಹ ಹಿರಿಯ ಸಂಗೀತ ನಿರ್ದೇಶಕ ಇಷ್ಟೊಂದು ಭಾವುಕರಾಗಿ ಮಾತನಾಡಿದಾಗ ಪತ್ರಕರ್ತರ ಕೋಪವೆಲ್ಲಾ ಮಾಯವಾಗಿಹೋಯಿತು. "ನನ್ನ ನಿಂಬೆ ಹಣ್ಣು ಹಾಡಿನಿಂದ ಹಿಡಿದು ನೂರಾರು ಹಾಡುಗಳಿಗೆ ಪತ್ರಕರ್ತರು ಕ್ಯಾತೆ ತೆಗೆದಿದ್ದಾರೆ, ಬಹುಶಃ ಹತ್ತು ಹದಿನೈದು ಚಿತ್ರಗಳಾದ ನಂತರವೇ ಪತ್ರಕರ್ತರು ನನ್ನ ಸಾಹಿತ್ಯ ಸಂಗೀತವನ್ನು ಗುರುತಿಸಿ ಪ್ರಶಂಸಿಸಲಾರಂಭಿಸಿದ್ದು. ಹೀಗಾಗಿ ಪತ್ರಕರ್ತರ ಟೀಕೆ, ಟಿಪ್ಪಣಿ ಮತ್ತು ಪ್ರಶಂಸೆಯನ್ನು ಮುಕ್ತ ಮನೋಭಾವದಿಂದ ಸ್ವೀಕರಿಸಬೇಕು" ಎಂದು ಹಂಸಲೇಖ ತಮ್ಮ ಶಿಷ್ಯನಿಗೆ ಪತ್ರಿಕಾ ಗೋಷ್ಠಿಯಲ್ಲೇ ಬುದ್ಧಿವಾದ ಹೇಳಿದರು.

"ನನ್ನ ಶಿಷ್ಯರ ಅತೀವವಾದ ಪ್ರೀತಿ, ಸಿಟ್ಟು ಮತ್ತು ಅಭಿಮಾನ ಇವೆಲ್ಲವುಗಳಿಂದ ನನಗೆ ಸಾಕಾಗಿಹೋಗಿದೆ. ಇವರಿಗೆಲ್ಲಾ ಬುದ್ಧಿವಾದ ಹೇಳುವುದರಲ್ಲೇ ನನ್ನ ಶಕ್ತಿ ವ್ಯಯವಾಗುತ್ತಿದೆ" ಎಂದೂ ಹಂಸ್ ಪತ್ರಕರ್ತರಲ್ಲಿ ತಮ್ಮ ಕಷ್ಟವನ್ನು ತೋಡಿಕೊಂಡರು.


'ಪ್ರೇಮಿಸಂ' ಚಿತ್ರದ ಬಗ್ಗೆ ಮಾತನಾಡಿದ ರತ್ನಜ "ಮೊದಲ ಚಿತ್ರವನ್ನು ಲವ್ಲಿಯಾಗಿ ಮಾಡಿದ್ದೆ. ಎರಡನೆ ಚಿತ್ರವನ್ನು ಹೆವಿ ಹಾರ್ಟೆಡ್ ಆಗಿ ಮಾಡಿದೆ. ಈ ಚಿತ್ರವನ್ನು ಲೈಟ್ ಹಾರ್ಟೆಡ್ ಆಗಿ ಮಾಡಿದ್ದೇನೆ" ಎಂದು ಪ್ರಾಸಬದ್ಧವಾಗಿ ನುಡಿದರು.

ನಿಖಿತಾಗೆ ನಖರಾ ಮಾಡಿದ ಓಂ



ಓಂ ಪ್ರಕಾಶ್ ನಿರ್ದೇಶನದ, ದರ್ಶನ್ ಅಭಿನಯದ 'ಯೋಧ' ಚಿತ್ರ ತುಂಬಿದ ಗೃಹಗಳಲ್ಲಿ ಪ್ರದರ್ಶನವನ್ನು ಕಾಣುತ್ತಿದೆ. ಈ ಚಿತ್ರದಲ್ಲಿ ಓಂ ಪ್ರಕಾಶ್ ತನ್ನ ನೆಚ್ಚಿನ ನಾಯಕಿ ರಕ್ಷಿತಾಳ ಒಂದು ಚಿಕ್ಕ ತುಣುಕನ್ನು ತೋರಿಸಿ ಆಕೆಯ ಮೇಲಿರುವ ತನ್ನ ಪ್ರೀತಿ ಮತ್ತು ಅಭಿಮಾನವನ್ನು ವ್ಯಕ್ತಪಡಿಸಿದ್ದಾರೆ.

ಅದಕ್ಕಿಂತಲೂ ಮುಖ್ಯವಾದ ಸುದ್ದಿ ಏನೆಂದರೆ, ನಾಯಕಿ ನಿಖಿತಾಳಲ್ಲಿ ಓಂ ಪ್ರಕಾಶ್ ರಕ್ಷಿತಾಳನ್ನು ಕಾಣಲು ಹೊರಟಿರುವುದು. ರಕ್ಷಿತಾಳ ಜೊತೆ ಸಲುಗೆಯಿಂದ ಮಾತನಾಡುತ್ತಾ ಆಟವಾಡುತ್ತಿದ್ದ ಓಂ ಪ್ರಕಾಶ್ ಅದೇ ಆಟವನ್ನು ನಿಖಿತಾಳ ಜೊತೆ ಮುಂದುವರೆಸಿದ್ದರಂತೆ. ಇದರಿಂದ ಅಸಹ್ಯಗೊಂಡ ನಿಖಿತಾ ಓಂ ಪ್ರಕಾಶ್ ಆಟವನ್ನು ಸಹಿಸಲಾರದೇ ಕೊನೆಗೆ ಹೆಡ್ ಆಫೀಸಿನವರಿಗೆ ದೂರು ನೀಡಿದಳಂತೆ. ಆನಂತರ ಓಂ ಪ್ರಕಾಶ್ ತಣ್ಣಗಾದರಂತೆ. ಹೀಗಾಗಿ ಓಂ ಪ್ರಕಾಶ್ ಚಿತ್ರದಲ್ಲಿ ಇನ್ನು ಮುಂದೆ ನಿಖಿತಾ ಎಂಬ ರಸಪೂರಿ ಹಣ್ಣು ಕಾಣಿಸಿಕೊಳ್ಳುವ ಸಾಧ್ಯತೆ ಬಹಳ ಕಡಿಮೆ ಎನ್ನುತ್ತಿದೆ ಗಾಂಧಿನಗರ.




ಪೋರಿ ಪ್ರಜ್ಞಾ ರಪೋರಿ ಅಂದ್ರಿತಾ

ಕನ್ನಡದ ಒಬ್ಬಳು ಪೋರಿ ಮತ್ತು ಕನ್ನಡಕ್ಕೆ ಹೊರಗಿನಿಂದ ಬಂದಿರುವ ಮತ್ತೊಬ್ಬಳು ರಪೋರಿ ಬಗ್ಗೆ ಇಲ್ಲಿ ಪುಟ್ಟ ಟಿಪ್ಪಣಿ ಇದೆ. ಒಬ್ಬಳು ಮೈಸೂರಿನ ಪ್ರಜ್ಞಾ ಎಂಬ ಮುದ್ದುಮುಖದ ಹುಡುಗಿ. ಮತ್ತೊಬ್ಬಳು ಪರಭಾಷೆಯಿಂದ ಬಂದಿರುವ ಅಂದ್ರಿತಾ ರೇ ಎಂಬ ಬೋಲ್ಡ್ ಹುಡುಗಿ.

ಕನ್ನಡದ ಪೋರಿ ಪ್ರಜ್ಞಾಳ ಕೆರಿಯರ್ ಗ್ರಾಫ್ ಕುತೂಹಲಕಾರಿಯಾಗಿದೆ. ಈಕೆ ಎಂಟನೇ ಕ್ಲಾಸ್‌ನಲ್ಲಿದ್ದಾಗ 'ಕೈವಾರ ತಾತಯ್ಯ' ಎಂಬ ಚಿತ್ರದಲ್ಲಿ ಬಾಲನಟಿಯಾಗಿ ಕಾಣಿಸಿಕೊಂಡು ಗಮನ ಸೆಳೆದಿದ್ದಳು. ಈ ಪುಟ್ಟ ಹುಡುಗಿ ಒಂಭತ್ತನೇ ಕ್ಲಾಸಿಗೆ ಕಾಲಿಡುವಷ್ಟರಲ್ಲಿ 'ಬಾಬಾ' ಚಿತ್ರಕ್ಕೆ ನಾಯಕಿಯಾಗಿ ಬಡ್ತಿ ಪಡೆದಳು. ಒಂಭತ್ತನೇ ಕ್ಲಾಸಿನ ಅಂತಿಮ ದಿನಗಳಲ್ಲಿ ಫಣಿ ರಾಮಚಂದ್ರ ನಿರ್ದೇಶನದ 'ಗಣೇಶ ಮತ್ತೆ ಬಂದ' ಚಿತ್ರದಲ್ಲಿ ವಿಜಯ ರಾಘವೇಂದ್ರರ ಜೊತೆ ನಟಿಸಿ ಎಲ್ಲರ ಮನಸ್ಸು ಗೆದ್ದಳು. ಇದೀಗ ಹತ್ತನೇ ಕ್ಲಾಸು ಮುಗಿಸಿರುವ ಪ್ರಜ್ಞಾ ಈಗ ತೆರೆ ಕಂಡಿರುವ 'ಪ್ರೀತ್ಸೆ ಪ್ರೀತ್ಸೆ'ಯಲ್ಲಿ ನಾಯಕಿಯಾಗಿ ಮಿಂಚಿದ್ದಾಳೆ. ಇಷ್ಟಕ್ಕೆ ಪ್ರಜ್ಞಾ ಸುಮ್ಮನೇ ಕುಳಿತಿಲ್ಲ, ಸದ್ಯದಲ್ಲೇ ಆಕೆ ಕಾಲೇಜು ಮೆಟ್ಟಿಲು ಏರುವ ಮೊದಲು ಒಂದು ತಮಿಳು ಚಿತ್ರದಲ್ಲಿ ನಟಿಸಿ ಬರುವ ಮಾತು ಕೇಳಿಬರುತ್ತಿದೆ. ಅದರ ಜೊತೆ ಜೊತೆಗೆ ಪ್ರಜ್ಞಾ ವಿದ್ಯಾಭ್ಯಾಸಕ್ಕೆ ಗುಡ್ ಬೈ ಹೇಳುವ ಸಾಧ್ಯತೆಯೂ ಕೇಳಿಬರುತ್ತಿದೆ.

ಈ ಮಧ್ಯೆ ಪ್ರಜ್ವಲ್ ಜೊತೆ ಪ್ರಜ್ಞಾ ನಟಿಸಿರುವ 'ಕೆಂಚ' ಚಿತ್ರ ಮುಂದಿನ ವಾರ ತೆರೆಕಾಣಲಿದೆ. ಹಾಗೆಯೇ 'ದುನಿಯಾ' ವಿಜಯ್ ಜೊತೆ 'ದೇವ್ರು' ಚಿತ್ರದಲ್ಲಿ, ಮಹೇಶ್ ಸುಖಧರೆ ನಿರ್ದೇಶನದ 'ಮಳೆಬಿಲ್ಲೇ' ಚಿತ್ರಗಳಲ್ಲಿಯೂ ಈಕೆ ನಾಯಕಿಯಾಗಿ ನಟಿಸಿದ್ದಾಳೆ. ಈ ಮೂರು ಚಿತ್ರಗಳಲ್ಲಿ ಯಾವುದಾದರೂ ಒಂದು ಚಿತ್ರ ಗೆದ್ದರೂ ಆಕೆ ಬೇಡಿಕೆಯ ನಟಿಯಾಗಿ ಗಾಂಧಿನಗರದಲ್ಲಿ ಅವಕಾಶ ಗಿಟ್ಟಿಸುವ ಸಾಧ್ಯತೆಯಿದೆ.



ಪ್ರಜ್ಞಾ



ಬೊಗಸೆ ಕಂಗಳ ಈ ನಾಯಕಿ ಇನ್ನೂ ಅಷ್ಟೇನೂ ಲೈಮ್ ಲೈಟಿಗೆ ಬಂದಿಲ್ಲದಿದ್ದರೂ ಸದ್ಯದಲ್ಲೇ ಬಿಡುಗಡೆಯಾಗಲಿರುವ ಚಿತ್ರಗಳಿಂದ ತನಗೆ ತಾರಾ ವರ್ಚಸ್ಸು ಮತ್ತು ಅದೃಷ್ಟ ಖುಲಾಯಿಸಲಿದೆ ಎಂದು ನಂಬಿದ್ದಾಳೆ. ತನ್ನ ಇಷ್ಟದ ನಟಿ ಸೌಂದರ್ಯಾ ತರಹ ತಾನು ಕೂಡಾ ಕನ್ನಡ ಮತ್ತು ತಮಿಳು ಚಿತ್ರರಂಗದಲ್ಲಿ ಭದ್ರವಾಗಿ ತಳವೂರುವ ಕನಸು ಕಾಣುತ್ತಿದ್ದಾಳೆ. ಆಕೆಯ ಕೆರಿಯರ್‌ಗ್ರಾಫ್ ನೋಡಿದರೆ ಪ್ರಜ್ಞಾ ಕನಸು ನಿಜವಾದರೂ ಆಶ್ಚರ್ಯವಿಲ್ಲ.

ಈಗ ರಪೋರಿ ಬಗ್ಗೆ. ಅಂದ್ರಿತಾ ರೇ ಸದ್ಯಕ್ಕೆ ಕನ್ನಡ ಚಿತ್ರರಂಗದ ಅತ್ಯಂತ ಹಾಟ್ ನಾಯಕಿಯೆಂದು ಹೇಳಬಹುದು. ಸ್ಕೂಟಿ ಬೈಕಿನ ಮಾಡೆಲ್ ಆಗಿದ್ದ ಹದಿನಾರರ ಈ ಹುಡುಗಿ ಕನ್ನಡ ಚಿತ್ರರಂಗಕ್ಕೆ ಬಂದಿದ್ದು ಮಹೇಶ್ ಬಾಬು ನಿರ್ದೇಶನದ 'ಮೆರವಣಿಗೆ' ಚಿತ್ರದ ಮುಖಾಂತರ. ಆದರೆ ಆಕೆ ಏಕ್‌ದಂ ಲೈಮ್ ಲೈಟಿಗೆ ಬಂದಿದ್ದು 'ಜಂಗ್ಲಿ' ಚಿತ್ರದ 'ಹಳೆ ಪಾತ್ರೆ... ಹಾಡಿನ ಮುಖಾಂತರ. ಅದರಲ್ಲಿ ನಿರ್ದೇಶಕ ಸೂರಿ ಈ ಹದಿನಾರರ ಹುಡುಗಿಯ ದೇಹ ಸೌಂದರ್ಯವನ್ನು ಕನ್ನಡ ಚಿತ್ರರಂಗದ ಪ್ರೇಕ್ಷಕರಿಗೆ ಚೆನ್ನಾಗಿ ಉಣಿಸಿದರು. 'ದುನಿಯಾ' ಖ್ಯಾತಿಯ ಕರಿಯ ವಿಜಯ್ ಜೊತೆ ಈ ಬೆಳದಿಂಗಳ ಬಾಲೆ ತನ್ನ ಕಟ್ಟುಮಸ್ತಾದ ತೊಡೆ ಮತ್ತು ಮಾದಕ ದೇಹಸೌಂದರ್ಯದೊಂದಿಗೆ ಕುಣಿದು ಕುಪ್ಪಳಿಸಿ ಎಲ್ಲರನ್ನೂ ಬೆಚ್ಚಿಬೀಳಿಸಿದಳು. ಅಷ್ಟೇ ಅಲ್ಲ, ಆ ಚಿತ್ರದ ಮಳೆಯಲ್ಲಿ ತೊಯ್ದು ಹಿಂದಿಯ ನಾಯಕಿಯರನ್ನೇ ನಾಚಿಸುವಂತೆ ಅಂದ್ರಿತಾ ರೇ ತನ್ನ ಮೈಮಾಟವನ್ನು ಯಾವುದೇ ಅಳುಕಿಲ್ಲದೇ ಪ್ರದರ್ಶಿಸಿದ್ದಳು.

ಅಂದ್ರಿತಾ ರೇ ಬಗ್ಗೆ ಇಷ್ಟೆಲ್ಲಾ ಕಥೆ ಹೇಳಲು ಕಾರಣವೇನೆಂದರೆ, ಸದ್ಯದಲ್ಲೇ ಬರಲಿರುವ ಯೋಗರಾಜ್ ಭಟ್ ನಿರ್ದೇಶನದ 'ಮನಸಾರೆ' ಚಿತ್ರದ ಸ್ಟಿಲ್ಸ್‌ಗಳನ್ನು ನೋಡಿದರೆ 'ಜಂಗ್ಲಿ' ಚಿತ್ರದ ದೃಶ್ಯಗಳೇ ವಾಸಿ ಎನಿಸುತ್ತದೆ. ಅಷ್ಟೊಂದು ಮಾದಕವಾಗಿ ಈಕೆ ಈ ಸ್ಟಿಲ್ಲುಗಳಲ್ಲಿ ಕಾಣಿಸಿಕೊಂಡಿದ್ದಾಳೆ. ಪಡ್ಡೆ ಹುಡುಗರ ನಿದ್ದೆಯನ್ನು ಈ ರಪೋರಿ ಮತ್ತಷ್ಟು ಕೆಡಿಸುವುದು ಗ್ಯಾರೆಂಟಿ. ಅಷ್ಟೇ ಅಲ್ಲ, ಕನ್ನಡದ ನಾಯಕಿಯರು ಕೂಡಾ ಈಕೆಯ ಬಗ್ಗೆ ಅಸೂಯೆ ಪಡುವಷ್ಟು ಈ ಹುಡುಗಿ ಗ್ಲಾಮರಸ್ ಆಗಿ 'ಮನಸಾರೆ'ಯಲ್ಲಿ ಕಾಣಿಸಿಕೊಂಡಿದ್ದಾಳೆ. ಈಕೆ ಎಷ್ಟೊಂದು ಬೋಲ್ಡ್ ನಟಿಯೆಂದರೆ ಅಮೃತಮಹೋತ್ಸವ ಕಾರ್ಯಕ್ರಮದ ಸಂದರ್ಭದಲ್ಲಿ ಕುಡಿದು ವಾಂತಿ ಮಾಡಿ ಸುದ್ದಿಯಾದ ಕೆಲವು ನಾಯಕಿಯರಲ್ಲಿ ಈಕೆ ಕೂಡಾ ಒಬ್ಬಳು ಎಂಬುದೇ ವಿಶೇಷ.

ಸದ್ಯದ ಮಟ್ಟಿಗೆ ಪ್ರಜ್ಞಾ ಮತ್ತು ಅಂದ್ರಿತಾ ರೇ ಗಾಂಧಿನಗರದಲ್ಲಿ ಚಾಲ್ತಿಯಲ್ಲಿರುವ ಮತ್ತು ಸುದ್ದಿಯಲ್ಲಿರುವ ನಾಯಕಿಯರು. ಹದಿನಾರರ ಈ ಪೋರಿಯರು ಮುಂದಿನ ದಿನಗಳಲ್ಲೂ ಇನ್ನಷ್ಟು ರಂಗುರಂಗಿನ ಕಥೆ ಮತ್ತು ಪಾತ್ರಗಳ ಮುಖಾಂತರ ಪ್ರೇಕ್ಷಕರನ್ನು ಮತ್ತು ಗಾಸಿಪ್ ಪ್ರಿಯರನ್ನು ರಂಜಿಸುವ ಎಲ್ಲ ಸಾಧ್ಯತೆಗಳೂ ನಿಚ್ಚಳವಾಗಿ ಕಾಣಿಸುತ್ತಿವೆ.

■ಶೆಣೈ

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44